# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 9 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 292 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಮುಖ್ಯಮಂತ್ರಿ ಸಿದ್ದರಾಮಯ್ಯರ ಜನಸ್ಪಂದನ

# ಹರಿದು ಬಂದವು ಸಾವಿರಾರು ಅಹವಾಲು

■ಕೆಲವಕ್ಕೆ ಸ್ಥಳದಲ್ಲೇ ಪರಿಹಾರ ಭಾಗ್ಯ ■ಉಳಿದವುಗಳಿಗೆ ತಿಂಗಳ ಕಾಲಾವಕಾಶ ■ಸಹಾನುಭೂತಿಯಿಂದ ಸಂಕಷ್ಟ ಆಲಿಸಿದ ಮುಖ್ಯಮಂತ್ರಿಗಳು ■ದೂರ ದೂರಿಂದ ಬಂದವರಿಗೆ ಸಾರಿಗೆ, ನೀರು, ಊಟೋಪಚಾರ ವ್ಯವಸ್ಥೆ

ಬೆಂಗಳೂರು, ಫೆ.8–ಮುಖ್ಯಮಂತ್ರಿ ಸಿದ್ದರಾಮಯ್ಯನವರು ಗುರುವಾರ ವಿಧಾನ ಸೌಧದ ಮುಂದೆ ಸುದೀರ್ಘ 8 ಗಂಟೆಗಳ ಕಾಲ ನಡೆಸಿದ ಜನಸ್ಪಂದನ ಕಾರ್ಯಕ್ರಮಕ್ಕೆ ಸಮಸ್ಯೆಗಳ ಸಾಗರವೇ ಹರಿದು ಬಂತು. ಕೆಲ ವೃದ್ಧರು, ವಿಕಲಚೇತನರು, ವಿಧವೆಯರು, ಮಹಿಳೆಯರು, ಕಾರ್ಮಿಕರು ಕಣ್ಣೀರ ಕೋಡಿಯನ್ನೇ ಹರಿಸಿದ್ದು, ಮುಖ್ಯಮಂತ್ರಿಗಳು ಕೆಲವೊಮ್ಮೆ ಭಾವುಕರಾದ ಸನ್ನಿವೇಶವು ಸೃಷ್ಟಿಯಾಯಿತು. ಸಮಸ್ಯೆ ಹೊತ್ತು ಬಂದ ಎಲ್ಲರಿಗೂ ಪರಿಹಾರದ ಗ್ಯಾರಂಟಿ ನೀಡಿದ ಸಿದ್ದರಾಮಯ್ಯ, ಕೆಲವರ ಸಮಸ್ಯೆಯನ್ನು ಸ್ಥಳದಲ್ಲೇ ಪರಿಹರಿಸಿ, ಅವರ ಮೊಗದಲ್ಲಿ ನಗು ತಂದರು.

ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ನಡೆದ ಇಂದಿನ ಜನಸ್ಪಂದನ ಕಾರ್ಯಕ್ರಮದಲ್ಲಿ 20 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದು, ಒಟ್ಟು 12,372 ಅರ್ಜಿಗಳು ಸಲ್ಲಿಕೆಯಾದವು. ಅದರಲ್ಲಿ 246 ಅರ್ಜಿಗಳಿಗೆ ಸ್ಥಳದಲ್ಲೇ ಮುಖ್ಯಮಂತ್ರಿಗಳು ಪರಿಹಾರ ಕಲ್ಪಿಸಿದರು. ಇನ್ನುಳಿದ 12,126 ಅರ್ಜಿಗಳನ್ನು ತಿಂಗಳೊಳಗೆ ಇತ್ಯರ್ಥಪಡಿಸಬೇಕೆಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಇಂದಿನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಜನರ ಬಳಿಗೆ ತಾವೇ ತೆರಳಿ ಅಹವಾಲು ಸ್ವೀಕರಿಸಿದ್ದು ವಿಶೇಷವಾಗಿತ್ತು. ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಜ್ಯದ ವಿವಿಧೆಡೆಯಿಂದ ಸಾವಿರಾರು ಮಂದಿ ರಾಜಧಾನಿ ಬೆಂಗಳೂರಿಗೆ ಕಳೆದ ರಾತ್ರಿಯೇ ಆಗಮಿಸಿ, ಕಾದು ●9ನೇ ಪುಟಕ್ಕೆ







### ಅಹವಾಲುಗಳಿಗೆ ತಿಂಗಳಲ್ಲಿ ಪರಿಹಾರ ಕಲ್ಪಿಸಿ

- ಕಾನೂನು ತೊಡಕಿದ್ದಲ್ಲಿ ಸೂಕ್ತ ಟಿಪ್ಪಣಿಯೊಂದಿಗೆ ಹಿಂಬರಹ ನೀಡಿ
- ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ

ಬೆಂಗಳೂರು, ಫೆ.8–ರಾಜ್ಯ ಮಟ್ಟದ ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕರಿಸಲಾದ ಅರ್ಜಿಗಳನ್ನು ತಿಂಗಳ ಒಳಗಾಗಿ ವಿಲೇವಾರಿ ಮಾಡಬೇಕು. ಎಲ್ಲಾ ಸಮಸ್ಯೆಗಳನ್ನು ಇತ್ಯರ್ಥಪಡಿಸಬೇಕು. ಕಾನೂನು ತೊಡಕು ಇರುವ ಅರ್ಜಿಗಳಿಗೆ ಯಾವ ರೀತಿಯ ತೊಡಕು ಇದೆ ಎಂಬುದನ್ನು ಟಿಪ್ಪಣಿ ಮಾಡಿ ಹಿಂಬರಹ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ವಿಧಾನಸೌಧದ ಮುಂಭಾಗ ಗುರುವಾರ ರಾಜ್ಯ ಮಟ್ಟದ ಎರಡನೇ ಜನಸ್ಪಂದನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನವೆಂಬರ್ 27 ರಂದು ನಡೆದ ಮೊದಲ ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕರಿಸಲಾದ ಅರ್ಜಿಗಳ ಪೈಕಿ ಶೇ.98ರಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಿ, ಜನರಿಗೆ ಪರಿಹಾರಗಳನ್ನು ಒದಗಿಸಲಾಗಿದೆ ಎಂದು ತಿಳಿಸಿದರು.

ಸರ್ಕಾರವನ್ನು ಜನರ ಬಳಿಗೇ ಒಯ್ಯಬೇಕೆಂಬುದು ಸರ್ಕಾರದ ಆಶಯ. ಈ ನಿಟ್ಟಿನಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಈವರೆಗೆ ಒಟ್ಟು 108 ಜನಸ್ಪಂದನ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ತಾಲೂಕು, ಜಿಲ್ಲಾ ಮಟ್ಟದಲ್ಲಿಯೂ ಜನಸ್ಪಂದನ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಅಲ್ಲಿ ಬಗೆಹರಿಯದ ಸಮಸ್ಯೆಗಳನ್ನು ರಾಜ್ಯಮಟ್ಟದ ●9ನೇ ಪುಟಕ್ಕೆ

## ಮಂಡ್ಯ ನನಗೇ ಇರಲಿ...! ಜೆ.ಪಿ.ನಡ್ಡಾ, ಸಂತೋಷ್ ಭೇಟಿಯಾದ ಸುಮಲತಾ



ಜೆ.ಪಿ.ನಡ್ಡಾರ ಅಭಿನಂದಿಸಿದ ಸುಮಲತಾ

ಮಂಡ್ಯ,ಫೆ.8– ಮಂಡ್ಯ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿರುವ ಪಕ್ಷೇತರ ಸಂಸದೆ ಸುಮಲತಾ ಗುರುವಾರ ನವದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದು, ತೀವ್ರ ಕುತೂಹಲ ಮೂಡಿಸಿದೆ.

ಜೆಡಿಎಸ್ ಜೊತೆಗೆ ಬಿಜೆಪಿ ಮೈತ್ರಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಮಂಡ್ಯ ಕ್ಷೇತ್ರ ಬಹುತೇಕ ಜೆಡಿಎಸ್ ಪಾಲಾಗಲಿದ್ದು, ಈ ನಿಟ್ಟಿನಲ್ಲಿ ಮಂಡ್ಯ ಕ್ಷೇತ್ರವನ್ನು ಬಿಜೆಪಿ ತನ್ನ ಬಳಿಯೇ ಉಳಿಸಿಕೊಂಡು ಮಂಡ್ಯದಿಂದ ತಮಗೆ ಬಿಜೆಪಿ ಟಿಕೆಟ್ ಕೊಡಬೇಕೆಂದು ಸುಮಲತಾ ಅವರು ಉಭಯ ನಾಯಕರ ಬಳಿ ಮನವಿ ಮಾಡಿದ್ದಾರೆ ಎಂದು ನಂಬಲರ್ಹ ಮೂಲಗಳು ತಿಳಿಸಿವೆ. ಮಂಡ್ಯ ಕ್ಷೇತ್ರ ಜೆಡಿಎಸ್ ಪಾಲಾಗಲಿದೆ ಎಂದು ಜೆಡಿಎಸ್ ಮುಖಂಡರು ಹೇಳುತ್ತಿದ್ದು, ಕೆಲ ಬಿಜೆಪಿ ನಾಯಕರು ಸಹ ಮಂಡ್ಯ ಕ್ಷೇತ್ರ ಜೆಡಿಎಸ್‌ಗೆ ಹೋಗಲಿದೆ ಎಂಬ ಹೇಳಿಕೆಗಳನ್ನು ಕೊಟ್ಟಿದ್ದರು. ಇದರಿಂದ ಬಿಜೆಪಿಗೆ ಕಳೆದ ವಿಧಾನಸಭಾ ಚುನಾವಣೆ ಸಮಯದಲ್ಲಿ ಆಂತರಿಕ ಬೆಂಬಲ ನೀಡಿ ಮಂಡ್ಯ ಟಿಕೆಟ್ ಮೇಲೆ ಕಣ್ಣಿಟ್ಟಿದ್ದ ಸುಮಲತಾಗೆ ಭಾರಿ ಹಿನ್ನಡೆಯಾಗಿತ್ತು. ಇದಲ್ಲದೇ ಕಾಂಗ್ರೆಸ್ ಸಹ ನಮ್ಮಲ್ಲೇ ಸಮರ್ಥರಿದ್ದಾರೆ. ಸುಮಲತಾಗೆ ಟಿಕೆಟ್ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿತ್ತು. ಈ ಹಿನ್ನೆಲೆಯಲ್ಲಿ ಸುಮಲತಾ ಇಂದು ನಡ್ಡಾ ಹಾಗೂ ಸಂತೋಷ್ ಅವರನ್ನು ಭೇಟಿ ಮಾಡಿದ್ದಾರೆ.

### ಮಂಡ್ಯದಲ್ಲಿ ಸ್ಪರ್ಧಿಸಲು ಜೆಡಿಎಸ್‌ನಲ್ಲಿ ಗಂಡಸರಿಲ್ವಾ...!? ಮದ್ದೂರು ಶಾಸಕ ಉದಯ್ 'ಆಘಾತಕಾರಿ ಪ್ರಶ್ನೆ'




ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಜೆಡಿಎಸ್‌ನಲ್ಲಿ ಗಂಡಸರಿಲ್ವಾ...!? ಯಾಕೆ ಬೇರೆ ಯಾವುದೋ ಜಿಲ್ಲೆಯವರು ಬರಬೇಕು. ನಿಮ್ಮ ಪಕ್ಷದಲ್ಲಿ ಸಮರ್ಥರು ಮಂಡ್ಯ ಜಿಲ್ಲೆಯಲ್ಲಿ ಇಲ್ಲವೇ ಎಂದು ಮದ್ದೂರು ಶಾಸಕ ಕೆ.ಎಂ.ಉದಯ್‌ಗೌಡ ಪ್ರಶ್ನಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್ ಪಕ್ಷದಲ್ಲಿ ಸಮರ್ಥ ಕಾರ್ಯಕರ್ತರು ಇಲ್ಲವೇ? ನಾಯಕರ ಮಕ್ಕಳು, ●9ನೇ ಪುಟಕ್ಕೆ



## ಅವೈಜ್ಞಾನಿಕ ಹಂಪ್ಸ್‌ಗೆ ಮೂವರು ಬಲಿಯಾದ ಬೆನ್ನ ಹಿಂದೆಯೇ

# ಮರದ ಒಣ ರೆಂಬೆ ಬಿದ್ದು ಅಮಾಯಕ ಬಲಿ

ಮೈಸೂರು ನಗರಪಾಲಿಕೆ ಆಡಳಿತ ವರ್ಗದ ನಿರ್ಲಕ್ಷ್ಯಕ್ಕೆ ಮತ್ತೆಷ್ಟು ಜನ ಸಾಯಬೇಕೋ...!



ಮೃತ ಪಟ್ಟ ರೆಜಿನಾಲ್ಡ್ ಪ್ಲಾಟೆಲ್





ಮೈಸೂರಿನ ಬೋಗಾದಿ ರಸ್ತೆಯಲ್ಲಿ, ಕುಕ್ಕರಹಳ್ಳಿ ಕೆರೆ ಬಳಿಯ ಬೇಂದ್ರೆ ವನದ ಎದುರು ಅರಳೀಮರದ ಒಣ ರೆಂಬೆ ತುಂಡುಗಳು ಬಿದ್ದಿರುವುದು. ಮಂಗಳವಾರ ಘಟನೆ ನಡೆದ ತಕ್ಷಣ ಪಾಲಿಕೆ ಸಿಬ್ಬಂದಿ ಮುರಿದುಬಿದ್ದ ರೆಂಬೆ ತುಂಡರಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಫೆ.8(ಆರ್‌ಕೆ)– ಮೈಸೂರು ನಗರಪಾಲಿಕೆಯಿಂದ ಮೈಸೂರಿನ ಬೋಗಾದಿ ರಸ್ತೆಯಲ್ಲಿ ಮಾನಸ ಗಂಗೋತ್ರಿ ಬಳಿ ಅಳವಡಿಸಿದ್ದ ಅವೈಜ್ಞಾನಿಕ ರೋಡ್ ಹಂಪ್ಸ್‌ಗೆ ಮೂವರು ಬಲಿಯಾದ ಬೆನ್ನಲ್ಲೇ ಅದೇ ರಸ್ತೆಯ ಕುಕ್ಕರಹಳ್ಳಿ ಕೆರೆ ಬಳಿ ಮರದ ಒಣ ರಂಬೆ ಮುರಿದು ಬಿದ್ದು ಹಿರಿಯ ನಾಗರಿಕರೊಬ್ಬರು ಬಲಿಯಾಗಿದ್ದಾರೆ.

ಈ ದುರ್ಘಟನೆ ಮಂಗಳವಾರ ಸಂಭವಿಸಿದ್ದು, ನಗರಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಇದೀಗ ಮತ್ತೊಬ್ಬ ಅಮಾಯಕನ ಜೀವ ಹೋಗಿದೆ. ಒಣಗಿದ್ದ ಅರಳೀಮರದ ರೆಂಬೆಯನ್ನು ಮುನ್ನೆಚ್ಚರಿಕೆಯಾಗಿ ತೆರವುಗೊಳಿಸಿದ್ದರೆ, ಈ ಘಟನೆ ಸಂಭವಿಸುತ್ತಿರಲಿಲ್ಲ. ರಸ್ತೆ ಹಂಪ್ಸ್‌ನಲ್ಲಿ ನಿಯಂತ್ರಣ ಕಳೆದುಕೊಂಡು ವಾಹನದಿಂದ ಬಿದ್ದು ಮೂವರು ಯುವಕರು ಮೃತಪಟ್ಟ ಸ್ಥಳದಿಂದ ಕೇವಲ ಅರ್ಧ ಕಿ.ಮೀ. ಅಂತರದಲ್ಲಿ ಮತ್ತೊಂದು ದುರ್ಘಟನೆ ಸಂಭವಿಸಿದೆ. ಮೈಸೂರಿನ ರೂಪಾನಗರ ನಿವಾಸಿ ರೆಜಿನಾಲ್ಡ್ ಪ್ಲಾಟೆಲ್ (67), ಮರದ ಒಣ ರೆಂಬೆ ಬಿದ್ದು ತಲೆಗೆ ತೀವ್ರ ಗಾಯಗಳಾಗಿ ಸಾವನ್ನಪ್ಪಿದವರು. ಮಂಗಳವಾರ ಬೆಳಗ್ಗೆ ●5ನೇ ಪುಟಕ್ಕೆ

> "ಕೆಲವು ವರ್ಷಗಳ ಹಿಂದೆ ರಸ್ತೆ ಅಗಲೀಕರಣಕ್ಕಾಗಿ ಮರ ತೆರವಿಗೆ ಪಿಡಬ್ಲ್ಯೂಡಿ ಅಧಿಕಾರಿಗಳು ಮುಂದಾಗಿದ್ದರು. 'ಮೈಸೂರು ಮಿತ್ರ' ಸಹ ಮರ ಕಡಿಯುವುದಕ್ಕೆ ಸಹಮತ ವ್ಯಕ್ತಪಡಿಸಿತ್ತು. ಆದರೆ ಕೆಲವು ಪರಿಸರವಾದಿಗಳು ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ಈ ಮರವನ್ನು ಉಳಿಸಿದ್ದರು. ಅದೇ ಮರದಿಂದ ಈಗ ಅಮೂಲ್ಯ ಜೀವ ಹೋಗಿದೆ. ಮರದ ಸುತ್ತಲೂ ರಸ್ತೆ ಅಗಲೀಕರಣ ಮಾಡಲಾಗಿತ್ತು. ಏನಿದು ವಿಪರ್ಯಾಸ!
> –ಸಂಪಾದಕ

# ಮೈಸೂರಿನ ಮೌಂಟೆಡ್ ಪೊಲೀಸ್ ತಂಡಕ್ಕೆ ಚಿನ್ನದ ಪದಕ



ಹೈದರಾಬಾದ್, ಫೆ. 8– ಇತ್ತೀಚೆಗೆ ಹೈದರಾಬಾದ್‌ನ ಸರ್ದಾರ್ ವಲ್ಲಭ ಭಾಯಿ ಪಟೇಲ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ ಮುಕ್ತಾಯಗೊಂಡ ಪ್ರತಿಷ್ಠಿತ 42ನೇ ಅಖಿಲ ಭಾರತ ಪೊಲೀಸ್ ಈಕ್ವೆಸ್ಟ್ರಿಯನ್ ಚಾಂಪಿಯನ್‌ಶಿಪ್ ಮತ್ತು ಮೌಂಟೆಡ್ ಪೊಲೀಸ್ ಡ್ಯೂಟಿ ಮೀಟ್‌ನಲ್ಲಿ ಕರ್ನಾಟಕ ಪೊಲೀಸ್ ತಂಡವನ್ನು ಪ್ರತಿನಿಧಿಸಿದ್ದ ಮೈಸೂರಿನ ಕರ್ನಾಟಕ ಸಶಸ್ತ್ರ ಮೀಸಲು ಪಡೆಯ (ಕೆಎಆರ್‌ಪಿ) ಮೌಂಟೆಡ್ ಪೊಲೀಸ್ ಕಮಾಂಡೆಂಟ್ ಶೈಲೇಂದ್ರ ವಿ. 'ಕಿಂಗ್ಸ್ ಪವರ್' ಎನ್ನುವ ಕುದುರೆಯೊಂದಿಗೆ 'ಹ್ಯಾಕ್ಸ್' ವಿಭಾಗದಲ್ಲಿ ಭಾಗವಹಿಸಿ ಚಿನ್ನದ ಪದಕ ಗೆದ್ದಿದ್ದಾರೆ.

ದೇಶದ ವಿವಿಧ ಕೇಂದ್ರ ಪೊಲೀಸ್ ಸಂಸ್ಥೆಗಳು, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು ಮತ್ತು ರಾಜ್ಯ ಪೊಲೀಸ್ ಪಡೆಗಳ 22 ತಂಡಗಳು ಭಾಗವಹಿಸಿದ್ದ ಈ ಕ್ರೀಡಾಕೂಟದಲ್ಲಿ 605 ಪುರುಷ ಹಾಗೂ 14 ಮಹಿಳಾ ಸಿಬ್ಬಂದಿ ಭಾಗವಹಿಸಿ, ಡ್ರೆಸ್ಸೇಜ್, ಟೆಂಟ್ ಪೆಗ್ಗಿಂಗ್, ಶೋ ಜಂಪಿಂಗ್, ಮೆಡ್ಲೆ ರಿಲೇ, ಹ್ಯಾಕ್ಸ್, ಮೆಂಟಲ್ ಹಜಾರ್ಡ್ ಟೆಸ್ಟ್ ಇತ್ಯಾದಿ ವಿಭಾಗಗಳಲ್ಲಿ 311 ಕುದುರೆಗಳೊಂದಿಗೆ ತಮ್ಮ ಕೌಶಲ್ಯಗಳನ್ನು ಪ್ರದರ್ಶಿಸುವ ಅತಿದೊಡ್ಡ ಕ್ರೀಡಾಕೂಟವಾಗಿದೆ.

ನಗರ ಪೊಲೀಸ್ ಕಮಿಷನರ್ ರಮೇಶ್ ಬನೋತ್, ಕಮಾಂಡೆಂಟ್ ಶೈಲೇಂದ್ರ ವಿ ಅವರನ್ನು ತಮ್ಮ ಕಚೇರಿಯಲ್ಲಿ ಅಭಿನಂದಿಸಿದ್ದಾರೆ.



**ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಗುರುವಾರ ಕಲ್ಲಿನ ದೀಪದ ಕಂಬಕ್ಕೆ ಶ್ರೀ ಯದುಗಿರಿ ಯತಿರಾಜ ಮಹಾಸ್ವಾಮಿಗಳು ಚಾಲನೆ ನೀಡಿದರು. ಚಿತ್ರದಲ್ಲಿ ದೇವಸ್ಥಾನದ ಪ್ರಧಾನ ವ್ಯವಸ್ಥಾಪಕ ವಿದ್ವಾನ್ ಕೆ.ಎಲ್. ಯೋಗಾನರಸಿಂಹನ್ (ಮುರಳಿ), ಪ್ರಮತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹೆಚ್.ವಿ.ರಾಜೀವ್, ಟ್ರಸ್ಟಿ ಸುಂದರರಾಜ ಅಯ್ಯಂಗಾರ್, ವೀರರಾಘವನ್ ಮತ್ತಿತರರನ್ನು ಕಾಣಬಹುದು.**

# ನಾಳೆಯಿಂದ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಡ್ಯಾನ್ಸ್ ಮೈಸೂರು ಡ್ಯಾನ್ಸ್

ಮೈಸೂರು, ಫೆ. 8– ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಯುವ ನೃತ್ಯ ಕಲಾವಿದರ ಕೌಶಲ್ಯವನ್ನು ಪ್ರದರ್ಶಿಸುವ ದೃಷ್ಟಿಯಿಂದ ಫೆ. 10 ಮತ್ತು 11 ರಂದು ಡ್ಯಾನ್ಸ್ ಮೈಸೂರು ಡ್ಯಾನ್ಸ್ ಕಾರ್ಯಕ್ರಮ ಆಯೋಜಿಸಲಾಗಿದೆ. ಡ್ಯಾನ್ಸ್ ಕಾರ್ಯಕ್ರಮ ಜೂನಿಯರ್ (10 ರಿಂದ 16 ವರ್ಷಗಳು) ಮತ್ತು ಹಿರಿಯ (17 ರಿಂದ 30 ವರ್ಷಗಳು) ಎರಡು ವಿಭಾಗಗಳಲ್ಲಿ ನಡೆಯಲಿದೆ. ಈ ಎರಡು ದಿನಗಳ ನೃತ್ಯದ ಆಚರಣೆಯು ಅತ್ಯುತ್ತಮ ಪ್ರತಿಭೆಗಳನ್ನು ಒಟ್ಟುಗೂಡಿಸುವ ಗುರಿಯನ್ನು ಹೊಂದಿದೆ. ಇದು ಸ್ವಯಂ ಅಭಿವ್ಯಕ್ತಿ ಮತ್ತು ಕಲಾತ್ಮಕ ಅನ್ವೇಷಣೆಗೆ ವೇದಿಕೆಯನ್ನು ಸೃಷ್ಟಿಸುತ್ತದೆ. ಭಾಗವಹಿಸುವವರು ತಮ್ಮ ಕೌಶಲ್ಯ ಮತ್ತು ಸೃಜನಶೀಲತೆಯನ್ನು ವಿವಿಧ ನೃತ್ಯ ಪ್ರಕಾರಗಳಲ್ಲಿ ಪ್ರದರ್ಶಿಸುವುದರಿಂದ ಈವೆಂಟ್ ದೃಶ್ಯ ಹಬ್ಬದ ಭರವಸೆ ನೀಡುತ್ತದೆ. ಈ ಕಾರ್ಯಕ್ರಮವು ನೃತ್ಯಗಾರರಿಗೆ ವೇದಿಕೆಯನ್ನು ಒದಗಿಸುವುದಲ್ಲದೆ, ಕಲೆಯನ್ನು ಪ್ರಶಂಸಿಸಲು ಮತ್ತು ಪ್ರೋತ್ಸಾಹಿಸಲು ಸಮುದಾಯಕ್ಕೆ ಸ್ಫೂರ್ತಿಯ ಮೂಲವಾಗಿದೆ. ನೋಂದಣಿ ಮತ್ತು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 7022783353 ಸಂಪರ್ಕಿಸಬಹುದು.

# ಸದಸ್ಯನ ಅಮಾನತು ನಿರ್ಣಯಕ್ಕೆ ತಡೆ; ಕೋರ್ಟ್ ಆದೇಶ ಪಾಲಿಸದ ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ ಪೀಠೋಪಕರಣ ಜಪ್ತಿ

ಮೈಸೂರು, ಫೆ.8– ಪ್ರಕರಣವೊಂದರಲ್ಲಿ ನ್ಯಾಯಾಲಯದ ಆದೇಶ ಪಾಲನೆ ಮಾಡದ ಕಾರಣ ಮೈಸೂರಿನ ಪ್ರತಿಷ್ಠಿತ ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್‌ನ ಪೀಠೋಪಕರಣಗಳನ್ನು ಗುರುವಾರ ಜಪ್ತಿ ಮಾಡಲಾಗಿದೆ. ಸಿದ್ಧಾರ್ಥನಗರ ನಿವಾಸಿ ಚಂದನ್ ಅವರ ಸದಸ್ಯತ್ವ ಪುನರ್ ಸ್ಥಾಪಿಸಬೇಕೆಂಬ ನ್ಯಾಯಾಲಯದ ಆದೇಶವನ್ನು ಕ್ಲಬ್‌ನ ಕಾರ್ಯದರ್ಶಿ ಹಾಗೂ ಅಧ್ಯಕ್ಷರು ಪಾಲನೆ ಮಾಡದ ಹಿನ್ನೆಲೆಯಲ್ಲಿ ಚಂದನ್ ಅವರು ನ್ಯಾಯಾಂಗ ಆದೇಶ ಉಲ್ಲಂಘನೆ ಅಡಿಯಲ್ಲಿ ಮತ್ತೆ ನ್ಯಾಯಾಲಯದ ಮೊರೆ ಹೋಗಿದ್ದರು. ಬಳಿಕ ಕ್ಲಬ್‌ನ ಮೂವೆಬಲ್ ಪ್ರಾಪರ್ಟಿ ಜಪ್ತಿಗೆ ಆದೇಶಿಸಿದ್ದರಿಂದ ಅಮಿನ್ ಅವರ ಸಮ್ಮುಖದಲ್ಲಿ ಪೀಠೋಪಕರಣ ಜಪ್ತಿ ಮಾಡಲಾಯಿತು.

ಈ ಬಗ್ಗೆ ಚಂದನ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, 2008ರಲ್ಲಿ ಕ್ಲಬ್‌ನ ಸದಸ್ಯನಾದ ನಾನು 2016–17ನೇ ಸಾಲಿನ ವಹಿವಾಟಿನ ಬಗ್ಗೆ ಲೆಕ್ಕ ಕೇಳಿದೆ. ಕಾರ್ಯಕಾರಿ ಸಮಿತಿ ಅವಧಿ ಮುಗಿದ ಬಳಿಕ ಬೈಲಾ ತಿದ್ದುಪಡಿಗೆ ಮುಂದಾದಾಗ ಸಹಕಾರ ಇಲಾಖೆ ಡಿಆರ್‌ನಿಂದ ಮಾಹಿತಿ ಪಡೆದು ಕಾರ್ಯಕಾರಿ ಸಮಿತಿ ಅವಧಿ ಒಂದು ವರ್ಷ ಮಾತ್ರ ಎಂಬುದನ್ನು ಎಲ್ಲಾ ಸದಸ್ಯರಿಗೂ ತಿಳಿಸಿದೆ. ಈ ಕಾರಣಕ್ಕೆ ನನ್ನನ್ನು ಸದಸ್ಯತ್ವ ಸ್ಥಾನದಿಂದ ಅಮಾನತುಪಡಿಸಿದರು. ನ್ಯಾಯಾಲಯದಲ್ಲಿ ತಾತ್ಕಾಲಿಕ ತಡೆಯಾಜ್ಞೆ ಸಿಕ್ಕಿತು. ನಂತರ ಶಿಸ್ತು ಕಮಿಟಿ ಮುಂದೆ ಮುಚ್ಚಳಿಕೆ ಬರೆದುಕೊಡಲಿಲ್ಲ ಎಂಬ ಕಾರಣಕ್ಕೆ ಅಸಭ್ಯ ವರ್ತನೆ ಎಂದು ಅಮಾನತು ಮಾಡಿದರು. ಈ ಸಂಬಂಧ ನ್ಯಾಯಾಲಯದಲ್ಲಿ ರೆಗ್ಯುಲರ್ ಅಪೀಲ್ ಹಾಕಿದಾಗ ಕಾರ್ಯಕಾರಿ ಸಮಿತಿ ತೀರ್ಮಾನ ಸರಿಯಲ್ಲ ಎಂದು ನ್ಯಾಯಾಲಯ ಆದೇಶಿಸಿತು. ಆದರೂ ನನ್ನ ಪ್ರವೇಶಕ್ಕೆ ನಿರ್ಬಂಧಿಸಿದ್ದರಿಂದ ಎಗ್ಸಿಕ್ಯೂಶನ್ ಹಾಕಿದೆ. ನ್ಯಾಯಾಲಯದ ಆದೇಶದಂತೆ ಇಂದು ಪೀಠೋಪಕರಣ ಜಪ್ತಿ ಮಾಡಿದ್ದೇವೆ ಎಂದರು. ಬೈಲಾ ವಿರುದ್ಧವಾಗಿ ನಡೆದುಕೊಂಡಿದ್ದರಿಂದ ಚಂದನ್ ಅವರನ್ನು ಅಮಾನತು ಮಾಡಲಾಗಿತ್ತು. ನಂತರ ವಿಚಾರಣೆ ನಡೆಸಿ, ಸದಸ್ಯತ್ವದಿಂದ ವಜಾಗೊಳಿಸಲಾಗಿದೆ. ಈ ಸಂಬಂಧ ನ್ಯಾಯಾಲಯದಲ್ಲ ಪ್ರಕರಣ ಬಾಕಿ ಇದೆ. ವಕೀಲರೊಂದಿಗೆ ಚರ್ಚಿಸಿ ಮುಂದಿನ ಕ್ರಮ ವಹಿಸಲಾಗುತ್ತದೆ ಎಂದು ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್‌ನ ಕಾರ್ಯದರ್ಶಿ ಅಶೋಕ್ ತಿಳಿಸಿದ್ದಾರೆ.

# ಹುಲಿ ಕಳೇಬರ ಪತ್ತೆ; ನಿಯಮಾವಳಿಯಂತೆ ಅಂತ್ಯಕ್ರಿಯೆ



ಮೈಸೂರು,ಫೆ.8(ಪಿಎಂ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ಉಪವಿಭಾಗದ ಮೊಳೆಯೂರು ವಲಯದಲ್ಲಿ ಗುರುವಾರ ಹುಲಿ ಕಳೇಬರ ಪತ್ತೆಯಾಗಿದೆ. ಗಸ್ತಿನಲ್ಲಿದ್ದ ಅರಣ್ಯ ಇಲಾಖೆ ಸಿಬ್ಬಂದಿಗೆ ಸೆನ್ಸಸ್ ಲೈನ್ ಸಮೀಪದಲ್ಲಿ ಹುಲಿ ಕಳೇಬರ ಕಂಡುಬಂದಿದ್ದು, ಸದರಿ ಹುಲಿಯು ಸುಮಾರು 1ರಿಂದ 2 ವರ್ಷ ವಯಸ್ಸಿನದ್ದು ಎಂದು ಅರಣ್ಯ ಇಲಾಖೆ ವೈದ್ಯರು ಅಂದಾಜಿಸಿದ್ದಾರೆ. ಹುಲಿ ಕಳೇಬರವನ್ನು ಕಾಡುನಾಯಿಗಳು ಹಾಗೂ ಇನ್ನಿತರ ಪ್ರಾಣಿಗಳು ಅರೆಬರೆ ತಿಂದಿರುವ ಕಾರಣ ಅದರ ಲಿಂಗ ಪತ್ತೆ ಸಾಧ್ಯವಾಗಿಲ್ಲ.

ಮತ್ತೊಂದು ಹುಲಿ ಜೊತೆ ಕಾದಾಟ ನಡೆಸಿದ್ದರಿಂದ ಸದರಿ ಹುಲಿಯ ಕತ್ತು ಮುರಿದಿದ್ದು, ಇದರ ಪರಿಣಾಮ ಈ ಹುಲಿ ಮೃತಪಟ್ಟಿದೆ ಎಂದು ಅರಣ್ಯ ಇಲಾಖೆ ವೈದ್ಯರು ದೃಢಪಡಿಸಿದ್ದಾರೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿಯಂತೆ ಮೃತ ಹುಲಿಯ ಮರಣೋತ್ತರ ಪರೀಕ್ಷೆ ನೆರವೇರಿಸಿ, ನಂತರ ಹುಲಿ ಕಳೇಬರವನ್ನು ಕಟ್ಟಿಗೆಯಿಂದ ಸುಡಲಾಯಿತು. ಅರಣ್ಯ ಇಲಾಖೆ ಅಧಿಕಾರಿಗಳಾದ ಡಾ.ಪಿ.ರಮೇಶ್ ಕುಮಾರ್, ಎಂ.ಎನ್.ನವೀನ್, ಕೆ ಪರಮೇಶ, ಕೃತಿಕಾ ಆಲನಹಳ್ಳಿ, ಪಶುವೈದ್ಯಾಧಿಕಾರಿ ಡಾ.ವಾಸೀಂ ಮಿರ್ಜಾ ಹಾಗೂ ಇನ್ನಿತರರ ಸಮಕ್ಷಮದಲ್ಲಿ ಕಳೇಬರದ ಅಂತಿಮ ವಿಧಿವಿಧಾನದ ಪ್ರಕ್ರಿಯೆಗಳನ್ನು ನೆರವೇರಿಸಲಾಯಿತು ಎಂದು ಹೆಡಿಯಾಲ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸಂಶೋಧನಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

# 'ಮತ್ತೊಮ್ಮೆ ಮೋದಿ' ಗೋಡೆ ಬರಹ ಅಭಿಯಾನಕ್ಕೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಚಾಲನೆ




ಮೈಸೂರು, ಫೆ. 8 (ಆರ್‌ಕೆ)– ಮೈಸೂರಿನ ಒಂಟಿಕೊಪ್ಪಲಿನ ಕಾಳಿದಾಸ ರಸ್ತೆಯ ಶ್ರೀ ರಾಮಮಂದಿರ ಬಳಿ ನಗರ ಬಿಜೆಪಿಯಿಂದ ಆಯೋಜಿಸಿದ್ದ 'ಮತ್ತೊಮ್ಮೆ ಮೋದಿ' ಗೋಡೆ ಬರಹ ಅಭಿಯಾನಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದು ಚಾಲನೆ ನೀಡಿದರು.

ಖಾಸಗಿ ವ್ಯಕ್ತಿಗೆ ಸೇರಿದ ಹಳೇ ಮನೆಯೊಂದರ ಗೋಡೆ ಮೇಲೆ ಬರೆದಿರುವ 'ಮತ್ತೊಮ್ಮೆ ಮೋದಿ' ಫಲಕಕ್ಕೆ ಬ್ರಷ್‌ನಿಂದ ಬಣ್ಣ ಬಳಿಯುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದ ಅವರು, ಖಾಸಗಿ ಸ್ವಾಮ್ಯದ ಕಟ್ಟಡಗಳ ಮಾಲೀಕರಿಂದ ಪೂರ್ವಾನುಮತಿ ಪಡೆದು ಗೋಡೆಗಳ ಮೇಲೆ 'ಮತ್ತೊಮ್ಮೆ ಮೋದಿ' ಎಂದು ಬರೆಯುವ ಮೂಲಕ ಸಾರ್ವಜನಿಕರಿಗೆ ಪ್ರಚುರಪಡಿಸುವಂತೆ ಬಿಜೆಪಿ ಕಾರ್ಯಕರ್ತರಿಗೆ ಸಲಹೆ ನೀಡಿದರು.

ಯಾವುದೇ ಸರ್ಕಾರಿ ಕಚೇರಿ ಕಟ್ಟಡಗಳು, ಸಾರ್ವಜನಿಕ ಸ್ಥಳ ಹಾಗೂ ಅನುಮತಿ ನೀಡದ ಖಾಸಗಿ ಕಟ್ಟಡಗಳ ಮೇಲೆ ಈ ಘೋಷಣೆ ಬರೆಸಬಾರದು. ಎಲ್ಲಿಯೂ ನಿಯಮ ಉಲ್ಲಂಘಿಸಬಾರದು. ಯಾರಿಂದಲೂ ದೂರು ಬಾರದಂತೆ ಎಚ್ಚರ ವಹಿಸಿ ಎಂದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ. ರಾಜೇಂದ್ರ, ಮೈಸೂರು ನಗರಾಧ್ಯಕ್ಷ ಎಲ್. ನಾಗೇಂದ್ರ, ಶಾಸಕ ಟಿ.ಎಸ್. ಶ್ರೀವತ್ಸ, ಮುಖಂಡರಾದ ಕೌಟಿಲ್ಯ ರಘು, ಡಾ. ಅನಿಲ್ ಥಾಮಸ್, ಸಂದೇಶ್‌ಸ್ವಾಮಿ, ಗಿರಿಧರ್, ಕವೀಶ್‌ಗೌಡ, ಬಿ.ಎಂ. ರಘು, ಕಿರಣ್‌ಗೌಡ, ಬಿ.ಪಿ.ಮಂಜುನಾಥ್, ಆರ್. ಗುರುದತ್, ಎಂ.ಯು.ಸುಬ್ಬಯ್ಯ, ಸೋಮಶೇಖರರಾಜು, ಹೇಮಾ ನಂದೀಶ್, ಪುನೀತ್‌ಕುಮಾರ್, ಜಯಪ್ರಕಾಶ್, ರಮೇಶ್, ಬಾಬು ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

## ಮೋದಿಯವರ ಐತಿಹಾಸಿಕ ನಿರ್ಧಾರ '29 ರೂ.ಗೆ ಕೆಜಿ ಅಕ್ಕಿ'

ಮೈಸೂರು, ಫೆ. 8 (ಆರ್‌ಕೆ)– ಯಾವ ತಾರತಮ್ಯವಿಲ್ಲದೇ ಎಲ್ಲರಿಗೂ 29 ರೂ.ಗೆ ಕೆಜಿ ಅಕ್ಕಿ ನೀಡುವ ಯೋಜನೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಐತಿಹಾಸಿಕ ನಿರ್ಧಾರ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೋದಿಯವರು ಜಾರಿಗೆ ತಂದಿರುವ 29 ರೂ.ಗಳಿಗೆ ಅಕ್ಕಿ ಪೂರೈಸುವ ಯೋಜನೆಯಿಂದ ಸಮಾಜದ ಎಲ್ಲಾ ವರ್ಗದವರಿಗೂ ಅನುಕೂಲವಾಗುತ್ತದೆ. ಇದೊಂದು ಮಹತ್ವದ ನಿರ್ಧಾರ ಎಂದರು. ಕಾಂಗ್ರೆಸ್‌ನವರು ರಾಜ್ಯದಲ್ಲಿ ತಂದಿರುವ ಗ್ಯಾರಂಟಿ ಯೋಜನೆಗಳಿಗಿಂತ ಮೋದಿ ಅವರ ಅಕ್ಕಿ ಯೋಜನೆ ಉತ್ತಮವಾದುದಾಗಿದ್ದು, ಜನರ ಹಸಿವು ನೀಗಿಸಲು ಇದು ಸಹಕಾರಿಯಾಗಲಿದೆ. ಬಿಜೆಪಿಯು ಸರ್ವ ಕಾಲಕ್ಕೂ ಜನಪರ ಯೋಜನೆಗಳನ್ನೇ ನೀಡುತ್ತದೆ ಎಂಬುದಕ್ಕೆ ಇದು ಉತ್ತಮ ಉದಾಹರಣೆ ಎಂದೂ ಯಡಿಯೂರಪ್ಪ ನುಡಿದರು.

**ಹಾಗೆ ನಡೆದುಕೊಳ್ಳಬಾರದು:** ದೆಹಲಿಯಲ್ಲಿ ಮಾಂಸಾಹಾರ ಸೇವಿಸಿ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿಗೆ ಬಂದು ಸುತ್ತೂರು ಶ್ರೀ ಕ್ಷೇತ್ರದಲ್ಲಿ ಗದ್ದುಗೆಗೆ ಪೂಜೆ ಮಾಡಿದ್ದಾರೆ ಎಂಬ ಆರೋಪ ಕೇಳಿ ಬರುತ್ತಿರುವ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಅದು ಅವರವರ ಇಚ್ಛೆಗೆ ಸಂಬಂಧಿಸಿದ್ದಾಗಿದೆ. ಆದರೆ ಯಾರೇ ಆಗಲಿ ಹಾಗೆ ನಡೆದುಕೊಳ್ಳುವುದು ಸರಿಯಲ್ಲ ಎಂದರು.

**ಖಂಡನೀಯ:** ಈ ಸಂಬಂಧ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯಮಂತ್ರಿಗಳಾದವರು ಮಾಂಸ ಸೇವಿಸಿ ಪವಿತ್ರ ಧಾರ್ಮಿಕ ನೆಲೆ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಗದ್ದುಗೆಗೆ ಪೂಜೆ ಮಾಡಿರುವುದು ಖಂಡನೀಯ ಎಂದರು. ಲಕ್ಷಾಂತರ ಭಕ್ತರು ಬರುವ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಮಾಂಸಾಹಾರ ಸೇವಿಸಿ ಬಂದು ಪರಮ ಪೂಜ್ಯ ಶ್ರೀಗಳ ಗದ್ದುಗೆಗೆ ಪೂಜೆ ಸಲ್ಲಿಸಿರುವುದು ಸಿದ್ದರಾಮಯ್ಯರ ಉಡಾಫೆ ವರ್ತನೆ ತೋರಿಸುತ್ತದೆ. ಈ ಹಿಂದೆಯೂ ಧರ್ಮಸ್ಥಳ ಶ್ರೀ ಮಂಜುನಾಥನ ಸನ್ನಿಧಿಯಲ್ಲಿ ಇದೇ ರೀತಿ ನಡೆದುಕೊಂಡಿದ್ದ ಅವರು 'ಮಾಂಸ ತಿಂದು ಬರಬಾರದೋ' ಎಂದು ಉದ್ಧಟತನದಿಂದ ಪ್ರಶ್ನಿಸಿದ್ದರು. ಇದು ಅವರ ವರ್ತನೆಯನ್ನು ತೋರುತ್ತದೆ ಎಂದು ಅವರು ತಿಳಿಸಿದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**9.2.2024 ಶುಕ್ರವಾರ, ಮಳೆ ನಕ್ಷತ್ರ: ಧನಿಷ್ಠ 6.2.2024 ರಿಂದ 19.02.2024**
**ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,**
**ತಿಥಿ: ಚತುರ್ದಶಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ**

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸೋರಿಯಾಸಿಸ್ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ವಿದ್ಯಾವರ್ಧಕ ಕಾನೂನು ಕಾಲೇಜು :** ಮೈಸೂರು ವಲಯ ಮಟ್ಟದ ಮಾದರಿ ವಿಧಾನಸಭಾ ಅಧಿವೇಶನ ಸ್ಪರ್ಧೆ– 2023–24, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಸಂಸ್ಥೆ ನಿರ್ದೇಶಕ ಕೆ. ದ್ವಾರಕನಾಥ್ ಬಾಬು, ಸಂಶೋಧನಾ ನಿರ್ದೇಶಕ ಡಾ. ಸಿ.ಎಸ್. ಪಾಟೀಲ್, ವಿದ್ಯಾವರ್ಧಕ ಕಾನೂನು ಕಾಲೇಜು ಮಂಡಳಿ ಅಧ್ಯಕ್ಷ ಬಿ. ಶಿವಲಿಂಗಯ್ಯ, ಸ್ಥಳ: ಜಿಲ್ಲಾ ಪಂಚಾಯತ್ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಫೆಡರೇಷನ್ ಆಫ್ ಇಂಟರ್‌ನ್ಯಾಷನಲ್ ಸ್ಟೂಡೆಂಟ್ಸ್ ಅಸೋಸಿಯೇಷನ್ :** ವೈವಿಧ್ಯತೆಯಲ್ಲಿ ಸಾಮರಸ್ಯ ಕುರಿತು ಚರ್ಚೆ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಾಸ್ತಾವಿಕ ಭಾಷಣ : ಮೈಸೂರು ವಿವಿ ಇಂಟರ್‌ನ್ಯಾಷನಲ್ ಸೆಂಟರ್ ನಿರ್ದೇಶಕ ಪ್ರೊ. ಡಿ. ಆನಂದ್, ಅಧ್ಯಕ್ಷತೆ : ಸೆಂಟ್ರಲ್ ಟಿಬೇಟನ್ ಅಡ್ಮಿನಿಸ್ಟ್ರೇಷನ್ ಅಧ್ಯಕ್ಷ ಸಿಕಿಯಾಂಗ್ ಪೆನ್ಪಾ ಟಸೆರಿಂಗ್, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ಸಂಪನ್ಮೂಲ ವ್ಯಕ್ತಿ ಪ್ರೊ. ಎಸ್.ಎಸ್. ಮಾಲಿನಿ ಅವರಿಂದ ಆರೋಗ್ಯ ಮತ್ತು ಪರಿಸರ ಕುರಿತು ಉಪನ್ಯಾಸ, ಅಧ್ಯಕ್ಷತೆ : ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎಂ. ಚಂದ್ರಶೇಖರ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಮಾನಸಗಂಗೋತ್ರಿ, ಮ. 3.30ಕ್ಕೆ

■ **ಸವಿನೆನಪು ಫೌಂಡೇಷನ್ ಸೇವಾಶ್ರಮ :** 3ನೇ ವರ್ಷದ ವಾರ್ಷಿಕೋತ್ಸವ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಜಿಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡ, ಮುಖ್ಯ ಅತಿಥಿಗಳು : ಪಾಲಿಕೆ ಮಾಜಿ ಸದಸ್ಯ ಪಿ. ದೇವರಾಜು, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸವಿನೆನಪು ಫೌಂಡೇಷನ್ ಅಧ್ಯಕ್ಷೆ ಶ್ರೀಮತಿ ಮಾನಸ ಪಿ. ಗೌಡ, ಕಾರ್ಯದರ್ಶಿ ವಿನಯ್ ಪ್ರಸಾದ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ

■ **ಭಾರತೀಯ ರಂಗ ಶಿಕ್ಷಣ ಕೇಂದ್ರ, ರಂಗಾಯಣ, ಶ್ರೀ ಗುಬ್ಬಿ ವೀರಣ್ಣ ಅಧ್ಯಯನ ಪೀಠ, ವಿವಿ ಲಲಿತ ಕಲಾ ಕಾಲೇಜು, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ** : ರಂಗ ಸಂಯುಕ್ತ, ರಂಗ ಭೂಮಿ ಹಾಗೂ ರಂಗಭೂಮಿಯ ಪೂರಕ ಕಲೆಗಳ ಉಪನ್ಯಾಸ ಮಾಲಿಕೆ, ಟಿ.ಎನ್. ಕೃಷ್ಣಮೂರ್ತಿ ಅವರಿಂದ ಅನ್ವಯಿಕ ರಂಗಭೂಮಿ ಕುರಿತು ಉಪನ್ಯಾಸ, ಸ್ಥಳ: ಬಿ.ವಿ. ಕಾರಂತ ರಂಗಚಾವಡಿ, ಸಂಜೆ 5 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗರಾಜರ ಆರಾಧನೆ ಪ್ರಯುಕ್ತ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಸಂಜೆ 6 ರಿಂದ ಅದಿತಿ ನಡುತೋಟ ಮತ್ತು ಪಿ.ಬಿ. ಕೀರ್ತನ ಅವರಿಂದ ಗಾಯನ, ಸಂಜೆ 7.15 ರಿಂದ ರಂಗನಾಥ್ ಅವರಿಂದ ಗಾಯನ, ಅಮೋಘ ನಡದೂರ್–ಪಿಟೀಲು, ಟಿ.ಎಸ್. ಪ್ರಮಥ್–ಮೃದಂಗ, ಸ್ಥಳ: ಲಕ್ಷ್ಮೀನರಸಿಂಹ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ.

**ಸುತ್ತೂರಿನಲ್ಲಿಂದು**

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ, ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿ ನಿಲಯ :** ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ವಿಶೇಷ ಸಮಾವೇಶ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಲ್. ರೇವಣ್ಣಸಿದ್ದಯ್ಯ, ಮುಖ್ಯ ಅತಿಥಿಗಳು : ಬೆಂಗಳೂರು ನಗರ ವಿವಿ ಕುಲಪತಿ ಪ್ರೊ. ಲಿಂಗರಾಜ ಗಾಂಧಿ, ಸ್ಥಳ: ಅಲ್ಲಮಪ್ರಭು ಸಭಾಂಗಣ (ಶಾಲೆ ಆವರಣ), ಸುತ್ತೂರು ಶ್ರೀ ಕ್ಷೇತ್ರ, ಬೆಳಗ್ಗೆ 11ಕ್ಕೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಲೀಲಾ ಅಪ್ಪಾಜಿ, ಪ್ರಸ್ತುತಿ– ಜಿ.ಶಾಂತಕುಮಾರ್, 6.40 KSOU ಮುಕ್ತವಾಣಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ– ಪ್ರೊ.ಕೆ.ಬಿ. ಪ್ರವೀಣ್, ಕುಲಸಚಿವರು. ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು– ಪ್ರೇಮಲತಾ ದಿವಾಕರ್, ಲಕ್ಷ್ಮೀ ಹೋಯ್ಸಳ, ಉಪಾಸನಾ ಮೋಹನ್ ಬಿ.ಜೆ. ಭರತ್, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಗೀತಾ ವೈ ಪುಟ್ಟಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಪುರುಷೋತ್ತಮ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಡಾ. ಎನ್. ರಮಣಿ– ವೇಣುವಾದನ, 4.00 ಮಹಿಳಾರಂಗ, ಸಖೀ ಸಂವಾದ– ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ–ಉಳಿಸಿ ಆಪತ್ತಿಗಾದ ಹಣ. ಪ್ರಸ್ತುತಿ– ಎಂ.ಎಸ್. ಭಾರತಿ, 4.30 ವೃತ್ತಿ ಮಾರ್ಗದರ್ಶನ, 5.45 KSOU ಮುಕ್ತವಾಣಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ –ಕೃಷಿಲೋಕ, ಪ್ರಸುತಿ–ಆರ್. ಲೋಕೇಶ್ವರಿ, 8.00 ಕನ್ನಡಭಾರತಿ, 9.30 ಎಂ.ಎಸ್. ಶೀಲಾ – ಹಾಡುಗಾರಿಕೆ

## ಸುತ್ತೂರು ಜಾತ್ರಾ ಮಹೋತ್ಸವದ ಇಂದಿನ ಕಾರ್ಯಕ್ರಮಗಳು



**ಕರ್ತೃ ಗದ್ದುಗೆಯಲ್ಲಿ ಪೂಜಾ ಕೈಂಕರ್ಯ ಮತ್ತು ಮೆರವಣಿಗೆ**

ಬೆಳಗ್ಗೆ 4ಕ್ಕೆ ಮಹಾರುದ್ರಾಭಿಷೇಕ, ನಾರಿಕೇಳಾಲಂಕಾರ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ, ಬೆಳಗ್ಗೆ 6.30ಕ್ಕೆ ಕೊಂತಯ್ಯನಹುಂಡಿ ಸ್ನೇಹ–ಸೌಹಾರ್ದ–ಶಾಂತಿ–ಪ್ರಾರ್ಥನಾ ಪಥಸಂಚಲನ, ಬೆಳಗ್ಗೆ 7.30ಕ್ಕೆ ಷಟ್‌ಸ್ಥಲ ಧ್ವಜಾರೋಹಣ : ಮಾಗಡಿ ತಾ. ಶ್ರೀ ಕಂಚುಗಲ್ ಬಂಡೇಮಠದ ಶ್ರೀ ಚರಮೂರ್ತಿ ಮಹಾಲಿಂಗ ಸ್ವಾಮಿಗಳು, ಧರ್ಮ ಸಂದೇಶ : ಗುಂಡ್ಲುಪೇಟೆ ತಾ. ಕುರುಬರಹುಂಡಿ ಶ್ರೀ ವಿರಕ್ತ ಮಠದ ಶ್ರೀ ಇಮ್ಮಡಿ ಮಹಾಂತ ಸ್ವಾಮಿಗಳು, ಬೆಳಗ್ಗೆ 8ಕ್ಕೆ ಸುತ್ತೂರಮ್ಮ ದೇವಸ್ಥಾನ ಅಭಿಷೇಕ ಮತ್ತು ವಿಶೇಷ ಪೂಜೆ, ಬೆಳಗ್ಗೆ 10.30ಕ್ಕೆ ಶ್ರೀ ನಂಜುಂಡೇಶ್ವರ ದೇವಸ್ಥಾನ, ಮಹಾರುದ್ರಾಭಿಷೇಕ, ಸಂಜೆ 6ಕ್ಕೆ ಶ್ರೀ ಮಹದೇಶ್ವರ ಕೊಂಡೋತ್ಸವ, ಸಂಜೆ 6.30ಕ್ಕೆ ಮಹಾರುದ್ರಾಭಿಷೇಕ, ಮಹಾಮಂಗಳಾರತಿ, ರಾತ್ರಿ 8.30ಕ್ಕೆ ಲಕ್ಷ ದೀಪೋತ್ಸವ, ರಾತ್ರಿ 9.30ಕ್ಕೆ ಶ್ರೀ ಮಹದೇಶ್ವರ ಮುತ್ತಿನ ಪಲ್ಲಕ್ಕಿ ಉತ್ಸವ, ಗುರುಬ್ರಹ್ಮೋತ್ಸವ, ಜಂಗಮೋತ್ಸವ

**ಕೃಷಿ ವಿಚಾರ ಸಂಕಿರಣ, ವಿಷಯ : ಕೃಷಿಯಲ್ಲಿ ನೀರಿನ ಸದ್ಬಳಕೆ**

ಸಮ್ಮುಖ : ಹೊಸದುರ್ಗ ಶ್ರೀ ಭಗೀರಥ ಉಪ್ಪಾರ ಮಠದ ಶ್ರೀ ಪುರುಷೋತ್ತಮಾನಂದಪುರಿ ಸ್ವಾಮಿಗಳು, ನೀಲಗಿರಿ ಎಡಪಲ್ಲಿ ಸಿದ್ಧಗಿರಿ ಸಾಯಿ ಧರ್ಮಕ್ಷೇತ್ರ ಮಾತಾ ಶಕ್ತಿ ಮಾಯಿ, ಅಧ್ಯಕ್ಷತೆ : ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ, ಉದ್ಘಾಟನೆ: ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಜೈವಿಕ ಗೊಬ್ಬರ ಉತ್ಪಾದನಾ ಘಟಕ ಶಿಲಾನ್ಯಾಸ : ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರಗಳ ಸಚಿವ ಭಗವಂತ್ ಖೂಬಾ, ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ : ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ, ಮುಖ್ಯ ಅತಿಥಿಗಳು : ಶಾಸಕ ರವಿಕುಮಾರ್‌ಗೌಡ, ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್, ಚಲನಚಿತ್ರ ನಟರಾದ ಡಾಲಿ ಧನಂಜಯ, ಎನ್.ಎಸ್. ನಾಗಭೂಷಣ್, ಕೊಯಮತ್ತೂರು ಸುಗುಣ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಶ್ರೀಮತಿ ಸುಗುಣ ಲಕ್ಷ್ಮೀನಾರಾಯಣಸ್ವಾಮಿ, ಸುಗುಣ ಗ್ರೂಪ್ ಆಫ್ ಇಂಡಸ್ಟ್ರೀಸ್ ಅಧ್ಯಕ್ಷ ವಿ. ಲಕ್ಷ್ಮೀನಾರಾಯಣಸ್ವಾಮಿ, ಯುಎಸ್‌ಎ ಸ್ಯಾನ್‌ಫ್ರಾನ್ಸಿಸ್ಕೋ ಶ್ರೀಮತಿ ಮಮತಾ ಶೇಖರ್ ಮತ್ತು ಚಂದ್ರಶೇಖರ್, ಎ. ರಾಜಶೇಖರ್ ಅವರಿಂದ ಉಪನ್ಯಾಸ, ಬೆಳಗ್ಗೆ 10.30ಕ್ಕೆ, ಮಧ್ಯಾಹ್ನ 2.30ಕ್ಕೆ ರಸಪ್ರಶ್ನೆ.

**ಕೃಷಿ ವಿಚಾರ ಸಂಕಿರಣ ಸಮಾರೋಪ**

ಸಮ್ಮುಖ : ರಾಯಚೂರು ಜಿಲ್ಲೆ ವೀರಗೋಟ ಆದಿಮೌನಲಿಂಗೇಶ್ವರ ಮಠದ ಶ್ರೀ ಅಡವಿಲಿಂಗ ಮಹಾರಾಜರು, ಚಿತ್ರದುರ್ಗದ ಶ್ರೀ ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಅಧ್ಯಕ್ಷತೆ : ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಸಮಾರೋಪ ಭಾಷಣ : ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕ ಜಿ.ಟಿ. ದೇವೇಗೌಡ, ಮಾಜಿ ಶಾಸಕ ಸಿ.ಎಸ್. ಪುಟ್ಟರಾಜು, ಸಾ.ರಾ. ಮಹೇಶ್, ಶಾಸಕರಾದ ಎಸ್. ಮಂಜುನಾಥ್, ಎಂ.ಆರ್. ಮಂಜುನಾಥ್, ವಿಧಾನ ಪರಿಷತ್ ಮಾಜಿ ಸದಸ್ಯ ರಘು ಆಚಾರ್, ಕನ್ನಡ ಚಳುವಳಿ ಕೇಂದ್ರ ಸಮಿತಿ ಅಧ್ಯಕ್ಷ ಗುರುದೇವ ನಾರಾಯಣ ಕುಮಾರ್, ಪ್ರಗತಿಪರ ರೈತ ಹೆಚ್.ಕೆ. ಮಂಜುನಾಥ್ ಅವರಿಂದ ಉಪನ್ಯಾಸ.

**ಸಾಂಸ್ಕೃತಿಕ ಕಾರ್ಯಕ್ರಮಗಳು**

**ಗದ್ದುಗೆ ಆವರಣ :** ಬೆಳಗ್ಗೆ 8ಕ್ಕೆ ನಾದಸ್ವರ, 9ಕ್ಕೆ ಜನಪದ ಸಂಗೀತ : ಶಿವು ಭಜಂತ್ರಿ ಮತ್ತು ತಂಡ, ಲಕ್ಕುಂಡಿ, ಗದಗ ತಾ., ರಾತ್ರಿ 7ಕ್ಕೆ ದ್ವಾದಶ ಜ್ಯೋತಿರ್ಲಿಂಗ ನೃತ್ಯರೂಪಕ : ಕಲಾಸಂದೇಶ ಪ್ರತಿಷ್ಠಾನ, ಜೆ.ಪಿ.ನಗರ, ಮೈಸೂರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣ : ರಾತ್ರಿ 7ಕ್ಕೆ ಸುಗಮ ಸಂಗೀತ : ಗಂಧರ್ವಗಾನ ತಂಡ, ಸುತ್ತೂರು. ವಸ್ತುಪ್ರದರ್ಶನ ಆವರಣ : ರಾ. 8ಕ್ಕೆ ಯಕ್ಷಗಾನ ಬೊಂಬೆಯಾಟ : ಶ್ರೀ ರಾಮೇಶ್ವರ ಕೃಪಾಪೋಷಿಕ ಯಕ್ಷಗಾನ ಸೂತ್ರದ ಬೊಂಬೆ ಮೇಳ, ಹಲ್ಲರೆ, ನಂಜನಗೂಡು ತಾ.; ಗದ್ದುಗೆ ಆವರಣ : ರಾತ್ರಿ 8ಕ್ಕೆ ಭರತನಾಟ್ಯ : ವಿದುಷಿ ಕು. ಕೆ.ಎಸ್. ಸುಹಾಸಿನಿ ಮತ್ತು ಕು. ಕೆ.ಎಸ್. ಧನ್ಯಶ್ರೀ ಮತ್ತು ತಂಡ, ನಂಜನಗೂಡು. ರಾತ್ರಿ 9ಕ್ಕೆ ನಾಟಕ : ಜಗಜ್ಯೋತಿ ಬಸವೇಶ್ವರ, ವಿಶ್ವಭಾರತಿ ರಮ್ಯ ನಾಟಕ ಸಂಘ, ಶಿರೂರ, ಧಾರವಾಡ.

**ನಾಟಕಗಳು ರಾತ್ರಿ 10ಕ್ಕೆ**

**ಹಿರಿಯ ಮನೆ ಆವರಣ : ದಕ್ಷಯಜ್ಞ :** ಶ್ರೀ ಭೈರವೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ಚಿಕ್ಕ ಕಲ್ಲುಣಿ, ಟಿ. ನರಸೀಪುರ ತಾ.

**ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ : ಕುರುಕ್ಷೇತ್ರ :** ರಂಗಭೂಮಿ ಕಲಾ ತಂಡ, ಬೆನಕನಹಳ್ಳಿ, ಟಿ. ನರಸೀಪುರ ತಾ.

**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣ : ಶನಿಪ್ರಭಾವ ಅಥವಾ ರಾಜಾ ವಿಕ್ರಮ,** ಶ್ರೀ ಕಲಿರಾಜಾ ಕಲಾಸೌರಭ ನಾಟಕ ಮಂಡಳಿ, ವೀರನಗೆರೆ, ಮೈಸೂರು.

**ಶ್ರೀ ಘನಲಿಂಗ ಶಿವಯೋಗಿ ಅತಿಥಿ ಗೃಹದ ಹಿಂಭಾಗ : ಕುರುಕ್ಷೇತ್ರ :** ಶ್ರೀ ದೊಂಬ ಕಾಳೇಶ್ವರಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ, ನೇರಲಕೆರೆ, ಶ್ರೀರಂಗಪಟ್ಟಣ ತಾ.

**ವಿಶೇಷ ಕಾರ್ಯಕ್ರಮಗಳು**

ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ –ಕೈಮಗ್ಗ, ಜವಳಿ, ಕರಕುಶಲ ಉತ್ಪನ್ನಗಳು, ಗ್ರಾಮೀಣ ಉತ್ಪನ್ನಗಳು, ಕೈಗಾರಿಕೋತ್ಪನ್ನಗಳು, ಗೃಹ ಬಳಕೆ ವಸ್ತುಗಳು, ಪುಸ್ತಕ ಹಾಗೂ ಕಲಾಕೃತಿಗಳ ಪ್ರದರ್ಶನ, ಪ್ರೌಢಶಾಲಾ ವಿದ್ಯಾರ್ಥಿಗಳು ತಯಾರಿಸಿದ ಶೈಕ್ಷಣಿಕ ಮಾದರಿಗಳ ಪ್ರದರ್ಶನ, ವಿವಿಧ ಸಂಸ್ಥೆಗಳು, ಸಹಕಾರ ಸಂಘಗಳು, ಸ್ವಸಹಾಯ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು ಮತ್ತು ಗುಡಿ ಕೈಗಾರಿಕೆ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಆರೋಗ್ಯ, ವೈದ್ಯಕೀಯ ಮತ್ತು ತಾಂತ್ರಿಕ ವಸ್ತುಪ್ರದರ್ಶನ.

**ಕೃಷಿ ಮೇಳ : ಪ್ರತಿದಿನ ಬೆಳಗ್ಗೆ 10 ರಿಂದ ರಾತ್ರಿ 7.30 ರವರೆಗೆ**

ಹನಿ ನೀರಾವರಿಯಲ್ಲಿ ಭತ್ತದ ಬೆಳೆ ಪ್ರಾತ್ಯಕ್ಷಿಕೆ, ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಮಾರಾಟ, ಹಸು, ಕುರಿ, ಮೇಕೆ ಹಾಗೂ ಕೋಳಿಗಳು–ದೇಸಿ ತಳಿಗಳ ಪ್ರದರ್ಶನ, ವೈವಿಧ್ಯಮಯ ಬೆಳೆಗಳ ಪ್ರಾತ್ಯಕ್ಷಿಕೆ, ಒಂದು ಎಕರೆ ಕೃಷಿ ಬ್ರಹ್ಮಾಂಡ, ವಿದೇಶಿ ಆಹಾರ ಬೆಳೆಗಳಾದ ಚಿಯಾ ಮತ್ತು ಟೆಫ್‌ಗಳ ಪ್ರದರ್ಶನ, ದ್ವಿದಳ ಧಾನ್ಯಗಳ ವಿವಿಧ ತಳಿಗಳ ಪ್ರದರ್ಶನ.

**ಬೆಳಗ್ಗೆ 6 ರಿಂದ 10 ರವರೆಗೆ :** ಜೆಎಸ್‌ಎಸ್ ಆಸ್ಪತ್ರೆ ನುರಿತ ವೈದ್ಯರಿಂದ ಆರೋಗ್ಯ ತಪಾಸಣೆ ಶಿಬಿರ ಮತ್ತು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ವೈದ್ಯರಿಂದ ಕ್ಯಾನ್ಸರ್ ತಪಾಸಣಾ ಶಿಬಿರ

**ದೇಸಿ ಆಟಗಳು**

**ಜೆಎಸ್‌ಎಸ್ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗಾಗಿ :** ಗೋಲಿ, ಬುಗುರಿ, ಹುಲಿ–ಕುರಿ, ನವಕಂಕರಿ, ಹಾವು–ಏಣಿ, ಚೌಕಾಬಾರ, ಚದುರಂಗ, ಪಗ್ಗದ ಆಟ, ತಾಬ್ಲ, ಪಂಚೀ, ಸಿಂಗಮ್, ಕೆಸರುಗದ್ದೆ ಓಟ, ಹಗ್ಗ–ಜಗ್ಗಾಟ, ಅಣ್ಣೆಕಲ್ಲು, ಕುಂಟೆಬಿಲ್ಲೆ, ಅಳಿಗುಳಿಮಣೆ.

**ಗ್ರಾಮೀಣ ಜನತೆಗಾಗಿ :** ಕಲ್ಲುಗುಂಡು ಎತ್ತುವುದು, 50 ಕೆಜಿ ಭಾರದ ಚೀಲ ಹೊತ್ತುಕೊಂಡು ಓಡುವುದು, ಬುಗುರಿ, ಕೆಸರುಗದ್ದೆ ಓಟ, ಕೆಸರುಗದ್ದೆಯಲ್ಲಿ ಹಗ್ಗ ಜಗ್ಗಾಟ, ನಿಂಬೆಹಣ್ಣು ಇರುವ ಚಮಚವನ್ನು ಬಾಯಲ್ಲಿಟ್ಟುಕೊಂಡು ಓಡುವುದು, ಹಗ್ಗಜಗ್ಗಾಟ, ಅಳಗುಳಿಮಣೆ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಡಕೆ ಒಡೆಯುವುದು, ಅಣ್ಣೆಕಲ್ಲು, ತುಂಬಿದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತು ಓಡುವುದು.

**ವಾಸ್ತವ್ಯ ಮತ್ತು ಪ್ರಸಾದ :** ಪ್ರತಿನಿತ್ಯ ಭಕ್ತಾದಿಗಳಿಗೆ ಪ್ರಸಾದ ಹಾಗೂ ದೂರದಿಂದ ಬರುವವರಿಗೆ ವಾಸ್ತವ್ಯಕ್ಕೆ ತಾತ್ಕಾಲಿಕ ಕುಟೀರಗಳಲ್ಲಿ ವ್ಯವಸ್ಥೆ.

## ಬಸ್ ಸೌಲಭ್ಯ, ನೇರ ಪ್ರಸಾರ

**ಬಸ್ ಸೌಲಭ್ಯ:** ವಿವಿಧ ತಾಲೂಕುಗಳು ಮತ್ತು ಜಿಲ್ಲೆಗಳಿಂದ ಸುತ್ತೂರು ಜಾತ್ರಾ ವಿಶೇಷವಾಗಿ ಸಾರಿಗೆ ಬಸ್ ಸೌಕರ್ಯ ಕಲ್ಪಿಸಲಾಗಿದೆ. ಮಾಹಿತಿಗೆ ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು, ದೂ. 08221–232223, 232224 **ಜೆಎಸ್‌ಎಸ್ ಮಹಾವಿದ್ಯಾಪೀಠ. ದೂ.0821–2548212–122. https://www.youtube.com/@jssmhavidyapeetaonlineನಲ್ಲಿ ಸುತ್ತೂರು ಜಾತ್ರೆ ನೇರ ಪ್ರಸಾರ.**

# ಮಹಿಳೆಯರಿಗೆ ಮತ್ತಷ್ಟು 'ಶಕ್ತಿ': 'ಪಿಂಕ್ ಬಸ್' ಪ್ರತ್ಯೇಕ ಸಂಚಾರ

- ಮೊದಲು ಬಿಎಂಟಿಸಿಯಲ್ಲಿ ಪಿಂಕ್ ಬಸ್ ಪರಿಚಯ
- ಮುಜುಗರವಿಲ್ಲದೆ ಮಹಿಳೆಯರು ನಿಶ್ಚಿಂತೆ ಪ್ರಯಾಣ



**ಬಾಪುಲಿಂಗರಾಜ್ ಅರಸ್**

ಮೈಸೂರು, ಫೆ.8– ಶಕ್ತಿ ಯೋಜನೆ ಜಾರಿಯಾದ ನಂತರ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ದಾಖಲೆ ಮೀರಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಸೇರಿದಂತೆ ರಾಜ್ಯದೆಲ್ಲೆಡೆ ಮಹಿಳೆಯರು ಪ್ರತ್ಯೇಕವಾಗಿ ಸಂಚರಿಸಲು ಉಚಿತ ಪಿಂಕ್ ಬಸ್‌ಗಳನ್ನು ಪರಿಚಯಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ರಾಜ್ಯ ಸರ್ಕಾರದ ಗ್ಯಾರಂಟಿಗಳಲ್ಲಿ ಒಂದಾದ 'ಶಕ್ತಿ' ಯೋಜನೆಗೆ ಉತ್ತಮ ಸ್ಪಂದನೆ ದೊರೆತಿದೆ. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣಿಕರು ಕಿಕ್ಕಿರಿದು ತುಂಬುತ್ತಿದ್ದಾರೆ. ಇದರಿಂದ ಬಹಳ ವರ್ಷಗಳ ನಂತರ ಬಸ್‌ಗಳಲ್ಲಿ ಪ್ರಯಾಣಿಕರು ಫುಟ್‌ಬೋರ್ಡ್‌ನಲ್ಲಿ ನಿಂತು ಪ್ರಯಾಣಿಸುವ ಒತ್ತಡ ಏರ್ಪಟ್ಟಿದೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ರಸ್ತೆ ಸಾರಿಗೆಯ ಎಲ್ಲಾ ಬಸ್‌ಗಳಲ್ಲಿ ಈ ತನಕ 200 ಕೋಟಿಗೂ ಅಧಿಕ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ.

ಮಹಿಳಾ ಪ್ರಯಾಣಿಕರಿಗೆ ಕಿರಿಕಿರಿಯಾಗುವಂತಹ ಪ್ರಸಂಗಗಳು ವರದಿ ಆಗುತ್ತಿವೆ. ಈ ಹಿನ್ನೆಲೆಯಲ್ಲಿ ಮಹಿಳಾ ಪ್ರಯಾಣಿಕರು ರಸ್ತೆ ಸಾರಿಗೆ ನಿಗಮದ ಬಸ್‌ಗಳಲ್ಲಿ ಪ್ರಯಾಣಿಸಲು ಮುಜುಗರ ಅನುಭವಿಸುವಂತಾಗಿದೆ.

ಉಚಿತ ಪ್ರಯಾಣದ ಕಾರಣ ಬಸ್ ತುಂಬಾ ಮಹಿಳೆಯರೇ ತುಂಬಿರುವುದರಿಂದ ಪುರುಷರಿಗೆ ಅವಕಾಶವೇ ಇಲ್ಲದಂತಾಗಿದೆ. ಮಹಿಳೆಯರೊಡನೆ ಪೈಪೋಟಿಗಿಳಿದು ಪ್ರಯಾಣಿಸುವ ದಯನೀಯ ಪರಿಸ್ಥಿತಿ ಪುರುಷರದ್ದಾಗಿದೆ.

ಈ ಎಲ್ಲಾ ಕಾರಣಗಳಿಂದ ಮಹಿಳಾ ಪ್ರಯಾಣಿಕರು ಪ್ರತ್ಯೇಕವಾಗಿ ಸಂಚರಿಸಲು ಪಿಂಕ್ ಬಸ್ ಪರಿಚಯಿಸಲು ಸರ್ಕಾರ ಚಿಂತನೆ ಮಾಡಿದೆ. ಮಹಿಳೆಯರಿಗೆ ಪ್ರತ್ಯೇಕವಾದ ಪಿಂಕ್ ಬಸ್‌ಗಳು ಸಂಚರಿಸುವುದರಿಂದ ಯಾವುದೇ ಪ್ರಯಾಸ ಅಥವಾ ಮುಜುಗರವಿಲ್ಲದೆ ಮಹಿಳೆಯರು ನಿಶ್ಚಿಂತೆಯಿಂದ ಪ್ರಯಾಣಿಸಬಹುದು. ಜೊತೆಗೆ ಸಾಮಾನ್ಯ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರು ಸ್ವಲ್ಪ ಮಟ್ಟಿಗೆ ಕಡಿಮೆಯಾಗುವ ಕಾರಣ ಪುರುಷರ ಪ್ರಯಾಣಕ್ಕೆ ಅವಕಾಶ ಸಿಕ್ಕಿದಂತಾಗುತ್ತದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸರ್ಕಾರ ಪಿಂಕ್ ಬಸ್ ಪರಿಚಯಿಸುತ್ತಿದೆ.

ರಾಷ್ಟ್ರ ರಾಜಧಾನಿ ದೆಹಲಿ, ಉತ್ತರ ಪ್ರದೇಶದ ಲಖನೌ ಸೇರಿದಂತೆ ಹಲವು ರಾಜ್ಯಗಳಲ್ಲಿ ಮಹಿಳೆಯರ ಪ್ರತ್ಯೇಕ ಪ್ರಯಾಣಕ್ಕೆ ಈಗಾಗಲೇ ಪಿಂಕ್ ಬಸ್‌ಗಳು ಸಂಚರಿಸುತ್ತಿವೆ. ಇದೇ ಮಾದರಿಯಲ್ಲಿ ಈಗ ಮೈಸೂರು ಸೇರಿದಂತೆ ಕರ್ನಾಟಕದಲ್ಲಿ ಪಿಂಕ್ ಬಸ್‌ಗಳ ಸಂಚಾರ ವ್ಯವಸ್ಥೆ ಕಲ್ಪಿಸಲು ಸರ್ಕಾರ ಮುಂದಾಗಿದೆ.

ಬಿಎಂಟಿಸಿಗಾಗಿ ಒಂದು ಸಾವಿರ ಬಸ್‌ಗಳನ್ನು ಸರ್ಕಾರ ಖರೀದಿಸುತ್ತಿದೆ ಇದರಲ್ಲಿ ಕೆಲವು ಬಸ್‌ಗಳನ್ನು ಪಿಂಕ್ ಬಸ್‌ಗಳಾಗಿ ಮಾರ್ಪಡಿಸಲು ಸರ್ಕಾರ ಚಿಂತಿಸಿದೆ.

ಮೊದಲು ಬಿಎಂಟಿಸಿಯಲ್ಲಿ ಈ ಬಸ್‌ಗಳನ್ನು ಪರಿಚಯಿಸಿ, ತರುವಾಯ ಮೈಸೂರು ಸೇರಿದಂತೆ ಕರ್ನಾಟಕದ ಇತರೆ ಜಿಲ್ಲೆಗಳಲ್ಲಿ ಸಂಚಾರ ಆರಂಭಿಸಲು ರಸ್ತೆ ಸಾರಿಗೆ ನಿಗಮಗಳು ಯೋಜನೆ ರೂಪಿಸಿವೆ.

ಈ ಸಂಬಂಧ ರಸ್ತೆ ಸಾರಿಗೆ ನಿಗಮದ ಅಧಿಕಾರಿಗಳು ಸಭೆ ನಡೆಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಸಾರಿಗೆ ಸಚಿವ ರಾಮಲಿಂಗರೆಡ್ಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬಜೆಟ್‌ಗೂ ಮುನ್ನ ಭೇಟಿ ಮಾಡಿ ಪ್ರಸ್ತಾವನೆ ಸಲ್ಲಿಸಲಿದ್ದಾರೆ.

### ಶೀಘ್ರವೇ ಸಿಎಂ ಸಿದ್ದರಾಮಯ್ಯ ಭೇಟಿ ಮಾಡಿ ಪ್ರಸ್ತಾವನೆ



ಪಿಂಕ್ ಬಸ್‌ಗಳ ಸಂಚಾರಕ್ಕೆ ಅನುಮೋದನೆ ನೀಡುವಂತೆ ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿ ಮಾಡಿ ಮನವಿ ಸಲ್ಲಿಸುತ್ತೇನೆ. ಶಕ್ತಿ ಯೋಜನೆಯಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿರುವ ಕಾರಣ ಪಿಂಕ್ ಬಸ್‌ಗಳನ್ನು ಪರಿಚಯಿಸುವಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲಹೆ ನೀಡಿದ್ದಾರೆ. ಈಗಾಗಲೇ ಆಯ–ವ್ಯಯ ಬಹುತೇಕ ಪೂರ್ಣಗೊಂಡಿರುವ ಕಾರಣ ಈ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಣೆ ಮಾಡಲು ಸಾಧ್ಯವಿಲ್ಲ. ಆದರೆ ಯೋಜನೆ ಘೋಷಣೆಗೆ ಬಜೆಟ್ಟೇ ಬೇಕೆಂದಿಲ್ಲ. ಮುಖ್ಯಮಂತ್ರಿಗಳು ಮನಸು ಮಾಡಿದರೆ ಬಜೆಟ್ ಬಿಟ್ಟು ವಿಶೇಷ ಘೋಷಣೆ ಮಾಡಬಹುದು. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರನ್ನು ಬಜೆಟ್‌ಗೂ ಮುನ್ನ ಭೇಟಿ ಮಾಡಿ ಪಿಂಕ್ ಬಸ್‌ಗಳನ್ನು ಪರಿಚಯಿಸಲು ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸುತ್ತೇನೆ. ಇಂತಹ ಬಸ್‌ಗಳನ್ನು ಪರಿಚಯಿಸಿದರೆ ಮಹಿಳೆಯರಿಗೆ ಬಹಳ ಉಪಯೋಗವಾಗಲಿದೆ. ಸರಕು ಸಾಗಾಣಿಕೆಯ ಕೆಎಸ್‌ಆರ್‌ಟಿಸಿ ಕಾರ್ಗೋ ವಾಹನಗಳನ್ನು ರಾಜ್ಯದ ನಾಲ್ಕು ನಿಗಮಗಳಿಗೆ ನೀಡಲಾಗಿದೆ. ಈ ವಾಹನಗಳು ಮೈಸೂರು ಸೇರಿದಂತೆ ಹಲವೆಡೆ ಸಂಚರಿಸಲಿವೆ. ಆದರೆ ಮೈಸೂರಿಗೆ ಪ್ರತ್ಯೇಕವಾಗಿ ಕೆಎಸ್‌ಆರ್‌ಟಿಸಿ ಕಾರ್ಗೋ ವಾಹನಗಳನ್ನು ನೀಡುವ ಪ್ರಸ್ತಾವನೆ ಸದ್ಯಕ್ಕಿಲ್ಲ.

– **ರಾಮಲಿಂಗಾರೆಡ್ಡಿ**, ಸಾರಿಗೆ ಸಚಿವ

# ಚಲನೆ ಮೂಲಕವೂ ಪಾತ್ರದ ಭಾವನೆಯ ಪರಿಣಾಮಕಾರಿ ಅಭಿವ್ಯಕ್ತಿ ಸಾಧ್ಯ

### ನೃತ್ಯ ಸಂಯೋಜಕಿ ವೀಣಾ ಬಸವರಾಜಯ್ಯ ಅಭಿಮತ




ನೃತ್ಯ ಸಂಯೋಜಕಿ ವೀಣಾ ಬಸವರಾಜಯ್ಯ ಕಥಾವಸ್ತುವನ್ನು ಚಲನೆ ಮೂಲಕ ವ್ಯಕ್ತಪಡಿಸುವ ಬಗ್ಗೆ ವಿವರಿಸುತ್ತಿರುವುದು

ಮೈಸೂರು,ಫೆ.8(ಪಿಎಂ)– ಚಲನೆ ಮೂಲಕವೂ ಪಾತ್ರವೊಂದರ ಭಾವನೆಯನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಳಿಸಬಹುದು. ನನ್ನ ಅನಿಸಿಕೆಯಲ್ಲಿ ಚಲನೆ ಎಂಬುದು ಒಂದು ಭಾಷೆ ಇದ್ದಂತೆ ಎಂದು ನೃತ್ಯ ಸಂಯೋಜಕಿ ವೀಣಾ ಬಸವರಾಜಯ್ಯ ಅಭಿಪ್ರಾಯಪಟ್ಟರು.

ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಅಧ್ಯಯನ ಪೀಠ, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಸಂಯುಕ್ತಾಶ್ರಯದಲ್ಲಿ ಫೆ.9ರವರೆಗೆ ಹಮ್ಮಿಕೊಂಡಿರುವ 'ರಂಗಸಂಯುಕ್ತ–ರಂಗಭೂಮಿ, ಅದರ ಪೂರಕ ಕಲೆಗಳು' ಕುರಿತ ಉಪನ್ಯಾಸ ಮಾಲಿಕೆಯಲ್ಲಿ ಗುರುವಾರ 'ನೃತ್ಯ (ಚಲನೆ)' ಕುರಿತು ಮಾತನಾಡಿದರು.

ನನ್ನ ಪ್ರಕಾರ ನೃತ್ಯವೆಂದರೆ ಅದೊಂದು ರೂಪಕ. ಭರತನಾಟ್ಯ, ಬ್ಯಾಲೇ, ಕುಚಿಪುಡಿ ನೃತ್ಯ ಪ್ರಕಾರಗಳು ರೂಪಕ ಆಧಾರಿತವಾಗಿವೆ. ನಮ್ಮ ದೇಹದಲ್ಲಿ ಯಾವುದೇ ತರದ ಚಲನೆಯಾದರೂ ಅದರ ಮೂಲಕ ಭಾವನೆ ವ್ಯಕ್ತಪಡಿಸಲು ಸಾಧ್ಯವಿದೆ. ಸುಮ್ಮನೆ ಕೈಯ್ಯನ್ನು ಮೇಲೆ–ಕೆಳಗೆ ಮಾಡಿದರೂ ಅದರಲ್ಲೂ ಅಭಿನಯವಿದೆ. ಕೇವಲ ಮುಖಾಭಿನಯಕ್ಕೆ ಸೀಮಿತ ಎನ್ನುವಂತಿಲ್ಲ. ನಡೆಯುವುದು, ನಿಲ್ಲುವುದು, ಓಡುವುದು ಸೇರಿದಂತೆ ಕೈ–ಕಾಲಿನ ಚಲನೆಯಲ್ಲಿಯೂ ಭಾವನೆ ಮತ್ತು ಕಥೆಗಳನ್ನು ವ್ಯಕ್ತಪಡಿಸಲು ಸಾಧ್ಯವಿದೆ ಎಂದು ಹೇಳಿದರು.

ಭರತನಾಟ್ಯ, ಕುಚಿಪುಡಿ, ಬ್ಯಾಲೆ ನೃತ್ಯಗಳು ತನ್ನದೇ ಆದ ಶಬ್ದಕೋಶ ಹೊಂದಿವೆ. ಅದರಲ್ಲಿ ಆಕಾರ ಎಂಬುದು ಅತ್ಯಂತ ಮುಖ್ಯ. ಶಬ್ದಕ್ಕೆ ಆಕಾರ ನೀಡಿರುವುದು ಭಾಷೆಯ ವೈಶಿಷ್ಟ್ಯ. ಭರತನಾಟ್ಯದಲ್ಲಿ ಪ್ರತಿಯೊಂದು ಹಸ್ತಮುದ್ರೆಗೆ ಅದರದೇ ಆದ ಅರ್ಥಗಳಿವೆ. ಅಲ್ಲದೆ ಈ ನೃತ್ಯ ಪ್ರಕಾರದಲ್ಲಿ ಪ್ರತಿ ಸಂಬಂಧ ಮತ್ತು ಕ್ರಿಯೆಯನ್ನು ಕ್ರೋಢೀಕರಿಸಿರುವ ಭಾಷೆ ಅಳವಡಿಸಿಕೊಳ್ಳಲಾಗಿದೆ ಎಂದರು. ಇದರೊಂದಿಗೆ ವೀಣಾ ಬಸವರಾಜಯ್ಯ ಅವರು ವಿವಿಧ ಕಥಾವಸ್ತುಗಳನ್ನು ಚಲನೆಯ ಮೂಲಕ ವ್ಯಕ್ತಪಡಿಸಿ ಪ್ರಾಯೋಗಿಕವಾಗಿಯೂ ಚಲನೆಯ ಬಗ್ಗೆ ವಿವರಿಸಿದರು.

# ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಜನ್ಮದಿನ ಅದ್ದೂರಿ ಆಚರಣೆ




ಮೈಸೂರಿನ ಇಟ್ಟಿಗೆಗೂಡಿನ ನಾಗರಿಕರ ವತಿಯಿಂದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ಜನ್ಮದಿನ ಆಚರಿಸಲಾಯಿತು.

ಮೈಸೂರು, ಫೆ.8(ಎಂಕೆ)– ನಗರದ ಇಟ್ಟಿಗೆಗೂಡಿನ ನಾಗರಿಕರ ವತಿಯಿಂದ ಮಾಜಿ ಶಾಸಕ ಎಂ.ಕೆ ಸೋಮಶೇಖರ್ ಅವರ ಜನ್ಮದಿನವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಈ ವೇಳೆ ಮೈಸೂರಿನ ಮರ್ಚೆಂಟ್ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಟೈಲ್ಸ್ ಮಹೇಶ್ ಮಾತನಾಡಿ, ಆಡಂಬರವಿಲ್ಲದ ಸರಳ–ಸಜ್ಜನ ರಾಜಕಾರಣಿ ಎಂ.ಕೆ.ಸೋಮಶೇಖರ್, ಇಟ್ಟಿಗೆಗೂಡಿನ ಅಭಿವೃದ್ಧಿ ಶ್ರಮಿಸಿದ್ದಾರೆ. ವಸಂತ ಮಹಲ್‌ನ ಆವರಣದಲ್ಲಿ ದೊಡ್ಡ ನೀರಿನ ಟ್ಯಾಂಕ್ ನಿರ್ಮಾಣ ಮಾಡಿಸಿಕೊಡುವ ಮೂಲಕ ಇಟ್ಟಿಗೆಗೂಡಿನಲ್ಲಿದ್ದ ನೀರಿನ ಸಮಸ್ಯೆಗೆ ಪರಿಹರಿಸಿದರು. ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲು ಒತ್ತಡ ತಂದು ಇಟ್ಟಿಗೆಗೂಡಿನಲ್ಲಿ ಉಂಟಾಗುತ್ತಿದ್ದ ವಾಹನಗಳ ಕಿರಿಕಿರಿ ತಪ್ಪಿಸಿದ್ದಾರೆ. ಇಟ್ಟಿಗೆಗೂಡಿನ ಚರಂಡಿ ಸಮಸ್ಯೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳ ಮೂಲಕ ಕೆ.ಆರ್.ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ತಮ್ಮದೆ ಕೊಡುಗೆ ನೀಡಿದ್ದಾರೆ ಎಂದರು.

**ಎಂಪಿ ಟಿಕೆಟ್‌ಗೆ ಒತ್ತಾಯ:** ಅಪಾರ ರಾಜಕೀಯ ಅನುಭವ ಹಾಗೂ ಸದಾ ಜನರೊಂದಿಗಿರುವ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರಿಗೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದಿಂದ ಟಿಕೆಟ್ ನೀಡಬೇಕು ಎಂದು ಹಲವರು ಒತ್ತಾಯಿಸಿದರು.

ಕಾಂಗ್ರೆಸ್ ಮುಖಂಡರಾದ ಸಿದ್ದಲಿಂಗಣ್ಣ, ಫುಟ್ಬಾಲ್ ಮಂಜು, ಜಿ.ಸೋಮಶೇಖರ್, ಪ್ರಭಾಕರ್, ಎಡ್ವಿನ್, ಆರ್.ಹೆಚ್.ಕುಮಾರ್, ಧರ್ಮ, ಚಿಕ್ಕಲಿಂಗು, ಕುಮಾರ್, ರವೀಶ್, ಪೈಲ್ವಾನ್ ಮಹೇಶ್, ಪ್ರವೀಣ್, ಮಹಿಳಾ ಮುಖಂಡರಾದ ಲತಾ ರಂಗನಾಥ್, ಮಂಜುಳಾ ಮತ್ತಿತರರು ಉಪಸ್ಥಿತರಿದ್ದರು.

# ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಇನ್ನೊಂದೇ ವಾರ ಬಾಕಿ

### ತಾಂತ್ರಿಕ ದೋಷವಿರುವ ನೂರಾರು ವಾಹನ ಸವಾರರ ಪರದಾಟ

ಮೈಸೂರು, ಫೆ.8(ಬಿಎಲ್‌ಯು)– ವಾಹನಗಳಿಗೆ ಕಡ್ಡಾಯವಾಗಿ ಹೆಚ್‌ಎಸ್‌ಆರ್‌ಪಿ (ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ಪ್ಲೇಟ್) ನಂಬರ್ ಪ್ಲೇಟ್ ಅಳವಡಿಸಲು ಇನ್ನು 9 ದಿನ ಕಾಲಾವಕಾಶವಿದ್ದು, ಆರ್‌ಸಿ ಬುಕ್‌ನಲ್ಲಿ ತಾಂತ್ರಿಕ ದೋಷವಿರುವ ನೂರಾರು ವಾಹನ ಸವಾರರು ಪರದಾಡುತ್ತಿದ್ದಾರೆ.

ಕರ್ನಾಟಕದಲ್ಲಿ ಏಪ್ರಿಲ್ 1, 2019ಕ್ಕಿಂತ ಮೊದಲು ನೋಂದಣಿ ಆಗಿರುವ ದ್ವಿಚಕ್ರ, ತ್ರಿಚಕ್ರ, ಲಘು ಮೋಟಾರು, ಪ್ರಯಾಣಿಕ ಕಾರು ಸೇರಿದಂತೆ ಇತರೆ ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ(ಅತಿ ಸುರಕ್ಷಿತ ನೋಂದಣಿ ಫಲಕ) ನಂಬರ್ ಪ್ಲೇಟ್ ಅಳವಡಿಸಲು ಫೆಬ್ರವರಿ 17 ಕೊನೆಯ ದಿನವಾಗಿದೆ.

ಗಡುವಿನೊಳಗೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸದ ವಾಹನ ಸವಾರರಿಗೆ ದಂಡ ವಿಧಿಸಲು ಸರ್ಕಾರ ತೀರ್ಮಾನಿಸಿದೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಇಲ್ಲದೆ ಮೊದಲ ಬಾರಿಗೆ ಸಿಕ್ಕಿ ಬಿದ್ದರೆ 1,000 ರೂಪಾಯಿ ಹಾಗೂ ಎರಡನೇ ಬಾರಿಗೆ ಸಿಕ್ಕಿ ಬಿದ್ದರೆ 2,000 ರೂಪಾಯಿ ದಂಡ ವಿಧಿಸಲು ತೀರ್ಮಾನಿಸಲಾಗಿದೆ.

ಇದರಿಂದ ಬಹಳಷ್ಟು ವಾಹನ ಸವಾರರು ಈಗಾಗಲೇ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್‌ಗಳನ್ನು ವಾಹನಗಳಿಗೆ ಅಳವಡಿಸಿಕೊಂಡಿದ್ದಾರೆ. ತಾವು ಖರೀದಿ ಮಾಡಿದ ವಾಹನಗಳ ಡೀಲರ್ ಬಳಿ ಆರ್‌ಸಿ ಸೇರಿದಂತೆ ಇತರೆ ದಾಖಲಾತಿ ನೀಡಿ ಹೆಚ್‌ಎಸ್‌ಆರ್‌ಪಿ ನಂಬರ್



ಪ್ಲೇಟ್ ಅಳವಡಿಸಿಕೊಂಡಿದ್ದಾರೆ.

ಆದರೆ ಕೆಲವು ವಾಹನ ಸವಾರರ ಆರ್‌ಸಿ ಬುಕ್‌ನಲ್ಲಿ ದೋಷವಿದೆ. ಜೊತೆಗೆ ಹೀರೋ ಹೋಂಡಾ ಸೇರಿದಂತೆ ಇತರೆ ಕಂಪನಿಗಳು ಪ್ರತ್ಯೇಕಗೊಂಡು ನೂತನ ಹೆಸರಿನಲ್ಲಿ ಕಂಪನಿ ಆರಂಭಗೊಂಡಿರುವುದರಿಂದ ವಾಹನ ಸವಾರರು ಪೇಚಿಗೆ ಸಿಲುಕಿದ್ದಾರೆ.

ಹೀರೋ ಹೋಂಡಾ ಕಂಪನಿ ಪ್ರತ್ಯೇಕಗೊಂಡು ಹೀರೋ ಹಾಗೂ ಹೋಂಡಾ ಕಂಪನಿಗಳು ಕಾರ್ಯಾಚರಿಸುತ್ತಿವೆ. ಈಗ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಪಡೆಯಲು ಆ ಶೋರೂಮ್‌ಗಳೇ ಇಲ್ಲದಂತಾಗಿದೆ.

ಈ ಹಿನ್ನೆಲೆಯಲ್ಲಿ ತಾಂತ್ರಿಕ ದೋಷವಿರುವ 500ಕ್ಕೂ ಹೆಚ್ಚು ವಾಹನ ಸವಾರರು ಈಗ ಆರ್‌ಟಿಓ ಕದ ತಟ್ಟಿದ್ದಾರೆ. ತಮ್ಮ ಈ ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಿದ್ದಾರೆ.

ಆರ್‌ಸಿ ಬುಕ್‌ನಲ್ಲಿ ತಾಂತ್ರಿಕ ದೋಷ ಸೇರಿದಂತೆ ವಾಹನ ತಯಾರಿಕಾ ಕಂಪನಿಗಳು ಪ್ರತ್ಯೇಕಗೊಂಡು ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಪಡೆಯದ 500ಕ್ಕೂ ಹೆಚ್ಚು ವಾಹನ ಸವಾರರು ಆರ್‌ಟಿಓನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಈ ದಾಖಲಾತಿಗಳನ್ನು ಇ–ಮೇಲ್ ಮೂಲಕ ಪ್ರಧಾನ ಕಚೇರಿಗೆ ಕಳುಹಿಸಿದ್ದೇವೆ. ಅಲ್ಲಿಂದ ಅನುಮತಿ ದೊರೆತ ನಂತರ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್‌ಗೆ ವಾಹನ ಸವಾರರು ಅರ್ಜಿ ಸಲ್ಲಿಸಬಹುದು ಎಂದು ಮೈಸೂರು ಆರ್‌ಟಿಓ ದೇವಿಕಾ ತಿಳಿಸಿದ್ದಾರೆ.

ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಪಡೆಯಲು ಫೆಬ್ರವರಿ 17 ಕೊನೆಯ ದಿನವಾಗಿದ್ದು, ಹೀಗೆ ತಾಂತ್ರಿಕ ದೋಷದಿಂದ ಆರ್‌ಟಿಓಗೆ ಅರ್ಜಿ ಸಲ್ಲಿಸುವವರು ದಂಡ ಪಾವತಿ ಮಾಡಬೇಕಿಲ್ಲ. ಆರ್‌ಟಿಓಗೆ ಅರ್ಜಿ ಸಲ್ಲಿಸಿರುವ ದಾಖಲಾತಿಯನ್ನು ಪೊಲೀಸರು ಹಾಗೂ ಆರ್‌ಟಿಓಗೆ ತೋರಿಸಿದರೆ ಅವರು ವಿನಾಯಿತಿ ನೀಡುತ್ತಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಫೆಬ್ರವರಿ 17ರ ಗಡುವು ನಂತರ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸದ ವಾಹನ ಸವಾರರಿಗೆ ದಂಡ ವಿಧಿಸಲಾಗುವುದು. ಆದರೆ ದಂಡ ವಿಧಿಸಲು ಮೈಸೂರು ಆರ್‌ಟಿಓನಲ್ಲಿ ಪ್ರತ್ಯೇಕ ತಂಡ ರಚನೆ ಮಾಡಿಲ್ಲ. ಆದರೆ ಎಫ್‌ಸಿ ಸೇರಿದಂತೆ ಇತರೆ ಉದ್ದೇಶಕ್ಕೆ ಆರ್‌ಟಿಓಗೆ ಬರುವ ವಾಹನ ಸವಾರರು ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಿಕೊಂಡಿರದಿದ್ದರೆ ಯಾವುದೇ ಪ್ರಕ್ರಿಯೆ ಸಾಧ್ಯವಿಲ್ಲ ಎಂದು ದೇವಿಕಾ ಎಚ್ಚರಿಸಿದ್ದಾರೆ.

# ಫೆ.16ಕ್ಕೆ 'ಲೇಡಿಸ್ ಬಾರ್' ಚಿತ್ರ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಎಂ.ಎನ್.ಮುತ್ತು ಮಾತನಾಡಿದರು.

ಮೈಸೂರು, ಫೆ.8(ಜಿಎ)–ಡಿ.ಎಂ.ಸಿ. ಪ್ರೊಡಕ್ಷನ್ಸ್ ಅಡಿ ನಿರ್ಮಿಸಿರುವ 'ಲೇಡಿಸ್ ಬಾರ್' ಸಿನಿಮಾ ಫೆ.16ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ಚಿತ್ರದ ನಿರ್ದೇಶಕ ಎಂ.ಎನ್.ಮುತ್ತು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಣ್ಣು ಮಕ್ಕಳು ಕುಡಿತದ ಚಟಕ್ಕೆ ಬಲಿಯಾದರೆ ಸಮಾಜದಲ್ಲಿ ಯಾವೆಲ್ಲ ದುಷ್ಪರಿಣಾಮ ಉಂಟಾಗಬಹುದು ಎಂಬುದನ್ನು ಚಿತ್ರ ತಿಳಿಸಲಿದೆ. ಬೆಂಗಳೂರಿನಲ್ಲಿ ಬಹುತೇಕ ಚಿತ್ರೀಕರಣ ನಡೆದಿದ್ದು, ಮಂಡ್ಯ, ಮದ್ದೂರಿನಲ್ಲೂ ಕೆಲ ಸನ್ನಿವೇಶಗಳನ್ನು ಚಿತ್ರೀಕರಿಸಲಾಗಿದೆ. ಮಹಿಳೆಯರೇ ಪ್ರಧಾನ ಭೂಮಿಕೆಯಲ್ಲಿ ನಟಿಸಿದ್ದಾರೆ. ನಾಲ್ಕು ಹಾಡುಗಳು, ಮೂರು ಸಾಹಸ ದೃಶ್ಯಗಳಿದ್ದು, ಕುಟುಂಬ ಸಮೇತ ವೀಕ್ಷಿಸುವ ಸಿನಿಮಾ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಚಿತ್ರದ ನಿರ್ಮಾಪಕ ಟಿ.ಎಂ.ಸೋಮರಾಜ, ನಟಿಯರಾದ ಡಯಾನ, ಶೋಭಾ ರಾಣಿ, ಶಿವಾನಿ ಗೌಡ, ಪ್ರೇರಣಾ ಉಪಸ್ಥಿತರಿದ್ದರು.

# ಚಾ.ನಗರ ಕ್ಷೇತ್ರಕ್ಕೆ ಬಿ.ಸೋಮಶೇಖರ್‌ಗೆ ಕಾಂಗ್ರೆಸ್ ಟಿಕೆಟ್ ನೀಡಲು ಒತ್ತಾಯ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಟಿ.ಎಂ.ಮಹೇಶ್ ಮಾತನಾಡಿದರು.


ಮೈಸೂರು, ಫೆ.8(ಜಿಎ)– ಕಾಂಗ್ರೆಸ್ ಪಕ್ಷದಿಂದ ಮಾಜಿ ಸಚಿವ ಬಿ.ಸೋಮಶೇಖರ್ ಅವರಿಗೆ ಚಾಮರಾಜನಗರ ಲೋಕಸಭಾ ಕ್ಷೇತ್ರದ ಟಿಕೆಟ್ ನೀಡಬೇಕು ಎಂದು ದಲಿತ ವೆಲ್‌ಫೇರ್ ಟ್ರಸ್ಟ್ ಒತ್ತಾಯಿಸಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಗೌರವಾಧ್ಯಕ್ಷ ಟಿ.ಎಂ.ಮಹೇಶ್ ಮಾತನಾಡಿ, ಸಮಾಜಮುಖಿ ಚಿಂತನೆ ಮತ್ತು ಅಪಾರ ಆಡಳಿತ ಅನುಭವ ಹೊಂದಿರುವ ಸೋಮಶೇಖರ್ ಅವರಿಂದ ಕ್ಷೇತ್ರದ ಅಭಿವೃದ್ಧಿ ಸಾಧ್ಯವಿದೆ. ಅವರಿಗೆ ಮಾಜಿ ಸಂಸದ ದಿ. ಆರ್.ಧ್ರುವನಾರಾಯಣ್ ಅವರ ಸ್ಥಳವನ್ನು ತುಂಬುವ ಸಾಮರ್ಥ್ಯವಿದೆ. ಪಕ್ಷ ಅವರಿಗೆ ಅವಕಾಶ ನೀಡಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಉಪಾಧ್ಯಕ್ಷ ನಾಗರಾಜ್, ಕಾರ್ಯದರ್ಶಿ ಚಿಕ್ಕಂದಾನಿ, ಲೇಖಕ ಸಿದ್ದಸ್ವಾಮಿ ಉಪಸ್ಥಿತರಿದ್ದರು.



ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಚಂದ್ರವನ ಆಶ್ರಮದ ಪೀಠಾಧ್ಯಕ್ಷ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಮಹಾಸ್ವಾಮಿಗಳ ಆಶೀರ್ವಾದ ಪಡೆದರು. ಈ ವೇಳೆ ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಅವರ ಪುತ್ರ ಶ್ರೀನಿವಾಸ ದೇವೇಗೌಡ, ಕಂಟ್ರಾಕ್ಟರ್ ಮಾದೇವಣ್ಣ, ವಿಕ್ರಾಂತ್ ಮಾದೇವ್ ಇನ್ನಿತರರಿದ್ದರು.

# ನ್ಯಾಯಾಧೀಶರ ನಿವಾಸಗಳ ವರ್ಚುವಲ್ ಉದ್ಘಾಟನೆ

ಮೈಸೂರು, ಫೆ.8– ಮೈಸೂರು ಜಿಲ್ಲಾ ನ್ಯಾಯಾಂಗ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ವಕೀಲರ ಸಂಘಗಳ ಸಂಯುಕ್ತ ಆಶ್ರಯದಲ್ಲಿ 'ಹುಣಸೂರು ಮತ್ತು ಪಿರಿಯಾಪಟ್ಟಣದ ನ್ಯಾಯಾಧೀಶರುಗಳ ನಿವಾಸಗಳ ವರ್ಚುವಲ್ ಉದ್ಘಾಟನೆ' ಮತ್ತು 'ಮೈಸೂರು ಜಿಲ್ಲಾ ನ್ಯಾಯಾಂಗ ನೌಕರರ ಸಂಘದ ಕಟ್ಟಡ ಮತ್ತು ಮೈಸೂರಿನ ಮಳಲವಾಡಿಯ ಹೊಸ ನ್ಯಾಯಾಲಯಗಳ ಸಂಕೀರ್ಣದಲ್ಲಿ ಎರಡು ಹೆಚ್ಚುವರಿ ಲಿಫ್ಟ್‌ಗಳ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವು ಫೆ.13 ರಂದು ಸಂಜೆ 6 ಗಂಟೆಗೆ ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ನಡೆಯಲಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ನ್ಯಾ.ಪಿ.ಎಸ್. ದಿನೇಶ್‌ಕುಮಾರ್ ಉದ್ಘಾಟನೆ ಮಾಡಲಿದ್ದಾರೆ. ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಆಡಳಿತಾತ್ಮಕ ನ್ಯಾಯಮೂರ್ತಿ ನ್ಯಾ. ಶ್ರೀನಿವಾಸ್ ಹರೀಶ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.



ಕೇಂದ್ರ ಬಜೆಟ್ ಅಧಿವೇಶನಕ್ಕಾಗಿ ಸಂಸತ್‌ಗೆ ತೆರಳಿದ ಚಾಮರಾಜನಗರ ಕ್ಷೇತ್ರದ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರೊಂದಿಗೆ ಚಾರ್ಟೆಡ್ ಅಕೌಂಟೆಂಟ್ ಗಿರೀಶ್ ಅವರನ್ನು ಕಾಣಬಹುದು.

## ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಫೆ 8– ಎನ್.ಜೆ.ಎಸ್. ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಫೆ. 13 ರಂದು ಬೆಳಗ್ಗೆ 9.30 ರಿಂದ ಮ. 2 ರವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 94487 53597, 99161 55453, 94487 38657 ಸಂಪರ್ಕಿಸಬಹುದು.



# ಅನಧಿಕೃತ ವಿದ್ಯುತ್ ಸಂಪರ್ಕ; 27 ಪ್ರಕರಣ ದಾಖಲು

ಮೈಸೂರು, ಫೆ.8(ಎಸ್‌ಬಿಡಿ)– ಮೈಸೂರು ಸಮೀಪದ ಖಾಸಗಿ ಬಡಾವಣೆಯಲ್ಲಿ ಅನಧಿಕೃತವಾಗಿ ವಿದ್ಯುತ್ ಬಳಕೆ ಮಾಡುತ್ತಿದ್ದ ಮನೆಗಳ ಮೇಲೆ ದಾಳಿ ನಡೆಸಿ, 27 ಪ್ರಕರಣಗಳನ್ನು ದಾಖಲಿಸಲಾಗಿದೆ.

ಮೈಸೂರು ಸಮೀಪ ಇಲವಾಲದ ಚಿಕ್ಕನಹಳ್ಳಿ ಮುಖ್ಯ ರಸ್ತೆಯಲ್ಲಿರುವ ಬಸವಸಾಗರ ಬಡಾವಣೆಯಲ್ಲಿ 27 ಮನೆಗಳಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆಯಲಾಗಿತ್ತು. ಈ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸೆಸ್ಕ್ ಅಧಿಕಾರಿಗಳು ಹಾಗೂ ಜಾಗೃತದಳ ಬುಧವಾರ ಜಂಟಿ ಕಾರ್ಯಾಚರಣೆ ನಡೆಸಿ, ಬಡಾವಣೆ ನಿರ್ಮಾತೃ ಹಾಗೂ ವಿದ್ಯುತ್ ಸಂಪರ್ಕ ಪಡೆದಿದ್ದ ಮನೆಯವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.



ಕಾರ್ಯಾಚರಣೆ ನಡೆಸಿದ ಸೆಸ್ಕ್ ಜಾಗೃತದಳದ ಅಧಿಕಾರಿಗಳು ಹಾಗೂ ಸಿಬ್ಬಂದಿ

ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಶೀಲಾ ಹಾಗೂ ಸೆಸ್ಕ್ ಜಾಗೃತದಳದ ಪೊಲೀಸ್ ಅಧೀಕ್ಷಕಿ ಸವಿತಾ ಹೂಗಾರ್ ಮಾರ್ಗದರ್ಶನ, ಉಪ ಅಧೀಕ್ಷಕ ಅಶ್ವಥ್ ನಾರಾಯಣ್ ಹಾಗೂ ಇಇ ತಬಸ್ಸುಮ್‌ಅಫ್ಜಾ ಬಾನು ನೇತೃತ್ವದಲ್ಲಿ ಏಕಕಾಲದಲ್ಲಿ ನಡೆಸಲಾದ ಸಾಮೂಹಿಕ ದಾಳಿಯಲ್ಲಿ ಜಾಗೃತದಳದ ಪೊಲೀಸ್ ನಿರೀಕ್ಷಕರಾದ ಸಿ.ಆನಂದ ಮೂರ್ತಿ, ರೇವಣ್ಣ ಜಯಕುಮಾರ್, ಅರುಣಾ ಕುಮಾರಿ, ಪಿಎಸ್‌ಐಗಳಾದ ವೀಣಾ ನಾಯಕ್, ರಾಮಚಂದ್ರ, ಎಇಇಗಳಾದ ಅನೀಶ್‌ಕುಮಾರ್ ಪಾಠಕ್, ಬಿ.ಡಿ.ತಿಲಕ್, ಎಇಗಳಾದ ಸೈಯದ್ ಕೌಸರ್ ಬೇಗಂ, ವಿಶ್ವನಾಥ್, ತೋಂಟಾರಾಧ್ಯ, ಜಗದೀಶ್, ಜೆಇ ಬಿ.ಮಣಿಕಂಠ ಸ್ವಾಮಿ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಬಡಾವಣೆಗಳಲ್ಲಿ ಅಧಿಕೃತವಾಗಿ ಪಡೆದ ಒಂದು ಸಂಪರ್ಕದಿಂದ ನಿಯಮಬಾಹಿರವಾಗಿ ಹಲವು ಮನೆಗಳಿಗೆ ವಿದ್ಯುತ್ ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ದೂರುಗಳು ಬರುತ್ತಿವೆ. ಮನೆ ನಿರ್ಮಾಣ ಹಾಗೂ ವಾಸದ ಸಂದರ್ಭದಲ್ಲೂ ಅಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆಯದಿರುವ ಪ್ರಕರಣಗಳು ಸಾಕಷ್ಟಿವೆ. ಈ ಹಿನ್ನೆಲೆಯಲ್ಲಿ ಸೆಸ್ಕ್ ಜಾಗೃತದಳ ಎಲ್ಲೆಡೆ ಬಿರುಸಿನ ಕಾರ್ಯಾಚರಣೆ ನಡೆಸುತ್ತಿದೆ. ಪರಿಶೀಲನೆ ವೇಳೆ ಅನಧಿಕೃತವಾಗಿ ವಿದ್ಯುತ್ ಸ್ಥಾವರ ಬಳಕೆ ಹಾಗೂ ವಿದ್ಯುತ್ ಕಳ್ಳತನ ಕಂಡು ಬಂದಲ್ಲಿ ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸೆಸ್ಕ್ ಅಧಿಕಾರಿಗಳು ಎಚ್ಚರಿಸಿದ್ದಾರೆ.

ಅನಧಿಕೃತ ವಿದ್ಯುತ್ ಸಂಪರ್ಕ ಹಾಗೂ ವಿದ್ಯುತ್ ಕಳ್ಳತನ ಕಂಡು ಬಂದರೆ ಸಾರ್ವಜನಿಕರು ಸೆಸ್ಕ್ ಜಾಗೃತದಳದ ಎಇಇ ಅನೀಶ್‌ಕುಮಾರ್ ಪಾಠಕ್(9448994737) ಹಾಗೂ ಪೊಲೀಸ್ ನಿರೀಕ್ಷಕ ಸಿ.ಆನಂದಮೂರ್ತಿ (9448994736) ಅವರಿಗೆ ದೂರು ನೀಡಬಹುದು. ಅಲ್ಲದೆ ಜಾಗೃತ ದಳದ ಪೊಲೀಸ್ ಅಧೀಕ್ಷಕರು (9448499964), ಉಪ ಅಧೀಕ್ಷಕರು(9448994735) ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್ (9448994716)ಗೂ ಮಾಹಿತಿ ನೀಡಬಹುದು ಎಂದು ಮನವಿ ಮಾಡಿದ್ದಾರೆ.

## ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ ಮಗು ಯಾಕೆ ಅಳ್ತೀದೆ...
ಗಂಡ : ಮಗುಗೆ ಮೆಣಸಿನಕಾಯಿ ಕೊಟ್ಟೆ,
ಇನ್ನೊಂದು ಬೇಕು ಅಂತ ಅಳ್ತೀರಬೇಕು...!

ಮೈಸೂರು ಮಿತ್ರ
ಶುಕ್ರವಾರ, 9 ಫೆಬ್ರವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತವಾಹಿನಿ..........

ಯಾವನು ಶಾಸ್ತ್ರ ವಿಧಾನವನ್ನು ಬದಿಗೊತ್ತಿ ಮನಸ್ಸಿಗೆ ಬಂದಂತೆ ನಡೆಯುವನೋ ಅವನು ಸಿದ್ದಿಯನ್ನು ಪಡೆಯುವುದಿಲ್ಲ. ಅವನಿಗೆ ಸುಖವೂ ಇಲ್ಲ. ಉತ್ತಮ ಗತಿಯೂ ಇಲ್ಲ. –ಭಗವದ್ಗೀತೆ

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಓರಗಿತ್ತಿ ಒಡವೆ ಹಾಕಿಕೊಂಡು ನೀರೊಳಗೆ ನೆರಳು ನೋಡಿದಂತೆ.

## ನಿಮ್ಮ ಪತ್ರಗಳು

### ■ ಲಕ್ಷ್ಮೀಪುರಂ 2ನೇ ಕ್ರಾಸ್‌ನಲ್ಲಿ ಕಸದ ರಾಶಿ ತೆರವುಗೊಳಿಸಿ

ಮಾನ್ಯರೇ



ಮೈಸೂರಿನ ಲಕ್ಷ್ಮೀಪುರಂನ 2ನೇ ಕ್ರಾಸ್ ರಸ್ತೆಯಲ್ಲಿ (ಅನ್ನಪೂರ್ಣ ಆಸ್ಪತ್ರೆ ಪಕ್ಕದ ರಸ್ತೆ) ಮನಸೋ ಇಚ್ಛೆ ಕಸವನ್ನು ಹಾಕಲಾಗುತ್ತಿದೆ. ಈ ರಸ್ತೆ ಬಹಳ ಕಿರಿದಾಗಿದ್ದು, ಇಲ್ಲಿ ಹಾಕುವ ಕಸವು ಅರ್ಧ ರಸ್ತೆಯನ್ನೇ ಆವರಿಸಿಕೊಂಡು ಬಿಡುತ್ತಿದೆ. ಹೀಗಾಗಿ ಇಲ್ಲಿ ಓಡಾಡುವ ಜನರು ಹಾಗೂ ಅಕ್ಕಪಕ್ಕದ ಮನೆಯವರಿಗೆ ಒಂದು ರೀತಿಯ ಅಸಹ್ಯ ಉಂಟಾಗಿ ಮೂಗು–ಬಾಯಿ ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಅಷ್ಟೇ ಅಲ್ಲದೆ ಇಲ್ಲಿ ಪೊಟ್ಟಣ ಕಟ್ಟಿ ಬಿಸಾಡುವ ಆಹಾರ ಪದಾರ್ಥಗಳು, ಪ್ಲಾಸ್ಟಿಕ್ ಸಹಿತ ಮೂಕ ಪ್ರಾಣಿಗಳ ಒಡಲನ್ನು ಸೇರುತ್ತಿದ್ದು, ಅವುಗಳ ಪ್ರಾಣಕ್ಕೆ ಮಾರಕವಾಗಿ ಪರಿಣಮಿಸುತ್ತಿದೆ. ಮೈಸೂರಿನ ಹಲವಾರು ಕಡೆಗಳಲ್ಲಿ ಇದೇ ಪರಿಸ್ಥಿತಿ ಇರುವುದನ್ನು ನೋಡುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ದಿವ್ಯ ನಿರ್ಲಕ್ಷ್ಯ ವಹಿಸಿರುವುದು ಆಶ್ಚರ್ಯವಾಗಿದೆ. ಇನ್ನಾದರು ಕಸವನ್ನು ಹಾಕಲು ಸೂಕ್ತವಾದ, ನಿರ್ದಿಷ್ಟ ಸ್ಥಳಗಳನ್ನು ಗುರುತಿಸಿ ಕಸವನ್ನು ಅಲ್ಲಿಯೇ ಹಾಕಬೇಕೆಂದು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯ ಅತೀ ತುರ್ತಾಗಿ ಆಗಬೇಕಿದೆ. ಇದಕ್ಕೆ ಅನುಗುಣವಾಗಿ ನಾಗರಿಕರಾದ ನಾವು ಎಲ್ಲೆಂದರಲ್ಲಿ ಕಸವನ್ನು ಹಾಕದೆ ನಮ್ಮ ನಮ್ಮ ಜಬಾಬ್ದಾರಿಯನ್ನೂ ಅರಿಯಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

### ■ ಅರುಣಾಚಲಮ್‌ರಿಂದ ಆದರ್ಶನೀಯ ಕಾರ್ಯಕ್ರಮ !!

ಮಾನ್ಯರೇ,

ಜನಪ್ರಿಯ ಗಾಯಕರಾಗಿದ್ದ ಮೈಸೂರಿನ ಎಂ.ವಿ.ಗೋವಿಂದರಾಜು ಅವರ ಅಕಾಲಿಕ ನಿಧನ ಮೈಸೂರು ಸಂಗೀತಾಸಕ್ತರಿಗೆ ಒಂದು ದೊಡ್ಡ ಆಘಾತ, ತುಂಬಲಾರದ ನಷ್ಟವಾಗಿದೆ. ಏಕೆಂದರೆ ಗೋವಿಂದರಾಜು ಅವರು ತಮ್ಮ ಪ್ರತಿಭೆಯಿಂದ ಸಾಕಷ್ಟು ಅಭಿಮಾನಿಗಳನ್ನು ಸಂಪಾದಿಸಿದ್ದರು. ಇವರ ಸ್ಮರಣಾರ್ಥ ಇತ್ತೀಚೆಗೆ ಮಹತಿ ಮ್ಯೂಸಿಕಲ್ ಗ್ರೂಪ್ ವತಿಯಿಂದ ಅರುಣಾಚಲಮ್ ಸಾರಥ್ಯದಲ್ಲಿ ನಾದಬ್ರಹ್ಮ ಸಭಾಂಗಣದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ 'ಗೀತ ನಮನ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಲ್ಲಿ ಯಾವುದೇ ರೀತಿಯ ಆಡಂಬರ ಇರಲಿಲ್ಲ. ಸಭಿಕರು ಮೌನವಾಗಿಯೇ ಕಾರ್ಯಕ್ರಮ ವೀಕ್ಷಿಸಿದರು. ಅರುಣಾಚಲಮ್‌ರವರು ಯಾರ ಸಹಾಯವೂ ಇಲ್ಲದೇ ತಮ್ಮ ಸ್ವಂತ ಖರ್ಚಿನಲ್ಲಿ ಈ ಕಾರ್ಯಕ್ರಮವನ್ನು ಏರ್ಪಾಡು ಮಾಡಿದ್ದರು. ಸುಮಾರು ಮೂರು ಗಂಟೆಗೂ ಹೆಚ್ಚು ಕಾಲ ಕಲಾವಿದರು ತಮ್ಮ ಸಿರಿಕಂಠದಿಂದ ಗೋವಿಂದರಾಜುರವರಿಗೆ ಗೀತೆಗಳ ಮೂಲಕ ನಮನ ಸಲ್ಲಿಸಿದರು. ಅರುಣಾಚಲಮ್‌ರವರು ತುಂಬಾ ದಿನಗಳಿಂದ ಈ ಕಾರ್ಯಕ್ರಮ ನಡೆಸಲು ಪೂರ್ವ ತಯಾರಿ ನಡೆಸಿದ್ದರು. ಅರುಣಾಚಲಮ್ ಅವರು ಗೋವಿಂದರಾಜು ಕುಟುಂಬವರ್ಗದವರನ್ನು ವೇದಿಕೆಗೆ ಕರೆದು ನೆನಪಿನ ಕಾಣಿಕೆ ನೀಡಿದರು. ಇಂತಹ ಆದರ್ಶನೀಯ ಕಾರ್ಯಕ್ರಮ ಆಯೋಜಿಸಿ, ಮಾನವೀಯತೆ ಮೆರೆದ ಅರುಣಾಚಲಮ್ ಹಾಗೂ ಅವರ ತಂಡದ ಸದಸ್ಯರಿಗೆ ಅಭಿನಂದನೆಗಳು.

–ಹರ್ಷ, ಜಯಲಕ್ಷ್ಮೀಪುರಂ, ಮೈಸೂರು

### ■ ಮೈಸೂರಿಗೆ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಮಂಜೂರಾಗಲಿ

ಮಾನ್ಯರೆ,

ಮೈಸೂರು ನಗರಕ್ಕೆ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಮಂಜೂರು ಮಾಡುವಂತೆ ಒತ್ತಾಯಿಸಿ ಮೊನ್ನೆ ಮೈಸೂರಿನಲ್ಲಿ ಕರ್ನಾಟಕ ಸೇನಾ ಪಡೆಯವರು ಪ್ರತಿಭಟನೆ ನಡೆಸಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದು ಹೇಳಬಹುದು.

ನಾನು ಕಳೆದ 5 ವರ್ಷಗಳಿಂದಲೂ ಪತ್ರಿಕೆಗಳ ಮೂಲಕ ಸರ್ಕಾರದ ಗಮನಕ್ಕೆ ತಂದರೂ ಸರ್ಕಾರ ಮಾತ್ರ ಮೈಸೂರು ನಗರಕ್ಕೆ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಮಂಜೂರು ಮಾಡಲಿಲ್ಲ.

ಮೈಸೂರು ನಗರದಲ್ಲಿ ಹಾಲಿ 9 ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಿದ್ದು, ಇವುಗಳೆಲ್ಲಾ ಒಂದು ರೀತಿಯಲ್ಲಿ ಶ್ರೀಮಂತ ವರ್ಗದ ಪಾಲಾಗಿವೆ. ಬಡ ಹಾಗೂ ಮಧ್ಯಮ ವರ್ಗದ ಪ್ರತಿಭಾನ್ವಿತ ವಿದ್ಯಾರ್ಥಿಗಳು, ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ದುಬಾರಿ ಫೀಸು ಕಟ್ಟಿ ವ್ಯಾಸಂಗ ಮಾಡಲು ಸಾಧ್ಯವಿಲ್ಲ. ಮೈಸೂರಿಗೆ 50 ಕೀಮೀ. ದೂರದ, ಕೆ.ಆರ್.ಪೇಟೆ, ಈ ಕಡೇ ಚಾಮರಾಜನಗರ ಮತ್ತು ಸುತ್ತಮುತ್ತಲಿನ ತಾಲೂಕು ಕೇಂದ್ರಗಳಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿವೆ. ಆದರೆ ಮೈಸೂರು ನಗರಕ್ಕೆ ಆ ಭಾಗ್ಯವಿಲ್ಲ. ಮೈಸೂರು ಜಿಲ್ಲೆಯವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಲದ ಬಜೆಟ್‌ನಲ್ಲಾದರೂ ಮೈಸೂರು ನಗರಕ್ಕೆ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಮಂಜೂರು ಮಾಡಿ, ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

### ■ ಬದುಕು–ಬಿಂದು

ಮಾನ್ಯರೆ,

1. **'ಮಂಗಾಟ'** : 'ಮಂಗನ ಕಾಯಿಲೆ' ಮಲೆನಾಡಿಗೆ ಸೀಮಿತವಲ್ಲ; ಎಲ್ಲಾ ಕಡೆಯೂ ಉಂಟು! ಅದರಲ್ಲೂ, ರಾಜಕಾರಣಿಗಳ 'ಮಂಗಾಟ' ಸುಪರಿಚಿತವೇ?

2. ಕರ್ಮ: ಮನುಷ್ಯನಿಗೆ ಮುಖ್ಯವಾದುದು (ಪ್ರಾರಬ್ಧ) 'ಕರ್ಮ'ವಲ್ಲ; ಕರ್ಮಯೋಗ; ಕಾಯಕ.

3. **ಹತ್ಯೆ** : ದಿನ ಬೆಳಗಾದರೆ 'ಪತಿಯಿಂದಲೇ ಪತ್ನಿಯ ಹತ್ಯೆ' ಎಂಬ ಸುದ್ದಿಗಳು. '_____ ಯಿಂದಲೇ ಎಂಬ ಒತ್ತು ಯಾಕೆ? ಪತಿಯಲ್ಲದೆ ಪತ್ನಿಯನ್ನು ಯಾರು ಹತ್ಯೆ ಮಾಡಬಲ್ಲರು? (ವಿರಳವಾಗಿ "ಪತ್ನಿಯಿಂದಲೇ ಪತಿಯ ಹತ್ಯೆ")

4. **ಮೋಸ** : ಎಷ್ಟೋ ಗಾದೆಗಳು ಈ ಕಾಲದಲ್ಲಿ ಸತ್ಯವಲ್ಲ. ನಿದರ್ಶನಕ್ಕೆ : "ಲೆಕ್ಕ ತಪ್ಪಿದರೆ ಗಂಟೆಗೆ ಮೋಸವೆ?" ಎಷ್ಟೋ ಪ್ರಕರಣಗಳಲ್ಲಿ, ಲೆಕ್ಕ ತಪ್ಪದಿದ್ದರೂ ಗಂಟಿಗೆ ಮೋಸವೇ!

5. **ಅಮೃತ** : ಇತ್ತೀಚೆಗೆ ನಿಧನರಾದ ಸಾಹಿತಿ ಅಮೃತ ಸೋಮೇಶ್ವರರ ಎರಡು ಪದ್ಯ ಪಂಕ್ತಿಗಳು ಅಮೃತಸ್ಪರ್ಶಿ : "ಎನ್ನ ಹೃದಯದ ಹಾಲಿನಾಗರ/ಗೈರು ವಿವರಿಸು ಶಕ್ತಿಯೇ!"

7. **ದೀಪ** : "ನಿನ್ನ ಏಳಿಗೆಗೆ ನೀನೆ ಶಿಲ್ಪಿ" ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು. ಅದೇ ಅರ್ಥದ್ದು ಬುದ್ಧನ ಈ ಯುಕ್ತಿ. "ಆತ್ಮದೀಪೋ ಭವ!" (ನಿನಗೆ ನೀನೇ ಬೆಳಕಾಗು).

–ಸಿಪಿಕೆ, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

# ಕವಿತೆಗಳಲ್ಲಿ ಭಾವವಸ್ತು ಬಿತ್ತಿದ ಬೇಂದ್ರೆ

ಸರಿ ಸುಮಾರು ಎರಡು ಸಾವಿರ ವರ್ಷಗಳ ಪರಂಪರೆಯನ್ನು ಹೊಂದಿರುವ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಹೆಗ್ಗುರುತನ್ನು ಮೂಡಿಸಿ ಹೋದ ಹಲವು ಮಂದಿ ಸಾಹಿತಿಗಳಿದ್ದಾರೆ. ಅವರುಗಳಲ್ಲಿ ಕೆಲವರು ಸದಾ ಕಾಲ ತಮ್ಮ ಸಾವಿರದ ಸಾಹಿತ್ಯವನ್ನು ಸೃಜಿಸುವ ಮೂಲಕ ಇಂದಿಗೂ ಜೀವಂತವಾಗಿ ಉಳಿದಿದ್ದಾರೆ. ಅಂತಹ ಸಾಹಿತಿಗಳಲ್ಲಿ ಅಂದಿಗೂ, ಇಂದಿಗೂ, ಎಂದೆಂದಿಗೂ ಮರೆಯಲಾಗದ ಮರೆಯಬಾರದ ಜನಮಿಡಿತದಲ್ಲಿ ನಾಡಿಮಿಡಿತದ ಸಾಹಿತಿ ಎಂದರೆ ಅದು ದತ್ತಾತ್ರೇಯ ರಾಮಚಂದ್ರ ಬೇಂದ್ರೆ. (ದ.ರಾ.ಬೇಂದ್ರೆ) 'ಅಂಬಿಕಾತನಯ ದತ್ತ' ಕಾವ್ಯನಾಮದಿಂದ ಸಾಹಿತ್ಯದಲ್ಲಿ ಚಿರಪರಿಚಿತರಾಗಿ ತಮ್ಮದೇ ವಿಶೇಷ ಬರಹಗಳಿಂದ ಶಬ್ದ ಗಾರುಡಿಗ ಅಷ್ಟೇ ಅಲ್ಲದೆ ವರಕವಿ ಖ್ಯಾತಿಯನ್ನು ಹೊಂದಿದವರು.

ಮನುಷ್ಯನಲ್ಲಿರುವ ಆತ್ಮವಿಶ್ವಾಸವನ್ನು ಬಡತನ ಕುಗ್ಗಿಸಿಬಿಡುತ್ತದೆ. ಆದರೆ ಬೇಂದ್ರೆಯವರ ವಿಷಯದಲ್ಲಿ ಆ ಬಡತನವೇ ಅವರನ್ನು ಮತ್ತಷ್ಟು, ಮಗದಷ್ಟು ಗಟ್ಟಿಗೊಳಿಸಿ ಒಬ್ಬ ಪರಿಪೂರ್ಣ ವ್ಯಕ್ತಿಯನ್ನಾಗಿ ಮೂಡಿ ಬರುವಂತೆ ಮಾಡಿತು. ಬಡತನ ಸಿರಿತನ ಕಡೆ ತನಕ ಉಳಿದಾವೇನಾ ಎಂದು ಕೇಳಿದ ಬೇಂದ್ರೆ ಆ ಬಡತನದ ಬೆಂಕಿಯಲ್ಲಿಯೇ ಬೆಂದು ಬೇಂದ್ರೆಯಾಗಿ ಬಹು ಎತ್ತರಕ್ಕೆ ಏರಿದವರು. ಗೆಳೆಯರ ಬಳಗವನ್ನು ಕಟ್ಟಿ ಸಾಹಿತ್ಯದ ಒಲವು ಉಳ್ಳವರಿಗೆ ಬರೆಯಲು ಉತ್ಸಾಹದ ಉತ್ತೇಜನ ಕೊಟ್ಟವರು.

ಬೇಂದ್ರೆಯವರ ಕವನಗಳನ್ನು ಅರ್ಥ ಮಾಡಿಕೊಳ್ಳಲು ವಿಶೇಷವಾದ ಶಕ್ತಿ ಇರಬೇಕಾಗುತ್ತದೆ. ಏಕೆಂದರೆ ಅವರು ಬಳಸುವ ಶಬ್ದಗಳಿಗೆ, ಭಾವಗಳಿಗೆ ಇಂಥದ್ದೇ ಅರ್ಥ ಎಂದು ನಿಖರವಾಗಿ, ನಿರ್ದಿಷ್ಟವಾಗಿ, ಅಷ್ಟು ಸುಲಭವಾಗಿ ತಿಳಿಯಲಾಗದು. ಆ ಕವಿತೆಗಳ ಭಾವವನ್ನು ಅರ್ಥ ಮಾಡಿಕೊಂಡರೆ ವಿಶೇಷವಾದ ಶಕ್ತಿಯನ್ನು ಗ್ರಹಿಸಿದಂತಾಗುತ್ತದೆ. ಇದು ಬೇಂದ್ರೆ ಅವರ ಕವನಗಳ ಅತೀ ದೊಡ್ಡ ಶಕ್ತಿಯಾಗಿದೆ.

ಬೇಂದ್ರೆ ಅವರ ಕವನಗಳಲ್ಲಿ ತುಂಬಾ ಪ್ರಸಿದ್ಧವಾದ ಕವನ ನೀ ಹೀಂಗ ನೋಡಬ್ಯಾಡ ನನ್ನ.

**ನೀ ಹೀಂಗ ನೋಡಬ್ಯಾಡ ನನ್ನ**
**ನೀ ಹೀಂಗ ನೋಡಿದರ ನನ್ನ ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ ।ಪಲ್ಲವಿ**


ಕೇವಲ ಪಲ್ಲವಿಯನ್ನು ಓದಿದವರಿಗೆ ಅಥವಾ ಕೇಳಿದವರಿಗೆ ಇದೊಂದು ಪ್ರೇಮಗೀತೆ ಎನಿಸಬಹುದು. ಕನ್ನಡ ಸಿನಿಮಾವೊಂದರಲ್ಲಿ ಕೇವಲ ಈ ಎರಡು ಸಾಲುಗಳನ್ನು ಬಳಸಿಕೊಂಡು ಪ್ರೇಮಗೀತೆಯನ್ನೇ ರಚಿಸಿರುವುದು ಇದಕ್ಕೆ ಸಾಕ್ಷಿ (ಆದಿತ್ಯ ಅಭಿನಯದ ವಿ.ನಾಗೇಂದ್ರ ಪ್ರಸಾದ್ ನಿರ್ದೇಶನ ಮತ್ತು ಸಾಹಿತ್ಯದ ಅಂಬಿ ಚಲನಚಿತ್ರ) ಆದರೆ ಇದು ಪ್ರೇಮಗೀತೆ ಅಲ್ಲ. ತಮ್ಮ ಮಗುವನ್ನು ಕಳೆದುಕೊಂಡು ಅಸಹಾಯಕ ಸ್ಥಿತಿಯಲ್ಲಿ ಮಡದಿ ಮನೆಯಲ್ಲಿ ಕುಳಿತುಕೊಂಡಿರುವಾಗ ಅಲ್ಲಿಗೆ ಬಂದ ಬೇಂದ್ರೆ ಮಡದಿಯ ಆಕ್ರೋಶದ ಸಿಟ್ಟನ್ನು ಸಹಿಸಲಾಗದೆ ಬರೆದಿರುವ ಶೋಕಗೀತೆ ಇದಾಗಿದೆ.

ಪಲ್ಲವಿಯ ಎರಡು ಸಾಲಿನಲ್ಲಿಯೇ ಕೋಪಗೊಂಡು, ಅಸಹಾಯಕ ಪರಿಸ್ಥಿತಿಯಲ್ಲಿ,ಆಕ್ರೋಶದ ಕಣ್ಣುಗಳಲ್ಲಿ ತಮ್ಮ ಪತಿಯನ್ನು ನೋಡಿದ ಮಡದಿಯ ಕಣ್ಣೋಟವನ್ನು ಎದುರಿಸಲಾಗದೆ ಬೇಂದ್ರೆ ಈ ರೀತಿ ಸಮಾಧಾನ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ನೀನು ಈ ರೀತಿ ನನ್ನನ್ನು ನೋಡಿದರೆ ನಾನು ಮತ್ತೆ ನಿನ್ನನ್ನು ಹೇಗೆ ನೋಡಲಿ? ಎನ್ನುವ ಮೂಲಕ ತಾವು ಕೂಡ ಕಾಲದ, ಪರಿಸ್ಥಿತಿಯ ಕೈ ಗೊಂಬೆಯಾಗಿರುವೆನೆಂದು; ಮಗುವನ್ನು ಉಳಿಸಲಾಗದಿದ್ದಕ್ಕೆ ತಮಗೂ ನೋವಿದೆ ಎಂಬ ಭಾವವನ್ನು ವ್ಯಕ್ತಪಡಿಸಿದಂತಿದೆ. ಹತಾಶೆ, ದುಃಖ ನಿನಗೆ ಮಾತ್ರವಲ್ಲ, ನನಗೂ ಇದೆ ಎಂಬ ಸಾಂತ್ವನದ ನುಡಿಯನ್ನು ಕೇವಲ ಎರಡೇ ಸಾಲುಗಳಲ್ಲಿ ಅಡಕವಾಗಿಸಿರುವುದು ಕವಿಯ ಜಾಣ್ಮೆಯಾಗಿದೆ. ಮಡದಿಯ ಆ ಕಣ್ಣಿನಲ್ಲಿ ನೀವು ಬೇಗ ಬಂದಿದ್ರೆ ಮಗು ಉಳಿಯುವ ಸಾಧ್ಯತೆ ಇತ್ತು, ಔಷಧಿ ತಂದಿದ್ದರೆ ಮಗುವಿನ ಪ್ರಾಣಕ್ಕೆ ಏನೂ ಹಾನಿ ಉಂಟಾಗುತ್ತಿರಲಿಲ್ಲ ಎಂಬ ಮಾತೃವಾತ್ಸಲ್ಯದ ನುಡಿಗಳು ವ್ಯಕ್ತವಾಗುತ್ತಿರುವುದನ್ನು ಗಮನಿಸಿ; ಬೇಂದ್ರೆ ಅವರನ್ನು ಸಮಾಧಾನಪಡಿಸುವ ಕೆಲಸವನ್ನು ಮಾಡಿದ್ದಾರೆ. ಗಂಡ ಹೆಂಡತಿಯ ನಡುವೆ ಬಾಯಿಮಾತಿಗಿಂತ ಕಣ್ಣಿನ ಮಾತಿನಲ್ಲೇ ಅವರವರ ಭಾವ ವ್ಯಕ್ತವಾಗುವ ಕೌತುಕವನ್ನು ಇಲ್ಲಿ ಗಮನಿಸಬಹುದು.

**ಸಂಸಾರ ಸಾಗರದಾಗ ಲೆಕ್ಕವಿರದಷ್ಟು ದುಃಖದ ಬಂಡಿ**
**ನಾ ಬಲ್ಲೆ ನನಗೆ ಗೊತ್ತಿಲ್ಲದಿದ್ದರೂ ಎಲ್ಲಿ ಆಚೆಯಾ ದಂಡಿ**
**ಮಲಗಿರುವ ಕೂಸು ಮಲಗಿರಲಿ ಅಲ್ಲಿ, ಮುಂದಿನದು ದೇವರ ಚಿತ್ತ**
**ನಾ ತಡೀಲಾರೆ ಅದು, ಯಾಕ ನೋಡತೀ ಮತ್ತ ಮತ್ತ ನೀ ಇತ್ತ**

ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ ಎಂಬ ವಚನಕಾರರ ನುಡಿಯಂತೆ ಸಂಸಾರ ಎಂದ ಮೇಲೆ ಸಾಗರದಷ್ಟೇ ಲೆಕ್ಕವೇ ಇರದಷ್ಟು ದುಃಖದ ಬಂಡಿ ಇದೆ. ಅದನ್ನು ನಾನು ಬಲ್ಲೆ ಎಂದು ಹೇಳುತ್ತಿದ್ದಾರೆ.ಮನುಷ್ಯನಾಗಿ ಹುಟ್ಟಿದ ಮೇಲೆ ನೋವು, ಸಂಕಷ್ಟ, ಕಷ್ಟ, ದುಃಖ, ದುಮ್ಮಾನಗಳು ಸಹಜ. ಅದಕ್ಕೆ ಕುಗ್ಗದೆ ಅವನ್ನು ಎದುರಿಸಿ ನಿಲ್ಲಬೇಕು. ಹಾಗೆಯೇ ನನಗೆ ಈ ಸಂಸಾರ ಎಂಬ ಸಾಗರದಲ್ಲಿ ಎಣಿಸಲಾಗದಷ್ಟು ದುಃಖದ ಬಂಡಿ ಇರುವುದು ನನಗೆ ತಿಳಿದಿದೆ ಎಂದು ಮಡದಿಗೆ ದಾಂಪತ್ಯದಲ್ಲಿ ದುಃಖ ಸರ್ವಸಾಮಾನ್ಯ ಎಂದು ತಿಳಿಸುವ ಪ್ರಯತ್ನ ಮಾಡುತ್ತಿದ್ದಾರೆ.ಈ ಸಾಂಸಾರಿಕ ಜೀವನದ ನಂತರ ಮುಂದೆ ಏನಿದೆ ಎಂಬುದು ನನಗೆ ತಿಳಿದಿಲ್ಲ.ಈ ಸಂಸಾರ ಸಾಗರವನ್ನು ಈಜಿ ದಡ ಮುಟ್ಟಿದ ನಂತರ ಆ ಕಡೆ ಯಾವ ದಡವಿರುವುದೋ ನಾ ಕಾಣೆನು ಎಂದು, ಮಲಗಿರುವ ಕೂಸು ಮಲಗಿರಲಿ ಅಲ್ಲಿ ಮುಂದಿನದು ದೇವರ ಚಿತ್ತ ಎನ್ನುವ ಮೂಲಕ ಹುಟ್ಟು – ಸಾವು ಸಹಜವಾದುದು ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಆ ದೇವರು ಮಾಡಿದ ಹಾಗೆ ನಡೆಯುತ್ತದೆ. ಮತ್ತೆ ಮತ್ತೆ ನೀನು ಈ ಕಡೆ ಯಾಕೆ ನೋಡುವೆ ಎನ್ನುವ ಮೂಲಕ ಆ ವಿಧಿಯಾಟದ ಮುಂದೆ ಮನುಷ್ಯನ ಬಾಳು ಕ್ಷಣಿಕ.ಅದನ್ನು ಮೀರಿ ನಿಲ್ಲುವ ವ್ಯರ್ಥ ಪ್ರಯತ್ನ ಮಾಡದಿರುವುದೇ ಕ್ಷೇಮ ಎಂದು ಇದನ್ನರಿಯದೇ ಮತ್ತೆ ಮತ್ತೆ ಕೋಪದ ಜ್ವಾಲೆಯ ಕಣ್ಣುಗಳಿಂದ ನನ್ನನ್ನು ನೋಡಬೇಡ ಎಂಬ ವಿನಂತಿಯನ್ನು ಕೂಡ ಮಾಡಿದ್ದಾರೆ. ನನಗೆ ಈ ಪದ್ಯ ಭಾಗವನ್ನು ಓದುವಾಗ ಡಿವಿಜಿ ಅವರ ಮಂಕುತಿಮ್ಮನ ಕಗ್ಗದ ಮುಕ್ತಕ ನೆನಪಾಗುತ್ತದೆ.

**ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ ।**
**ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು ॥**



**ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು ।**
**ಪದ ಕುಸಿಯೆ ನೆಲವಿಹುದು । ಮಂಕುತಿಮ್ಮ ॥**

ಜೀವನವೇ ಒಂದು ಜಟಕಾಬಂಡಿಯ ಹಾಗೇ ಆ ಬಂಡಿಗೆ ಕಟ್ಟಿರುವ ಕುದುರೆ ಅಂದರೆ ಅದು ಮನುಷ್ಯ ಆ ವಿಧಿಯು ಹೇಳಿದಂತೆ ನಡೆಯುವವರು ನಾವು. ಮದುವೆಗೋ ಅಂದರೆ ಸಂತೋಷವೋ, ಮಸಣಕೋ ಅಂದರೆ ದುಃಖಕ್ಕೋ ಎಲ್ಲದಕ್ಕೂ ಕಾರಣ ಆ ವಿಧಿ ನಾವು ಇಲ್ಲಿ ನೆಪ ಮಾತ್ರ ಅಂದರೆ ನಮ್ಮ ಕೆಲಸಗಳನ್ನು ಪ್ರಾಮಾಣಿಕವಾಗಿ ನಾವು ಮಾಡುತ್ತಾ ಹೋಗಬೇಕು. ಪ್ರತಿಫಲವೆಲ್ಲಾ ಆ ವಿಧಿಯ ಕೈಯ್ಯಲ್ಲಿದೆ ಅಂದರೆ ನಿನ್ನ ಕೆಲಸವನ್ನು ನೀನು ಶ್ರದ್ಧೆಯಿಂದ ಮಾಡು. ನಿನಗೆ ಸಿಗಬೇಕಿರುವುದನ್ನು ಆ ಕಾಣದ ವಿಧಿ ಕೊಡುತ್ತದೆ ಎಂದು ಹೇಳಿದ್ದಾರೆ. ಆ ವಿಧಿಯಾಟದ ಮುಂದೆ ನಾವೆಲ್ಲ ಕಾಣದ ನೆಪಗಳಷ್ಟೇ ಎನ್ನುವ ವೇದಾಂತ ಸಾರುತ್ತದೆ.

> **"** ಬೇಂದ್ರೆಯವರ ಕವನಗಳನ್ನು ಅರ್ಥ ಮಾಡಿಕೊಳ್ಳಲು ವಿಶೇಷವಾದ ಶಕ್ತಿ ಇರಬೇಕಾಗುತ್ತದೆ. ಏಕೆಂದರೆ ಅವರು ಬಳಸುವ ಶಬ್ದಗಳಿಗೆ, ಭಾವಗಳಿಗೆ ಇಂಥದ್ದೇ ಅರ್ಥ ಎಂದು ನಿಖರವಾಗಿ, ನಿರ್ದಿಷ್ಟವಾಗಿ, ಅಷ್ಟು ಸುಲಭವಾಗಿ ತಿಳಿಯಲಾಗದು. ಆ ಕವಿತೆಗಳ ಭಾವವನ್ನು ಅರ್ಥ ಮಾಡಿಕೊಂಡರೆ ವಿಶೇಷವಾದ ಶಕ್ತಿಯನ್ನು ಗ್ರಹಿಸಿದಂತಾಗುತ್ತದೆ. ಇದು ಬೇಂದ್ರೆ ಅವರ ಕವನಗಳ ಅತೀ ದೊಡ್ಡ ಶಕ್ತಿಯಾಗಿದೆ.

**ತಂಬಲ ಹಾಕದ ತುಂಬ ಕೆಂಪು ಗಿಡ ಗಡಕ ಹಣ್ಣಿನ ಹಾಂಗ**
**ಇದ್ದಂಥ ತುಟಿಯ ಬಣ್ಣೆತ್ತ ಹಾರಿತು? ಯಾವ ಗಾಳಿಗೆ, ಹೀಂಗ**
**ಈ ಗದ್ದ, ಗಲ್ಲ, ಹಣೆ, ಕಣ್ಣುಕಂಡು ಮಾರೀಗೆ ಮಾರಿಯ ರೀತಿ**
**ಸಾವನ ತನ್ನ ಕೈ ಸವರಿತಲ್ಲಿ, ಬಂತೆನಗ ಇಲ್ಲದ ಭೀತಿ**

ತಾಂಬೂಲವನ್ನು ಹಾಕಿದ ಕೆಂಪಾಗುತ್ತಿದ್ದ ತುಟಿ,ಗಿಣಿ ತಿನ್ನುವ ಸೀಬೆಹಣ್ಣಿನಂತೆ ಕೆಂಪು ಕೆಂಪಾಗಿದ್ದ ತುಟಿಗಳ ಬಣ್ಣ ಎತ್ತ ಹಾರಿದೆ? ಎಂದು ಪ್ರಶ್ನಿಸುತ್ತಿದ್ದಾರೆ. ಸದಾಕಾಲ ತಮ್ಮ ಮಡದಿಯನ್ನು ನಗುಮುಖದಲ್ಲೇ ನೋಡುತ್ತಿದ್ದ ಬೇಂದ್ರೆ ಅವರಿಗೆ ಈಗ ಮಗುವನ್ನು ಕಳೆದುಕೊಂಡು ಕಣ್ಣೀರು ಸುರಿಸಿ ಸುರಿಸಿ ಆ ನಗು ಮಾಯವಾಗಿ ಮಂಕಾಗಿರುವ ನೋವಿನ ಮೋರೆಯನ್ನು ನೋಡಲಾಗುತ್ತಿಲ್ಲ. ಮಗು ಸತ್ತ ದುಃಖ ಒಂದೆಡೆಯಾದರೆ ಮಡದಿಯನ್ನು ಸಂತೈಸಲಾಗದ ಬೇಸರ ಮತ್ತೊಂದೆಡೆ. ಅದಕ್ಕಾಗಿ ಬೇಂದ್ರೆ ಯಾವಾಗಲೂ ಕೆಂಪಾಗಿರುತ್ತಿದ್ದ ನಿನ್ನ ತುಟಿ ಯಾಕೆ ಬಣ್ಣವನ್ನು ಕಳೆದುಕೊಂಡಿದೆ ಎಂದು ನಿನ್ನ ಈ ವೇಷವನ್ನು ನೋಡಿದರೆ, ನಿನ್ನ ಮುಖವನ್ನು ನೋಡಿದರೆ ಸಾವಿನ ಭೀತಿಯೇ ಕಾಣುತ್ತಿದೆ ಎನಗೆ ಎಂದು ಹೇಳಿದ್ದಾರೆ. ಸಾವಿಗಿಂತ ಸಾವು ಕೊಡುವ ನೋವಿನ ಪ್ರಭಾವ ಅಗಾಧವಾದುದು. ಪುತ್ರ ಶೋಕ ನಿರಂತರಂ ಎಂಬ ನಾಣ್ಣುಡಿಯಂತೆ ಮಗು ಯಾವುದಾದರೇನು ಕಳೆದುಕೊಂಡವರಿಗಷ್ಟೇ ಗೊತ್ತು ಕಳೆದುಕೊಂಡ ನೋವು. ವಚನಕಾರರು ಹೇಳಿರುವಂತೆ ನೊಂದವರ ನೋವ ನೋಯದರೆತ್ತ ಬಲ್ಲರೊ ? ದುಃಖದ ಬೇಗೆ ದುಃಖಿತರಿಗಷ್ಟೇ ತಿಳಿಯುತ್ತದೆ.ಹಾಗೆಯೇ ಇಲ್ಲಿ ನವಮಾಸಗಳು ಸಾಕಿ ಸಲುಹಿದ ಮಗು ಇನ್ನಿಲ್ಲ ಎಂಬುದು ತಿಳಿದಾಗ ಆ ತಾಯಿಗೆ ಉಂಟಾಗುವ ವೇದನೆ ಯಾವ ಮಟ್ಟದ್ದು ಎಂಬುದನ್ನು ಬೇಂದ್ರೆ ತುಂಬಾ ಮನಮುಟ್ಟುವಂತೆ ಚಿತ್ರಿಸಿಕೊಟ್ಟಿದ್ದಾರೆ. ಮಡದಿಯ ಮೋರೆಯೇ ಸಾವಿನ ಭೀತಿಯನ್ನು ತೋರಿಸುವಂತಿದೆ ಎನ್ನುವ ಮೂಲಕ ಆ ಸಾವು ಮಡದಿಯಲ್ಲಿ ಎಷ್ಟರ ಮಟ್ಟಿಗೆ ದುಃಖವನ್ನುಂಟು ಮಾಡಿದೆ ಎಂಬ ಭಾವವನ್ನು ತಿಳಿಸಿದ್ದಾರೆ.

**ದಾರೀಲೆ ನೆನೆದ ಕೈ ಹಿಡಿದೆ ನೀನು, ತಣ್ಣಗ ಅಂತ ತಿಳಿದು**
**ಬಿಡವೊಲ್ಲಿ ಇನ್ನೂನೂ, ಬೂದಿಮುಚ್ಚಿದ ಕೆಂಡ ಇದಂತ ಹೊಳೆದು**
**ಮುಗಿಲನ ಕಪ್ಪರಿಸಿ ನೆಲಕ ಬಿದ್ದರ ನೆಲಕ ನೆಲಿ ಎಲ್ಲಿನ್ನ**
**ಆ ಗಾದಿ ಮಾತು ನಂಬಿ, ನಾನು ದೇವರಂತ ತಿಳಿದಿಯೇನ ನೀ ನನ್ನ**

ಸಂಸಾರ ಎಂಬ ಬಂಧನದಲ್ಲಿ ನನ್ನ ಕೈ ಹಿಡಿದು ನೀನು ಬಂದೆ. ತಣ್ಣಗೆ ಅಂತ ತಿಳಿದು ನನ್ನ ರಕ್ಷಣೆ ಇವರು ಮಾಡುವರು ಎಂಬ ಭರವಸೆಯೊಂದಿಗೆ ನಾನಾ ಕನಸುಗಳನ್ನು ಹೊತ್ತು ನೀನು ನನ್ನ ಜೊತೆಯಾದೆ. ಆದರೆ ಆ ಭರವಸೆಗಳು ಹುಸಿಯಾಗಿದೆ. ಬೂದಿಮುಚ್ಚಿದ ಕೆಂಡದಂತಿದೆ. ಭರವಸೆಗಳು ಹುಸಿಯಾದಾಗ ಮನುಷ್ಯ ನಿರಾಶನಾಗುತ್ತಾನೆ. ನನ್ನ ಮೇಲೆ ಇನ್ನಿಲ್ಲದ ಆಸೆ,ಕನಸುಗಳನ್ನು ಹೊತ್ತು ಜೊತೆಯಾಗಿ ನೀನು ಬಂದೆ. ಆದರೆ ನಿನ್ನ ಕನಸುಗಳನ್ನು ನೆರವೇರಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಭೂಮಿಯನ್ನು ರಕ್ಷಣೆ ಮಾಡುವುದು ಆಕಾಶ ಎಂಬ ಗಾದೆ ಮಾತನ್ನು ನಂಬಿದಂತೆ ನಿನ್ನನ್ನು ನಾನು ರಕ್ಷಣೆ ಮಾಡುವೆನೆಂದು ತಿಳಿದು ನೀನು ಬಂದಿದ್ದೆ.ಆದರೆ ಆ ಮುಗಿಲೇ (ಆಕಾಶವೇ) ನೆಲಕೆ ಬಿದ್ದರೆ ಭೂಮಿಗೆ ಬೇರೆ ದಾರಿ ಕಾಣಿಸದು. ಹಾಗೆಯೇ ನನ್ನ ನಂಬಿ ಬಂದ ನಿನಗೆ ಯಾವುದೇ ಬಗೆಯ ಸುಖವಾಗಲಿ, ಸಂತೋಷವಾಗಲೀ ಸಿಗಲಿಲ್ಲ, ಭರವಸೆಯು ಕೂಡ ಕಳಚಿದೆ. ಆ ಬೇಸರದ ನಡುವೆಯೂ ನನ್ನನ್ನು ದೇವರೆಂದು ತಿಳಿದು ನೋಡುತ್ತಿರುವೆಯಾ ನೀನು ನನ್ನ ಎನ್ನುವ ಮೂಲಕ ಮಗುವಿನ ಸಾವು ತನಗೂ ಅಗಾಧವಾದ ನೋವನ್ನು ತಂದಿದೆ. ನೀನು ಅತ್ತು ಕಣ್ಣೀರನ್ನು ಸುರಿಸಿ ದುಃಖ ತೋರಿಸಿಕೊಳ್ಳುತ್ತಿರುವೆ.ಆದರೆ ನನಗೆ ಆ ಅಳುವು ಕೂಡ ಬರುತ್ತಿಲ್ಲ ಬೂದಿ ಮುಚ್ಚಿದ ಕೆಂಡದಂತಿದೆ.

ನೋವು, ನಿರಾಸೆ, ಕೋಪ, ದುಃಖ ಒಳಗಿದೆ ಎಂಬ ಮಾತಿನ ಮೂಲಕ ತಂದೆಗೂ ಕೂಡ ಮಗುವಿನ ಸಾವು ಎಂತಹ ನೋವನ್ನು ತಂದೊಡ್ಡುತ್ತದೆ ಎಂಬ ವಿಚಾರವನ್ನು ಅತ್ಯಂತ ಭಾವನಾತ್ಮಕವಾಗಿ ತಿಳಿಸುವ ಕೆಲಸವನ್ನು ಬೇಂದ್ರೆ ಅವರು ಇಲ್ಲಿ ಮಾಡಿದ್ದಾರೆ.

**ಇಬ್ಬನ್ನಿ ತೊಳೆದರೂ ಹಾಲು ಮೆತ್ತಿದಾ ಕವಳಿ ಕಂಟಿಯಾ ಹಣ್ಣು**
**ಹೊಳೆ ಹೊಳೆವ ಹಾಂಗ ಕಣ್ಣಿರುವ ಹೆಣ್ಣು, ಹೇಳು ನಿನ್ನವೇನ ಈ ಕಣ್ಣು?**
**ದಿಗಿಲಾಗಿ ಅನ್ನತದ ಜೀವ ನಿನ್ನ ಕಣ್ಣಾರೆ ಕಂಡು ಒಮ್ಮಿಗಿಲ**
**ಹುಣ್ಣಿವೀ ಚಂದಿರನ ಹೆಣ ಬಂತೊ ಮುಗಿಲಾಗ ತೇಲತ ಹಗಲ**

ಇಬ್ಬನಿ ತೊಳೆದರೂ ಹಾಲು ಮೆತ್ತಿದಂತೆ ಇರುವ ಕವಳಿಕಂಟಿಯಾ ಹಣ್ಣು (ಧಾರವಾಡದಲ್ಲಿ ಸಿಗುವ ಕಪ್ಪು ಬಣ್ಣ ಮಿಶ್ರಿತವಾದ ಹಣ್ಣು) ಹೊಳೆ ಹೊಳೆಯುವ ಹಾಂಗ ಕಣ್ಣಿರುವ ಹೆಣ್ಣು ನೀನು ಅಂದರೆ ಹೇಗೆ ಕವಳಿಕಂಟಿಯಾ ಹಣ್ಣು ಕಪ್ಪುಬಣ್ಣದ್ದಾಗಿದರೂ ಇಬ್ಬನಿ ಇಂದ ಮಿಶ್ರಿತವಾಗಿದ್ದರೂ ತನ್ನ ಸೊಗಸನ್ನು ಬಿಡಲಾಗದೊ ಅಂತಹ ಹಣ್ಣಿನ ಕಣ್ಣಿನಂತಿರುವ ನಿನ್ನ ಕಣ್ಣುಗಳು ಈಗ ಅತ್ತು ಅತ್ತು ಸೊರಗಿವೆ.ನನಗೆ ಈ ಕಣ್ಣುಗಳು ನಿಜಕ್ಕೂ ನಿನ್ನ ಕಣ್ಣುಗಳೇನಾ? ಎಂಬ ಸಂದೇಹ ಬರುತ್ತಿದೆ ಎಂದು ಪ್ರಶ್ನಿಸುತ್ತಿದ್ದಾರೆ. ಕಪ್ಪು ಕಸ್ತೂರಿ ಎಂಬ ಜನಪ್ರಿಯ ಮಾತಿನಂತೆ ಲಕ್ಷಣವಾಗಿದ್ದ ನಿನ್ನ ಕಣ್ಣುಗಳು ಅತ್ತು ಅತ್ತು ಕಣ್ಣೀರು ಬರಿದಾಗಿ ನಿಜಕ್ಕೂ ಇವು ನಿನ್ನವೇ ಕಣ್ಣುಗಳಾ ? ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತಿದೆ.ನಿನ್ನ ಈ ತರಹದ ಕಣ್ಣುಗಳನ್ನು ನೋಡಿ ಭಯ ಉಂಟಾಗುತ್ತಿದೆ. ಹುಣ್ಣಿಮೆಯ ಚಂದ್ರನ ಸೊಬಗೆ ಸೊಬಗು.ಆದರೆ ಅದೇ ಹುಣ್ಣಿಮೆಯ ಚಂದ್ರ ಹಗಲಿನಲ್ಲಿ ಬಂದರೆ ಯಾವುದೇ ಸೌಂದರ್ಯ ಗೋಚರವಾಗದು.ಅದನ್ನೇ ಇಲ್ಲಿ ಉಪಮೆಯ ಮೂಲಕ ಹಗಲಿನಲ್ಲಿ ಬಂದಿರುವ ಆ ಹುಣ್ಣಿಮೆಯ ಚಂದ್ರ ಹೆಣದಂತೆ ಗೋಚರವಾಗುತ್ತದೆ ಎನ್ನುವ ಮೂಲಕ ತನ್ನ ಮಡದಿ ನಕ್ಕರೆ ಮಾತ್ರ ಚೆಂದ ಅಳು ಅವಳಿಗೆ ಶೋಭೆ ತರದು ಎಂದು ಹೇಳುವಂತಿದೆ. ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ ಹಾಗೆಯೇ ಮಗು ತೀರಿಹೋಗಿದೆ ಆ ವಾಸ್ತವವನ್ನು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆ ನಮಗಿದೆ. ಅದನ್ನು ಒಪ್ಪಿಕೊಳ್ಳುವ, ಎಷ್ಟೇ ಅತ್ತರೂ, ಕರೆದರೂ ಮತ್ತೆ ಮರಳಿ ಬಾರಲಾರರು ಅದಕ್ಕೆಂದೆ ಬೇಂದ್ರೆ ಮಗುವನ್ನು ಅಂತು ಉಳಿಸಿಕೊಳ್ಳಲಾಗಲಿಲ್ಲ, ಮಡದಿಯನ್ನಾದರೂ ಇನ್ನು ಮುಂದಾದರೂ ಚೆನ್ನಾಗಿ ನೋಡಿಕೊಳ್ಳುವ ಪ್ರಯತ್ನ ಮಾಡುವೆನೆಂದು ನಿರ್ಧರಿಸಿ ಮಡದಿಯನ್ನು ಸಂತೈಸುವ ರೀತಿ ಇಲ್ಲಿ ವ್ಯಕ್ತವಾಗಿದೆ ಎನ್ನಬಹುದು.ವಿಷವನ್ನು ಕುಡಿದ ನಂಜುಂಡನಂತೆ ತನಗಾದ ನೋವನ್ನು ಸಹಿಸಿಕೊಂಡು ಮಡದಿಯ ನೋವನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡವೆನೆಂಬ ಭಾವ ಬೇಂದ್ರೆ ಅವರಲ್ಲಿದೆ ಎಂದು ಊಹೆ ಮಾಡಬಹುದು.

**ನಿನ ಕಣ್ಣಿನ್ಯಾಗ ಕಾಲೂರಿ ಮಳೆಯು, ನಡ ನಡಕ ಹುಚ್ಚನಗಿ ಯಾಕ?**
**ಹನಿ ಒಡೆಯಲಿಕ್ಕೆ ಬಂದಂಥ ಮೋಡ ತಡಧಾಂಗ ಗಾಳಿಯ ನೆವಕ ಅತ್ತಾರ ಅತ್ತುಬಿಡು,**
**ಹೊನಲು ಬರಲಿ, ನಕ್ಯಾಕ ಮರಸತೀ ದುಕ್ಕ?**
**ಎವೆಬಡಿಸಿ ಕೆಡವು, ಬಿರಿಗಣ್ಣು ಬ್ಯಾಡ, ತುಟಿಕಚ್ಚಿ ಹಿಡಿಯದಿರು ಬಿಕ್ಕ**

ಧಾರಾಕಾರವಾಗಿ ಬರಬಹುದಾದ ಮಳೆಯನ್ನು ಗಾಳಿ ಬಂದು ತಡೆದಂತೆ ನಿನ್ನ ಕಣ್ಣಿನ ತುಂಬ ತುಂಬಿಕೊಂಡಿರುವ ಕಣ್ಣೀರನ್ನು ನಗುವಿನಲ್ಲಿ ಯಾಕೆ ಬಂಧಿಸಿಟ್ಟಿರುವೆ. ಅತ್ತು ಬಿಡು ಮನಸ್ಸಿನ ದುಃಖ ಖಾಲಿಯಾಗುವ ಹಾಗೆ ಎಂದು ಮಡದಿಯನ್ನು ಸಂತೈಸುತ್ತಿದ್ದಾರೆ. ತಂದೆಗಿಂತ ತಾಯಿಗೆ ಮಗುವನ್ನು ಕಳೆದುಕೊಂಡಿರುವ ದುಃಖ ಅಗಾಧವಾಗಿ ಕಾಡುವುದು. ಏಕೆಂದರೆ ನವಮಾಸ ತನ್ನ ಒಡಲಲ್ಲಿ ಇರಿಸಿಕೊಂಡು ಪ್ರೀತಿ, ಮಮತೆಯನ್ನು ನೀಡುವ ಆ ಮಹಾನ್ ತ್ಯಾಗಿಗೆ ತನ್ನ ಕಣ್ಣಿದುರಲ್ಲೇ ಒಂದೂವರೆ ವರ್ಷದ ಮಗು ತೀರಿಕೊಂಡಿದೆ ಎಂದರೆ ಅವಳಿಗಾಗುವ ದುಃಖದ ಪರಿ ಹೇಗಿರಬಹುದು ಯೋಚಿಸಿ !

ಅದಕ್ಕೆಂದೆ ಬೇಂದ್ರೆ ಮಡದಿಯನ್ನು ಅತ್ತು ಬಿಡು, ಕಣ್ಣೀರನ್ನು ತಡೆದಿಟ್ಟುಕೊಳ್ಳಬೇಡವೆಂದು ಹೇಳುತ್ತಿದ್ದಾರೆ. ಹೇಗೆ ಕಾರ್ಮೋಡ ಸರಿಸಿ ಮಳೆ ಬಂದು ಭೂತಾಯಿ ತಂಪಾಗುವಳೋ ಹಾಗೇ ನಿನ್ನಲ್ಲಿರುವ ಎಲ್ಲ ದುಃಖವನ್ನು ತಡೆದಿಟ್ಟುಕೊಂಡು ಹುಚ್ಚಿನ ನಗೆಯನ್ನು ಬೀರಬೇಡ, ಅಳು; ಅತ್ತಾಗ ನೋವಿನ ತೀವ್ರತೆ ಕೊಂಚಮಟ್ಟಿಗಾದರೂ ಶಮನವಾಗಬಲ್ಲದು ಎಂದು ಯಾವುದೇ ಕಾರಣಕ್ಕೂ ದುಃಖವನ್ನು ಬಚ್ಚಿಡಬೇಡವೆಂದು ಹೇಳಿದ್ದಾರೆ.

ಅತ್ತಷ್ಟು ಮನಸ್ಸು ಹಗುರವಾಗುತ್ತದೆ.ನೋವಿನ ಶಮನವಾಗದಿದ್ದರೂ ಅಳುವನ್ನು ತಡೆದಿಟ್ಟುಕೊಂಡರೆ ಅದು ಉಂಟುಮಾಡುವ ಪರಿಣಾಮ ಹೇಳಲಾಗದು. ಆದ್ದರಿಂದಲೇ ಬೇಂದ್ರೆ ಅಮ ಅಳು, ಅತ್ತು ನಿನ್ನ ನೋವನ್ನು ಕೊಂಚ ಸಮಯಕ್ಕಾದರೂ ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಿಕೊ ಎಂಬುದನ್ನು ಬರಬಹುದಾದ ಮಳೆಯನ್ನು ಗಾಳಿ ತಡೆದಿಟ್ಟುಕೊಂಡಂತೆ ಅಳುವನ್ನು ತಡೆಯಬೇಡವೆಂದು ಸಮಾಧಾನ ಮಾಡುತ್ತಿದ್ದಾರೆ.

ತಮಗಾದ ನೋವನ್ನು ಪರಿಗಣಿಸದೇ ತಾಯಿಯೊಬ್ಬಳ ಮನಸ್ಥಿತಿ ಹೇಗಿರಬಹುದು, ಅವಳ ದುಃಖದ ಮಟ್ಟ ಎಂತಹದ್ದು ಎಂಬುದನ್ನು ಅರಿತುಕೊಂಡು ಮಡದಿಯನ್ನು ಸಂತೈಸುವ ಬೇಂದ್ರೆ ನಿಜಕ್ಕೂ ಎಲ್ಲ ಪುರುಷರಿಗೂ ಮಾದರಿಯಾಗಿ ನಿಲ್ಲುತ್ತಾರೆಂದರೆ ಅದರಲ್ಲಿ ಅತಿಶಯೋಕ್ತಿ ಇರಲಾರದು. ಬೇಂದ್ರೆ ಅವರು ಬರೆದಷ್ಟೇ ಸೊಗಸಾಗಿ ತಮ್ಮ ಕಂಚಿನ ಕಂಠದಿಂದ ಮನಮುಟ್ಟುವಂತೆ ಸಿ.ಅಶ್ವಥ್ ಅವರು ಹಾಡಿದ್ದಾರೆ. ಆಸಕ್ತರು ಯೂಟ್ಯೂಬ್ ಅಲ್ಲಿ ಹಾಡನ್ನು ಕೇಳಿ ಆನಂದಿಸಬಹುದು.


ತಮ್ಮ ನೋವನ್ನು ಸಹಿಸಿಕೊಂಡು ತಮ್ಮ ಅನುಭವವನ್ನೇ ಉಪಮೆಗಳ ಮೂಲಕ ಕಟ್ಟಿಕೊಡುವ ಬೇಂದ್ರೆ ನಿಜಕ್ಕೂ ಎಲ್ಲ ಕಾಲದಲ್ಲಿಯೂ ಕಾಡುವ ಕವಿಯಾಗಿ ನಿಲ್ಲಬಲ್ಲರು. ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೇ ನೀಡುವೆನು ರಸಿಕ ನಿನಗೆ ಎಂಬ ದೀಕ್ಷೆಯ ತೊಟ್ಟು ಕಡುಬೇಗೆಯಲ್ಲಿ ಬೆಂದರೂ ತುಟಿಯಲ್ಲಿ ಸಂಭ್ರಮ ತಂದು ಕನ್ನಡಿಗರಿಗೆ ಎರಕ ಹೊಯ್ದವರು ವರಕವಿ, ಶಬ್ದ ಗಾರುಡಿಗ, ಬೆಂದು ಬೇಂದ್ರೆಯಾಗಿ ಮಿಂಚಿನಂತೆ ಶೋಭಿಸಿ ಅಜರಾಮರಾಗಿ ಬೆಳದು ನಿಂತ ಬೇಂದ್ರೆ ಅಂದಿಗೂ, ಇಂದಿಗೂ, ಎಂದೆಂದಿಗೂ ಆದರ್ಶ ಪುರುಷರು,ಅನುಕರಣೀಯರು, ಸದಾ ಕನ್ನಡಿಗರ ಮನದಲ್ಲಿ ಚಿರಸ್ಥಾಯಿಯಾಗಿ ಉಳಿಯಬಲ್ಲರು.

# ಕಾಂಗ್ರೆಸ್ ಕದ ತಟ್ಟಿದರೆ ಮಾಜಿ ಶಾಸಕ ನಾರಾಯಣಗೌಡರು!?

ಬೆಂಗಳೂರು, ಫೆ.8–ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ಮಾಜಿ ಶಾಸಕ ಕೆ.ಸಿ.ನಾರಾಯಣಗೌಡ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಲು ಸಿದ್ಧತೆ ನಡೆಸಿದ್ದಾರೆ ಎಂದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದ ನಾರಾಯಣಗೌಡರು ತಾವು ಕಾಂಗ್ರೆಸ್‌ಗೆ ಬರುವುದಾಗಿಯೂ ತಮಗೆ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದ ಟಿಕೆಟ್ ನೀಡಬೇಕೆಂದು ಬೇಡಿಕೆ ಇಟ್ಟಿರು ಎನ್ನಲಾಗಿದ್ದು, ಅದಕ್ಕೆ ಸಿದ್ದರಾಮಯ್ಯ, ಟಿಕೆಟ್ ಕೊಡುವ ಬಗ್ಗೆ ಭರವಸೆ ನೀಡಲು ಸಾಧ್ಯವಿಲ್ಲ. ಮೊದಲು ನೀವು ಪಕ್ಷಕ್ಕೆ ಸೇರ್ಪಡೆಯಾಗಿ. ಮುಂದೆ ಅದರ ಬಗ್ಗೆ ಚಿಂತನೆ ಮಾಡೋಣ ಎಂದು ಹೇಳಿದರಂತೆ.


ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ ಜೆಡಿಎಸ್ ಶಾಸಕರಾಗಿದ್ದ ನಾರಾಯಣ ಗೌಡರು, ಆಪರೇಷನ್ ಕಮಲ ಮೂಲಕ ಬಿಜೆಪಿಗೆ ಪಕ್ಷಾಂತರಗೊಂಡು ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಪತನಗೊಳ್ಳಲು ಕಾರಣಕರ್ತರಲ್ಲಿ ಒಬ್ಬರಾಗಿದ್ದರು. ನಂತರ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸಚಿವರೂ ಆದರು. ವಿಧಾನಸಭೆ ಸಾರ್ವತ್ರಿಕ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯೆದುರು ಸೋಲನನುಭವಿಸಿದ ಅವರು, ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಬಗ್ಗೆ ಅಸಮಾಧಾನಗೊಂಡಿದ್ದರು. ಮಂಡ್ಯ ಕ್ಷೇತ್ರವನ್ನು ಜೆಡಿಎಸ್‌ಗೆ ಕೊಡದೆ, ಬಿಜೆಪಿಯಲ್ಲೇ ಉಳಿಸಿಕೊಂಡು ಸುಮಲತಾ ಅವರನ್ನು ಅಭ್ಯರ್ಥಿ ಮಾಡಬೇಕೆಂದು ಇತ್ತೀಚೆಗೆ ಬಹಿರಂಗ ಹೇಳಿಕೆಯನ್ನೂ ನೀಡಿದ್ದರು. ಆದರೆ ಮಂಡ್ಯ ಕ್ಷೇತ್ರ ಜೆಡಿಎಸ್ ಪಾಲಾಗುತ್ತದೆ ಎಂಬುದು ಖಚಿತ ಎಂಬ ಹಿನ್ನೆಲೆಯಲ್ಲಿ ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಲು ನಿರ್ಧರಿಸಿದ್ದಾರೆ ಎಂದು ಹೇಳಲಾಗಿದೆ. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಗೌಡರು, ತಮ್ಮ ಆಪ್ತರೊಬ್ಬರ ಪುತ್ರನ ವಿವಾಹಕ್ಕೆ ಮುಖ್ಯಮಂತ್ರಿಗಳನ್ನು ಆಹ್ವಾನಿಸಲು ತೆರಳಿದ್ದೆ ಅಷ್ಟೆ ಆ ಸಂದರ್ಭದಲ್ಲಿ ತಾವು ಬಿಜೆಪಿ ತೊರೆದು ಕಾಂಗ್ರೆಸ್ ಸೇರುವ ಬಗ್ಗೆ ಯಾವುದೇ ರೀತಿಯ ಚರ್ಚೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು.


ಸಿದ್ದರಾಮಯ್ಯ


ಕೆ.ಸಿ.ನಾರಾಯಣಗೌಡ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

# ಶನಿವಾರ ಮೈಸೂರಿಗೆ ಅಮಿತ್ ಷಾ; ಭಾನುವಾರ ಚಾಮುಂಡೇಶ್ವರಿ ದರ್ಶನ



**ಬೆಂಗಳೂರು:** ಕೇಂದ್ರ ಗೃಹ ಸಚಿವ ಅಮಿತ್ ಷಾ ಬರುವ ಭಾನುವಾರ (ಫೆ.11) ಮೈಸೂರಿನ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿಯ ದರ್ಶನ ಪಡೆಯಲಿದ್ದಾರೆ.

ಲೋಕಸಭಾ ಚುನಾವಣಾ ಸಿದ್ಧತೆ ಹಾಗೂ ಕೆಲವು ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇದೇ 9ರಿಂದ ಎರಡು ದಿನಗಳ ಷಾ ಅವರ ರಾಜ್ಯ ಪ್ರವಾಸದಲ್ಲಿ ಕೊಂಚ ಬದಲಾವಣೆ ಆಗಿದೆ.

ಗೃಹ ಸಚಿವರ ಬದಲಾದ ಕಾರ್ಯಕ್ರಮದ ಬಗ್ಗೆ ಇಂದಿಲ್ಲಿ ಮಾಹಿತಿ ನೀಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಫೆಬ್ರವರಿ 10ರಂದು ರಾತ್ರಿ ನೇರವಾಗಿ ಷಾ ಅವರು ದೆಹಲಿಯಿಂದ ಮೈಸೂರಿಗೆ ತಲುಪಲಿದ್ದಾರೆ. ಬೆಳಗ್ಗೆ 11ಕ್ಕೆ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿಯ ದರ್ಶನ ಪಡೆದು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ.

ಸಂಜೆ ಸುತ್ತೂರು ಜಾತ್ರೆಯಲ್ಲಿ ಭಾಗವಹಿಸಿದ ನಂತರ ರಾಜ್ಯ ಬಿಜೆಪಿ ಹಮ್ಮಿಕೊಂಡಿರುವ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

**ಸಿದ್ದರಾಮಯ್ಯ ಮುಖ್ಯಮಂತ್ರಿ ಮರೆಯಬಾರದು!:** ಮುಖ್ಯಮಂತ್ರಿ ಸೇರಿದಂತೆ ಕೆಲವು ಕಾಂಗ್ರೆಸ್ ಮುಖಂಡರು ದೆಹಲಿಯಲ್ಲಿ ಮಾಂಸಾಹಾರ ಸೇವಿಸಿ, ನಂತರ ಸುತ್ತೂರು ಗದ್ದುಗೆಗೆ ಭೇಟಿ ನೀಡಿದ್ದು ಬಹಳ ದುರದೃಷ್ಟಕರ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಎಂಬುದನ್ನು ಮರೆಯಬಾರದು ಎಂದರು.

ಇದಕ್ಕೂ ಮುನ್ನ 'ಗ್ರಾಮ ಚಲೋ' ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ವಿಜಯೇಂದ್ರ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸವಲತ್ತುಗಳು ಸಿಗಬೇಕೆಂಬ ಉದ್ದೇಶದೊಂದಿಗೆ ಕೇಂದ್ರ ಸರ್ಕಾರದ ಜನಪರ ಯೋಜನೆಗಳ ಮಾಹಿತಿಯನ್ನು ಮನೆ-ಮನೆಗೆ ತಲುಪಿಸುವ ಬಿಜೆಪಿಯ 'ಗ್ರಾಮ ಚಲೋ' ಅಭಿಯಾನ ನಾಳೆಯಿಂದ ಮೂರು ದಿನಗಳ ಕಾಲ ನಡೆಯಲಿದೆ ಎಂದರು.

ರಾಜ್ಯದ 28 ಸಾವಿರಕ್ಕೂ ಹೆಚ್ಚು ಹಳ್ಳಿ ಹಾಗೂ 19 ಸಾವಿರ ನಗರ ಬೂತ್‌ಗಳ ವ್ಯಾಪ್ತಿಯಲ್ಲಿ 'ಗ್ರಾಮ ಚಲೋ' ಅಭಿಯಾನ ನಡೆಯಲಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಅಪೇಕ್ಷೆಯಂತೆ 'ಗ್ರಾಮ ಚಲೋ' ಅಭಿಯಾನಕ್ಕೆ ಚಾಲನೆ ನೀಡಿದ್ದೇವೆ. ಅಭಿಯಾನದಲ್ಲಿ 42 ಸಾವಿರ ಕಾರ್ಯಕರ್ತರು ಮೂರು ದಿನ ನಿರಂತರ ಅಭಿಯಾನದಲ್ಲಿ ಪಾಲ್ಗೊಳ್ಳಲಿದ್ದು, 2047ರ ವೇಳೆಗೆ 'ವಿಕಸಿತ ಭಾರತ' ಕನಸು ನನಸಾಗಲು ಗ್ರಾಮಗಳ ಅಭಿವೃದ್ಧಿ ಅಗತ್ಯವಿದೆ. ಕಳೆದ 10 ವರ್ಷಗಳಲ್ಲಿ ಕೇಂದ್ರ ಸರ್ಕಾರ ಮಾಡಿರುವ ಅಭಿವೃದ್ಧಿ ಕಾರ್ಯಗಳು ದೇಶದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕೆಂಬ ಅಭಿಯಾನ ಇದಾಗಿದೆ.

ಲೋಕಸಭಾ ಚುನಾವಣಾ ಪೂರ್ವ ಸಮೀಕ್ಷೆಯೊಂದು ದೇಶದಲ್ಲಿ ನರೇಂದ್ರ ಮೋದಿ ಅವರ ಪರವಾದ ಅಲೆ ಇದೆ ಎಂಬುದು ತಿಳಿದು ಬರುತ್ತಿದ್ದು, ದೇಶದ ಭವಿಷ್ಯದ ದೃಷ್ಟಿಯಿಂದ ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕೆಂಬುದು ದೇಶದ ಜನರ ಆಶಯವಾಗಿದೆ ಎಂದರು. ಕರ್ನಾಟಕದಲ್ಲಿ ಎಲ್ಲ ಕ್ಷೇತ್ರಗಳನ್ನು ಗೆಲ್ಲಬೇಕೆಂಬ ಗುರಿಯನ್ನು ಬಿಜೆಪಿ-ಜೆಡಿಎಸ್ ಇಟ್ಟುಕೊಂಡಿದೆ, ಅಂತಹ ವಾತಾವರಣ ಈಗಾಗಲೇ ನಿರ್ಮಾಣವಾಗಿದೆ, ಪಕ್ಷದ ಕಾರ್ಯಕರ್ತರು ರಣೋತ್ಸಾಹದಲ್ಲಿದ್ದಾರೆ, ಕಾಂಗ್ರೆಸ್ ಒಂದೊಂದು ಸೀಟು ಗೆಲ್ಲಲು ಪರಿತಪಿಸಲಿದೆ ಎಂದರು.

## ದೇಶದ ಆರ್ಥಿಕತೆ ಕುರಿತು ಕೇಂದ್ರದ 'ಶ್ವೇತಪತ್ರ'

# ಯುಪಿಎ ಬಿಟ್ಟ ಸವಾಲುಗಳನ್ನು ಎನ್‌ಡಿಎ ದಿಟ್ಟವಾಗಿ ಎದುರಿಸಿದೆ

ನವದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಲೋಕಸಭೆಯಲ್ಲಿ 'ದೇಶದ ಆರ್ಥಿಕ ಪರಿಸ್ಥಿತಿ ಕುರಿತ ಶ್ವೇತಪತ್ರ'ವನ್ನು ಮಂಡಿಸಿದರು. ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಆಡಳಿತ 2004 ಮತ್ತು 2014ರ ನಡುವೆ 10 ವರ್ಷಗಳ ವರ್ಷಗಳ ಅಧಿಕಾರಾವಧಿಯಲ್ಲಿ ರಾಷ್ಟ್ರ ಜಾಗತಿಕವಾಗಿ ಐದು ಆರ್ಥಿಕತೆಗಳ ಗುಂಪಿಗೆ ಸೇರಿದೆ ಎಂದು ಸರ್ಕಾರ ಪ್ರತಿಪಾದಿಸಿದೆ.

ಒಂದು ದಶಕದಲ್ಲಿ ಯುಪಿಎ ಸರ್ಕಾರ ಬಿಟ್ಟುಹೋದ ಸವಾಲುಗಳನ್ನು ಎನ್‌ಡಿಎ ಸರ್ಕಾರ ಯಶಸ್ವಿಯಾಗಿ ನಿವಾರಿಸಿದೆ ಮತ್ತು ಭಾರತವನ್ನು ಸುಸ್ಥಿರ ಉನ್ನತ ಬೆಳವಣಿಗೆಯ ಹಾದಿಯಲ್ಲಿ ಇರಿಸಲು ಕಠಿಣ ನಿರ್ಧಾರಗಳನ್ನು ತೆಗೆದುಕೊಂಡಿದೆ ಎಂದು ಶ್ವೇತಪತ್ರದಲ್ಲಿ ತಿಳಿಸಲಾಗಿದೆ.

2014 ರಲ್ಲಿ ಮೋದಿ ಸರ್ಕಾರ ಅಧಿಕಾರ ವಹಿಸಿಕೊಂಡಾಗ, ಆರ್ಥಿಕತೆಯು ದುರ್ಬಲ ಸ್ಥಿತಿಯಲ್ಲಿತ್ತು. ಸಾರ್ವಜನಿಕ ಹಣಕಾಸು ಕೆಟ್ಟ ಸ್ಥಿತಿಯಲ್ಲಿತ್ತು. ಹಣಕಾಸು ನಿರ್ವಹಣೆ ಸರಿಯಿರಲಿಲ್ಲ, ಹಣಕಾಸು ಆಶಿಸ್ತು ಮತ್ತು ವ್ಯಾಪಕ ಭ್ರಷ್ಟಾಚಾರವಿತ್ತು. ಇದು ಬಿಕ್ಕಟ್ಟಿನ ಪರಿಸ್ಥಿತಿಯಾಗಿತ್ತು. ಆರ್ಥಿಕತೆಯನ್ನು ಹಂತ ಹಂತವಾಗಿ ಸರಿಪಡಿಸುವ ಮತ್ತು ಆಡಳಿತ ವ್ಯವಸ್ಥೆಗಳನ್ನು ಕ್ರಮಬದ್ಧಗೊಳಿಸುವ ಜವಾಬ್ದಾರಿಯು ಅಗಾಧವಾಗಿತ್ತು ಎಂದು



ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನಲ್ಲಿ ಮಂಡಿಸಿದ 59 ಪುಟಗಳ ಶ್ವೇತಪತ್ರದಲ್ಲಿ ಹೇಳಲಾಗಿದೆ.

ಸರ್ಕಾರದ ಶ್ವೇತಪತ್ರದ ಪ್ರಕಾರ, 2014ರಲ್ಲಿ ಭಾರತೀಯ ಆರ್ಥಿಕತೆಯು ಬಿಕ್ಕಟ್ಟಿನಲ್ಲಿತ್ತು. ಆ ಸಮಯದಲ್ಲಿ ಶ್ವೇತಪತ್ರವನ್ನು ಬಿಡುಗಡೆ ಮಾಡಿದ್ದರೆ ನಕಾರಾತ್ಮಕ ನಿರೂಪಣೆ ಮತ್ತು ಹೂಡಿಕೆದಾರರ ವಿಶ್ವಾಸವನ್ನು ಅಲುಗಾಡಿಸುವಂತಿತ್ತು. ಎನ್‌ಡಿಎ ಸರ್ಕಾರ ರಾಜಕೀಯ ಮತ್ತು ಸ್ಥಿರತೆಯ ಲಾಭವನ್ನು ಪಡೆದುಕೊಂಡಿದ್ದು, ಹಿಂದಿನ ಯುಪಿಎ ಆಡಳಿತಕ್ಕಿಂತ ಭಿನ್ನವಾಗಿ ಹೆಚ್ಚಿನ ಆರ್ಥಿಕ ಒಳಿತು ಸಾಧಿಸುವ ಗುರಿಯೊಂದಿಗೆ ಕಠಿಣ ನಿರ್ಧಾರಗಳನ್ನು ತೆಗೆದುಕೊಂಡಿತು. ಯುಪಿಎ ಸರ್ಕಾರ ಆರ್ಥಿಕ ಚಟುವಟಿಕೆಗಳನ್ನು ಸುಗಮಗೊಳಿಸಲು ದಯನೀಯವಾಗಿ ವಿಫಲವಾಗಿ, ಆರ್ಥಿಕ ಅಭಿವೃದ್ಧಿಗೆ ಅಡೆತಡೆಗಳನ್ನು ಸೃಷ್ಟಿಸಿತ್ತು ಎಂದು ಶ್ವೇತಪತ್ರ ಹೇಳಿದೆ. ಎನ್‌ಡಿಎ ಸರ್ಕಾರದ ಆರ್ಥಿಕ ನಿರ್ವಹಣೆ ಹಾಗೂ ಉತ್ತಮ ಆಡಳಿತದಿಂದಾಗಿ 2014ರ ಹಿಂದಿನ ಯುಗದಲ್ಲಿನ ಎಲ್ಲಾ ಸವಾಲುಗಳನ್ನು ಯಶಸ್ವಿಯಾಗಿ ಮೆಟ್ಟಿ ನಿಲ್ಲಲಾಗಿದೆ. 2047ರೊಳಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಬೇಕಾಗಿರುವುದರಿಂದ ಅನೇಕ ಕ್ರಮ ಕೈಗೊಳ್ಳಲಾಗಿದೆ. ಯುದ್ಧ ವಿಮಾನಗಳು, ಜಲಾಂತರ್ಗಾಮಿ ನೌಕೆಗಳು, ರಾತ್ರಿ ಹೋರಾಟದ ಗೇರ್‌ಗಳು ಮತ್ತು ವಿವಿಧ ಉಪಕರಣಗಳ ನವೀಕರಣ ಮತ್ತು ಸ್ವಾಧೀನಕ್ಕೆ ಸರ್ಕಾರದಿಂದ ವಿಳಂಬವಾಗಿರುವುದಾಗಿಯೂ ಶ್ವೇತಪತ್ರದಲ್ಲಿ ಉಲ್ಲೇಖಿಸಲಾಗಿದೆ.

# ನೀವು ಪ್ರಧಾನಿಯಾದರೆ ಕಾಂಗ್ರೆಸ್ ಸಹಿಸಿಕೊಳ್ಳುತ್ತದೆಯೇ: ಖರ್ಗೆಗೆ ದೇವೇಗೌಡರ ಪ್ರಶ್ನೆ



**ನವದೆಹಲಿ:** ನೀವು ಪ್ರಧಾನಿಯಾದರೆ ಕಾಂಗ್ರೆಸ್ ಸಹಿಸಿಕೊಳ್ಳುತ್ತದೆಯೇ ಎಂದು ಮಲ್ಲಿಕಾರ್ಜುನ ಖರ್ಗೆಯವರಿಗೆ ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡರು ಗುರುವಾರ ಪ್ರಶ್ನಿಸಿದ್ದಾರೆ.

ರಾಜ್ಯಸಭೆಯಲ್ಲಿ ಮೊದಲು ಮಾತನಾಡಿದ ಪ್ರಧಾನಿ ಮೋದಿಯವರು, ಡಾ.ಮನಮೋಹನ್ ಸಿಂಗ್ ಅವರನ್ನು ಕೊಂಡಾಡಿದರು.

ಬಳಿಕ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಿ, ಮನಮೋಹನ್ ಸಿಂಗ್ ಒಳ್ಳೆಯ ಕೆಲಸ ಮಾಡಿದ್ದಾರೆ. ಪ್ರಧಾನಿ ಅವರ ಬಗ್ಗೆ ಆಡಿದ ಮಾತುಗಳಿಗಾಗಿ ನಾನು ಧನ್ಯವಾದ ಹೇಳುತ್ತೇನೆ. ಹೀಗೆಯೇ ಇರಬೇಕು. ಒಳ್ಳೆಯ ಕೆಲಸವನ್ನು ಮೆಚ್ಚಿ, ಕೆಟ್ಟದ್ದನ್ನು ಟೀಕಿಸಬೇಕು ಎಂದು ಹೇಳಿದರು.

ಇದೇ ವೇಳೆ ರಾಜ್ಯಸಭೆಯಲ್ಲಿ ದೇಶಕ್ಕೆ ಸಂಬಂಧಿಸಿದ ನಿರ್ಣಾಯಕ ವಿಷಯಗಳ ಬಗ್ಗೆ ಹೆಚ್ಚಿನ ಚರ್ಚೆಗಳನ್ನು ನಡೆಸುವಂತೆ ಖರ್ಗೆ ಸದನವನ್ನು ಒತ್ತಾಯಿಸಿದರು. ಬಳಿಕ ದೇವೇಗೌಡ ಅವರ ಕುರಿತು ಮಾತನಾಡಿದ ಅವರು, ನಿಮಗೆ ಆರ್ಥಿಕವಾಗಿ ಬೆಂಬಲ ನೀಡಲು ಯಾರೂ ಇಲ್ಲ, ನನ್ನ ಮೈತ್ರಿಗೆ ಯಾರು ಬೆಂಬಲ ನೀಡುತ್ತಾರೆ ಎಂದು ದೇವೇ ಗೌಡರು ನನ್ನನ್ನು ಪ್ರಶ್ನಿಸಿದ್ದರು. ಮೋದಿ ಮತ್ತು ದೇವೇಗೌಡರ ಪ್ರೇಮ ಸ್ವಲ್ಪ ತಡವಾಗಿ ಮೂಡಿದೆ ಎಂದು ಹೇಳಿ ದೇವೇಗೌಡ ಮತ್ತು ಬಿಜೆಪಿ ಮೈತ್ರಿ ಬಗ್ಗೆ ಮಾತನಾಡಿದರು. ಈ ವೇಳೆ ಮಾತನಾಡಿದ ದೇವೇಗೌಡರು, ಖರ್ಗೆ ಪ್ರಾಮಾಣಿಕ ವ್ಯಕ್ತಿ. ಮನಮೋಹನ್ ಸಿಂಗ್ ಅಪ್ಪಟ ಪ್ರಾಮಾಣಿಕ ವ್ಯಕ್ತಿ. ಆದರೆ, ಕಾಂಗ್ರೆಸ್ ತನ್ನ ಪಕ್ಷವನ್ನು ತಾನೇ ದುರ್ಬಲಗೊಳಿಸುತ್ತಿದೆ. ಖರ್ಗೆ ಅವರು ಉನ್ನತ ಸ್ಥಾನಕ್ಕೆ ಬಂದರೆ ಅವರು ಸಹಿಸಿಕೊಳ್ಳುತ್ತಾರೆಯೇ? ಖರ್ಗೆ ಸಿಎಂ ಆಗಬೇಕು ಅಂತ ಆಸೆ ಇತ್ತು. ಖರ್ಗೆ ಅವರು ಉನ್ನತ ಸ್ಥಾನಕ್ಕೆ ಬಂದರೆ ಕಾಂಗ್ರೆಸ್ ನವರು ಸಹಿಸಿಕೊಳ್ಳುತ್ತಾರೆಯೇ? ಎಂದು ಖರ್ಗೆಯವರನ್ನು ಪ್ರಶ್ನಿಸಿದರು. 1991ರಲ್ಲಿ ದೇಶವನ್ನು ಉಳಿಸಲು ಮನಮೋಹನ್ ಸಿಂಗ್ ಏನು ಮಾಡಿದ್ದಾರೆ ಎಂಬುದರ ಬಗ್ಗೆ ನಾನು ಸಾಕಷ್ಟು ಮಾತನಾಡಬಲ್ಲೆ ಎಂದು ಹೇಳಿದರು

# ಮನೆ ಬದಲಿಸುವ ಬಾಡಿಗೆದಾರರು ಹೊಸ ವಿಳಾಸದಲ್ಲೂ 'ಗೃಹ ಜ್ಯೋತಿ' ಯೋಜನೆ ಮುಂದುವರಿಸಬಹುದು!



**ಬೆಂಗಳೂರು:** ಗೃಹ ಜ್ಯೋತಿ ಯೋಜನೆಗೆ ನೋಂದಾಯಿಸಿರುವ ಮತ್ತು ಹೊಸ ವಿಳಾಸಕ್ಕೆ ಬದಲಾಯಿಸುತ್ತಿರುವ ಬಾಡಿಗೆದಾರರು ಇನ್ನು ಮುಂದೆ ತಮ್ಮ ಹೊಸ ನಿವಾಸದಲ್ಲೂ ಯೋಜನೆಯನ್ನು ಮುಂದುವರಿಸಬಹುದು.

ಗೃಹ ಜ್ಯೋತಿ ಯೋಜನೆಯಿಂದ ಗ್ರಾಹಕರು ತಮ್ಮ ಖಾತೆಗಳನ್ನು ಡಿ-ಲಿಂಕ್ ಮಾಡಲು, ವಿಳಾಸ ಬದಲಾವಣೆ ಮತ್ತು ಶಿಫ್ಟಿಂಗ್ ನಂತರ ಮರು ಲಿಂಕ್ ಮಾಡಲು ಅವಕಾಶ ಒದಗಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ವಿದ್ಯುತ್ ಸರಬರಾಜು ನಿಗಮಗಳಿಗೆ (ಎಸ್ಕಾಮ್‌ಗಳು) ರಾಜ್ಯ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ. ಫೆಬ್ರವರಿ 5 ರಂದು ಸಹಿ ಮಾಡಲಾದ ಆದೇಶವನ್ನು, ಇಂಧನ ಇಲಾಖೆಯ ಕೋರಿಕೆಯ ಮೇರೆಗೆ ಹೊರಡಿಸಲಾಗಿದೆ, ಬಾಡಿಗೆದಾರರಾಗಿ ಉಳಿಯುವ ಜನರ ಪ್ರಕರಣಗಳನ್ನು ಉಲ್ಲೇಖಿಸಿ. ಬೆಂಗಳೂರಿನಲ್ಲಿ ಅಥವಾ ರಾಜ್ಯದಾದ್ಯಂತ ಇತರ ಜಿಲ್ಲೆಗಳು ಮತ್ತು ನಗರಗಳಲ್ಲಿ ಬಾಡಿಗೆದಾರರಾಗಿ ಉಳಿದುಕೊಂಡಿರುವವರು ಅನೇಕರಿದ್ದಾರೆ. ಯೋಜನೆಯ ಲಾಭ ಪಡೆಯಲು ಅವರು ಆಧಾರ್ ಕಾರ್ಡ್ ವಿವರಗಳು ಮತ್ತು ಆರ್‌ಆರ್ ಸಂಖ್ಯೆಯೊಂದಿಗೆ ನೋಂದಾಯಿಸಿಕೊಳ್ಳಬೇಕು.

ಯೋಜನೆಯನ್ನು ಪ್ರಾರಂಭಿಸಿದಾಗ, ಒಬ್ಬ ಬಾಡಿಗೆದಾರ ಆಸ್ತಿ ಮಾಲೀಕರೊಂದಿಗೆ ತನ್ನ ಆಧಾರ್ ಕಾರ್ಡ್ ವಿವರಗಳೊಂದಿಗೆ ನೋಂದಾಯಿಸಿಕೊಂಡಿರುತ್ತಾನೆ. ಆದರೆ ಸ್ವಲ್ಪ ಸಮಯದ ನಂತರ ಅವರು ಬೇರೆ ಸ್ಥಳಕ್ಕೆ ಸ್ಥಳಾಂತರಗೊಂಡಿರುತ್ತಾರೆ. ಅವರ ಆಧಾರ್ ವಿವರಗಳನ್ನು ಈಗಾಗಲೇ ಅಪ್‌ಲೋಡ್ ಮಾಡಿರುವುದರಿಂದ ಮತ್ತು ಪೋರ್ಟಲ್ ಮತ್ತೆ ಅದನ್ನು ಸ್ವೀಕರಿಸದ ಕಾರಣ ಮರು-ನೋಂದಣಿ ಮಾಡಲು ಸಾಧ್ಯವಾಗುತ್ತಿಲ್ಲ. ಈಗ ಅವರಿಗೆ ಅವಕಾಶ ನೀಡಲು, ಈ ಡಿ-ಲಿಂಕಿಂಗ್ ನಿಬಂಧನೆಯನ್ನು ಘೋಷಿಸಲಾಗಿದೆ.

# ಭೌಗೋಳಿಕ ಸೂಚಕ, ಕರಕುಶಲ ಉತ್ಪನ್ನಗಳ ಉತ್ತೇಜನಕ್ಕೆ ಮೈಸೂರಲ್ಲಿ 'ಯೂನಿಟಿ ಮಾಲ್' ನಿರ್ಮಾಣ

- ಮೈಸೂರು ವಸ್ತುಪ್ರದರ್ಶನ ಆವರಣದಲ್ಲಿ 6.5 ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣ
- ಇ-ಮೇಲ್‌ನಲ್ಲಿ ವಿವಾಹ ನೋಂದಣಿಗೆ ಅವಕಾಶ
- ಸಂಪುಟ ಸಭೆಯಲ್ಲಿ ನಿರ್ಣಯ

ಬೆಂಗಳೂರು, ಫೆ.8–ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯಡಿ ಜಿಐ (ಜಿಯೋಗ್ರಾಫಿಕಲ್ ಇಂಡಿಕೇಷನ್–ಭೌಗೋಳಿಕ ಸೂಚಕ) ಉತ್ಪನ್ನಗಳು ಮತ್ತು ಕರಕುಶಲ ಉತ್ಪನ್ನಗಳನ್ನು ಉತ್ತೇಜಿಸಲು ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದಲ್ಲಿ 6.5 ಎಕರೆ ವಿಸ್ತೀರ್ಣದಲ್ಲಿ ಯೂನಿಟಿ ಮಾಲ್ ನಿರ್ಮಿಸಲು ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ರಾಜ್ಯ ಸಂಪುಟ ಸಭೆ ನಿರ್ಧರಿಸಿದೆ.

ಸಭೆಯ ನಂತರ ಸುದ್ದಿಗಾರರಿಗೆ ನಿರ್ಣಯಗಳ ಬಗ್ಗೆ ಮಾಹಿತಿ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್, ಕೇಂದ್ರ ಸರ್ಕಾರ ನೀಡುವ 193 ಕೋಟಿ ರೂ. ಬಡ್ಡಿ ರಹಿತ ಸಾಲದ ನೆರವಿನಿಂದ ರಾಜ್ಯದಲ್ಲಿ ಯೂನಿಟಿ ಮಾಲ್ ಅನ್ನು ನಿರ್ಮಿಸಲು ತೀರ್ಮಾನಿಸಿದ್ದು, ಅದಕ್ಕೆ ಮೈಸೂರು ವಸ್ತುಪ್ರದರ್ಶನ ಪ್ರಾಧಿಕಾರದಲ್ಲಿ 6.5 ಎಕರೆ ಜಮೀನು ಪಡೆಯಲು ಉದ್ದೇಶಿಸಲಾಗಿದೆ ಎಂದರು.



ಇ-ಮೇಲ್ ಮೂಲಕವೂ ವಿವಾಹ ನೋಂದಣಿ ಮಾಡಿಕೊಳ್ಳಲು ಅನುವಾಗುವಂತೆ ವಿಶೇಷ ವಿವಾಹ ಕರ್ನಾಟಕ ತಿದ್ದುಪಡಿ ನಿಯಮಗಳು 2024ಕ್ಕೆ ಅನುಮೋದನೆ ನೀಡಲಾಗಿದೆ. 2023–24ನೇ ಸಾಲಿನ ಎನ್‌ಸಿಪಿಎಸ್‌ಪಿ ಕ್ರಿಯಾ ಯೋಜನೆಯಡಿ ಸರ್ಕಾರಿ ಅನುದಾನಿತ ಮತ್ತು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 34,178 ವಿದ್ಯಾರ್ಥಿಗಳಿಗೆ 45.28 ಕೋಟಿ ರೂ. ವೆಚ್ಚದಲ್ಲಿ ಲೋನ್ ಕಿಟ್‌ಗಳನ್ನು ಉಚಿತವಾಗಿ ವಿತರಿಸಲು ಸಂಪುಟ ಸಭೆ ನಿರ್ಣಯಿಸಿದೆ. ಕರ್ನಾಟಕ ಕುಲಾಂತರಿ ಮತ್ತು ತಳಿ ವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿಬೀಜಗಳ ಮಾರಾಟ ಬೆಲೆಯ ನಿಗದಿ ಮತ್ತು ಪರಿಹಾರದ ಸಂದಾಯ ವಿಧೇಯಕ 2015 ಅನ್ನು ಹಿಂಪಡೆಯುವ ಬಗ್ಗೆ ಚರ್ಚೆ ನಡೆದಿದೆ ಎಂದರು.

ಕರ್ನಾಟಕ ಸಹಕಾರ ಸಂಘಗಳು ತಿದ್ದುಪಡಿ ಕಾಯಿದೆ 2024ಕ್ಕೆ ಅನುಮೋದನೆ ನೀಡಲಾಗಿದೆ. ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ವಿಧೇಯಕ 2024ಕ್ಕೆ ಮುಂದಿನ ಅಧಿವೇಶನದಲ್ಲಿ ಅನುಮೋದನೆ ನೀಡಲಾಗುತ್ತದೆ. ಇದರಿಂದಾಗಿ ರಾಜ್ಯದ 25 ಸಾವಿರ ಸೊಸೈಟಿಗಳಿಗೆ ಮೀಸಲಾತಿ ಸಾಮಾಜಿಕ ನ್ಯಾಯ ಸಿಗಲಿದೆ. ಈ ತಿದ್ದುಪಡಿಯಲ್ಲಿ ಸಹಕಾರ ಸಂಘಗಳ ಚುನಾವಣೆ ಹಾಗೂ ನಾಮ ನಿರ್ದೇಶನಗಳಲ್ಲಿ ಮೀಸಲಾತಿ ನೀಡಲು ಕ್ಯಾಬಿನೆಟ್ ತೀರ್ಮಾನಿಸಿದೆ ಎಂದರು. 2023–24ನೇ ಸಾಲಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಮೇಲ್ವಿಚಾರಕಿಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ 89.61 ಕೋಟಿ ರೂ. ವೆಚ್ಚದಲ್ಲಿ 75,938 ಸ್ಮಾರ್ಟ್ ಫೋನ್‌ಗಳನ್ನು ಖರೀದಿಸಿ ನೀಡಲು ಸಂಪುಟ ಅನುಮೋದನೆ ನೀಡಿದೆ ಎಂದು ಸಚಿವರು ತಿಳಿಸಿದರು.

## ತಪಾಸಣಾ ಶಿಬಿರ

ಮೈಸೂರು, ಫೆ.8– ಮೈಸೂರಿನ ಸಾಲ್ವೆ ಮರಿಯ ಚಾರಿಟಬಲ್ ಟ್ರಸ್ಟ್, ರೋಟರಿ ಇನ್ನರ್‌ವ್ಹೀಲ್ ಮಿಡ್‌ಟೌನ್, ಮೈಸೂರು ಡಯಾಗ್ನಾಸ್ಟಿಕ್ ಸೆಂಟರ್ ಸಹ ಯೋಗದಲ್ಲಿ ಫೆ.10ರಂದು ಬೆಳಗ್ಗೆ 10 ಗಂಟೆಗೆ ಮಧುಮೇಹ ಮತ್ತು ಹೃದಯ ರೋಗಿಗಳ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಮೈಸೂರಿನ ಶ್ವೇತಾ ಬಾಂಟಿಯಾಗೆ ಮಿಸಸ್ ಮಿಡಲ್ ಈಸ್ಟ್ ಕಿರೀಟ



ಮೈಸೂರು, ಫೆ. 8– ಇತ್ತೀಚೆಗೆ ಯುಎಇಯ ಅಬುಧಾಬಿಯಲ್ಲಿ ಮಾಡೆಲ್ ಮತ್ತು ಉದ್ಯಮಿ ಲಿಪಿಕಾ ಭಟ್ಟಾರು, ಅಲೋಹಾ ಇವೆಂಟ್ಸ್ ವ್ಯವಸ್ಥಾಪಕ ನಿರ್ದೇಶಕಿ ಚಿತ್ರಾ ಮೋಹನನ್ ಮತ್ತು ತ್ರೈನ್ ಬ್ರಾಂಡಿಂಗ್ ಸಿಇಓ ಫಿಜ್ಞಾ ಫತೇಮಾ ಅವರು ನಡೆಸಿದ ಸೌಂದರ್ಯ ಸ್ಪರ್ಧೆಯಲ್ಲಿ ಮೈಸೂರಿನ ಶ್ವೇತಾ ಬಾಂಟಿಯಾ ಮಿಸಸ್ ಮಿಡಲ್ ಈಸ್ಟ್ ಕಿರೀಟ ತಮ್ಮದಾಗಿಸಿಕೊಂಡರು. ಇವರು ಮೈಸೂರು ವಿಶ್ವವಿದ್ಯಾನಿಲಯದಿಂದ ರ‍್ಯಾಂಕ್ ಪಡೆದಿದ್ದು, ಮರಿಮಲ್ಲಪ್ಪ ಕಾಲೇಜಿನ ಹಳೇ ವಿದ್ಯಾರ್ಥಿಯಾಗಿದ್ದಾರೆ. ಶ್ವೇತಾ ಬಾಂಟಿಯಾ ಅವರು ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಎಂಬಿಬಿಎಸ್ ಪದವೀಧರ ಡಾ. ಜೀವನ್ ಮಹಾವೀರ್ ಅವರನ್ನು ಮದುವೆಯಾಗಿದ್ದಾರೆ. ಶ್ವೇತಾ ಬಾಂಟಿಯಾ ಅವರು ಅಬುಧಾಬಿಯಲ್ಲಿ ಆರ್ಥಿಕ ವೃತ್ತಿಪರ ಜೀವನ ನಡೆಸುತ್ತಿದ್ದಾರೆ.



ಕೆ.ಆರ್. ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ 23ನೇ ವಾರ್ಡ್ ಕಾಂಗ್ರೆಸ್ ಮುಖಂಡ ರಾಜೀವ್ ಅಭಿನಂದಿಸಿ, ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ 23ನೇ ವಾರ್ಡ್ ಅಧ್ಯಕ್ಷ ಆನಂದ್, ಜ್ಞಾನೇಶ್, ಚಂದು, ಹರ್ಷ, ಶ್ರೀಕಾಂತ್, ಚೆಲುವರಾಜ್, ಮಧು, ಯೂತ್ ಕಾಂಗ್ರೆಸ್ ಅಧ್ಯಕ್ಷ ಪವನ್ ಉಪಸ್ಥಿತರಿದ್ದರು.

## ಒಂದನೇ ಪುಟದಿಂದ

# ಮರದ ಒಣ ರೆಂಬೆ ಬಿದ್ದು ಅಮಾಯಕ ಬಲಿ

ತಮ್ಮ ಹೋಂಡಾ ಆಕ್ಟೀವಾ ಸ್ಕೂಟರ್‌ನಲ್ಲಿ ಮನೆಯಿಂದ ಸರಸ್ವತಿಪುರಂನ ಮೈತ್ರಿ ಬ್ರಿಗೇಡ್ ಬಳಿಯ ಸ್ಕೂಟರ್ ಶೋರೂಂಗೆ ವಾಹನ ಸರ್ವಿಸ್‌ಗೆ ಬಿಡಲು ಹೋಗುತ್ತಿದ್ದಾಗ ಬೋಗಾದಿ ರಸ್ತೆಯಲ್ಲಿ ಕುಕ್ಕರಹಳ್ಳಿ ಬಳಿ ಸರ್ಕಾರಿ ಆಯುರ್ವೇದ ಕಾಲೇಜಿನ ಚಂದ್ರವನ ಫಾರಂ ಎದುರಿನ ಹಳೇ ಬಾರೀ ಅರಳೀಮರದ ಒಣ ರೆಂಬೆ ರೆಜಿನಾಲ್ಡ್ ಪ್ಲಾಟೆಲ್ ಅವರ ಮೇಲೆ ಬಿದ್ದಿದೆ.

ಹೆಲ್ಮೆಟ್ ಧರಿಸಿದ್ದರೂ ಪ್ಲಾಟೆಲ್ ಅವರ ತಲೆಗೆ ಬಾರೀ ಪೆಟ್ಟು ಬಿದ್ದಿತು. ಅವರನ್ನು ಹತ್ತಿರದ ಖಾಸಗಿ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆಗೆ ಸ್ಪಂದಿಸದ ಕಾರಣ ವೆಂಟಿಲೇಟರ್‌ನಲ್ಲಿದ್ದ ಪ್ಲಾಟಿಲ್ ಅವರನ್ನು ಬುಧವಾರ ಮಧ್ಯಾಹ್ನ ಮನೆಗೆ ಕರೆತರಲಾಗಿತ್ತು. ಅಂದು ರಾತ್ರಿ 7.30ರ ವೇಳೆಗೆ ಅವರು ಕೊನೆಯುಸಿರೆಳೆದರು ಎಂದು ಕುಟುಂಬದವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಸರಸ್ವತಿಪುರಂ ಠಾಣೆ ಇನ್‌ಸ್ಪೆಕ್ಟರ್ ಪುರುಷೋತ್ತಮ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡರು. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಿದರು.

ನಂತರ ಪಾಲಿಕೆ ಅಭಯ ತಂಡದ ಸಿಬ್ಬಂದಿ ಮಂಗಳವಾರ ಬೆಳಗ್ಗೆ ಘಟನಾ ಸ್ಥಳಕ್ಕೆ ಧಾವಿಸಿ, ಮುರಿದು ಬಿದ್ದಿದ್ದ ಅರಳೀ ಮರದ ಒಣ ರೆಂಬೆಯನ್ನು ಕತ್ತರಿಸಿ ತೆರವುಗೊಳಿಸಿದರು. ಆ ವೇಳೆ ಕೆಲ ಸಮಯ ವಾಹನ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು.

ಘಟನೆ ಬಗ್ಗೆ ರೆಜಿನಾಲ್ಡ್ ಪ್ಲಾಟೆಲ್ ಅವರ ಸ್ನೇಹಿತರು 'ಮೈಸೂರು ಮಿತ್ರ' ಗಮನಕ್ಕೆ ತಂದರಲ್ಲದೆ, ಅವರ ಸ್ನೇಹಿತರಲ್ಲೊಬ್ಬರಾದ ಸಿ.ಕೆ.ಅಯ್ಯಣ್ಣ ಅವರು ತಮ್ಮ ಆತ್ಮೀಯರಾಗಿದ್ದ ರೆಜಿನಾಲ್ಡ್ ಪ್ಲಾಟೆಲ್ ಮರದ ರೆಂಬೆ ಬಿದ್ದು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದರು. ಹೆಲ್ಮೆಟ್ ಧರಿಸಿಯೇ ಸ್ಕೂಟರ್‌ನಲ್ಲಿ ಹೋಗುವಾಗ ಈ ದುರಂತ ಸಂಭವಿಸಿದೆ. ಅದಕ್ಕೆ ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿಯೇ ಕಾರಣ ಎಂದ ಅವರು, ಒಣಗಿದ ಹಾಗೂ ಅಪಾಯದಲ್ಲಿರುವ ಮರ, ರೆಂಬೆಗಳನ್ನು ತೆರವುಗೊಳಿಸುವುದು ಮೈಸೂರು ಪಾಲಿಕೆ ಜವಾಬ್ದಾರಿಯಲ್ಲವೇ? ಅವರ ಬೇಜವಾಬ್ದಾರಿಗೆ ನನ್ನ ಒಳ್ಳೆಯ ಸ್ನೇಹಿತನ ಕಳೆದುಕೊಂಡಿದ್ದೇವೆ ಎಂದು ದುಃಖಿಸಿದರು.

## ಬಿದ್ದಿದ್ದ ಮರದ 2 ರೆಂಬೆಗಳ ಪೈಕಿ ಪಾಲಿಕೆ ಒಂದನ್ನು ಮಾತ್ರ ಅರ್ಧಕ್ಕೆ ಕತ್ತರಿಸಿತ್ತು

ಮೈಸೂರು, ಫೆ.8(ಆರ್‌ಕೆ)ಮಾನ್ಸೂನ್ ಆರಂಭಕ್ಕೂ ಮೊದಲು ಪಾಲಿಕೆ ಸಿಬ್ಬಂದಿ ಹಳೆಯ, ಬೀಳುವ ಸ್ಥಿತಿಯಲ್ಲಿರುವ ಮರಗಳನ್ನು ತೆರವುಗೊಳಿಸಿ ಮಳೆ, ಗಾಳಿಗೆ ಉರುಳಿ ಬಿದ್ದು ಸಂಭವಿಸಬಹುದಾದ ಅಪಾಯ ತಪ್ಪಿಸಲು ಪ್ರಯತ್ನಿಸುವುದುಂಟು.

ನೆಲಕ್ಕೆ ಬಾಗಿದಂತಿರುವ ಹಾಗೂ ಸಂಚಾರಕ್ಕೆ ಅಡ್ಡಿಯಾಗುವ ಮರಗಳನ್ನು ಕತ್ತರಿಸುವ ಪ್ರಕ್ರಿಯೆಯನ್ನು ವರ್ಷಪೂರ್ತಿ ಮಾಡಬೇಕು. ಅದೇ ರೀತಿ ಬೀದಿ ದೀಪಗಳಿಗೆ ಅಡ್ಡಿಯಾಗುವ ಮತ್ತು ಮಾರ್ಗದಲ್ಲಿ ಸಂಚರಿಸುವ ವಾಹನಗಳಿಗೆ ತಗಲುವ ಮರದ ರೆಂಬೆಗಳನ್ನು ಟ್ರಿಮ್ ಮಾಡುವುದೂ ಸಹ ಪಾಲಿಕೆ ಜವಾಬ್ದಾರಿಯಾಗಿದೆ. ಸರ್ಕಾರಿ ಆಯುರ್ವೇದ ಕಾಲೇಜಿಗೆ ಸೇರಿದ ಚಂದ್ರವನ ಫಾರಂ ಎದುರು ಬೋಗಾದಿ ರಸ್ತೆ ಬದಿ ಇರುವ ಹಳೇ ಅರಳಿಮರದಲ್ಲಿದ್ದ 4 ಕೊಂಬೆಗಳ ಪೈಕಿ 2 ಅಪಾಯದಲ್ಲಿದ್ದವು. ಆದರೆ, ಇತ್ತೀಚೆಗೆ ಪಾಲಿಕೆಯವರು ಒಂದನ್ನು ಮಾತ್ರ ತೆರವುಗೊಳಿಸಿದ್ದರು. ಇನ್ನೊಂದು ಮಂಗಳವಾರ ಮುರಿದು ಬಿದ್ದಿದೆ ಎಂದು ಸಮೀಪದಲ್ಲೇ ಇರುವ ರಸ್ತೆ ಬದಿ ವ್ಯಾಪಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು. ತೆರವುಗೊಳಿಸಿದ್ದ ಒಂದು ರೆಂಬೆಯಲ್ಲಿ ಕವಲೊಡೆದಿದ್ದ ಮತ್ತೊಂದನ್ನು ಅರ್ಧಕ್ಕೆ ಮಾತ್ರ ಕತ್ತರಿಸಿ ತೆಗೆದಿದ್ದ ಪಾಲಿಕೆ ಅಧಿಕಾರಿಗಳು, ಉಳಿದ ಅರ್ಧ ಭಾಗವನ್ನು ಹಾಗೆಯೇ ಬಿಟ್ಟಿದ್ದರಿಂದ ವಾಹನ ಸವಾರರಿಗೂ ತೊಂದರೆಯಾಗುತ್ತಿತ್ತು. ಪಾಲಿಕೆಯವರು ಈ ಹಿಂದೆಯೇ ಈ ರೆಂಬೆಗಳನ್ನು ತೆರವುಗೊಳಿಸಿದ್ದರೆ ಮಂಗಳವಾರ ಈ ದುರ್ಘಟನೆ ಸಂಭವಿಸುತ್ತಿರಲಿಲ್ಲ. ಒಬ್ಬರ ಪ್ರಾಣವೂ ಉಳಿಯುತ್ತಿತ್ತು ಎಂದು ಅವರು ತಿಳಿಸಿದ್ದಾರೆ.

# ಕಾಂಗ್ರೆಸ್ ಸರ್ಕಾರದಲ್ಲೂ ಶೇ.40 ಕಮಿಷನ್ ಮುಂದುವರಿದಿದೆ

## ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಆರೋಪ



**ಬೆಂಗಳೂರು:** ಶೇ.40 ಕಮಿಷನ್ ಕಾಂಗ್ರೆಸ್ ಸರ್ಕಾರದಲ್ಲಿಯೂ ಮುಂದುವರಿದಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಗುರುವಾರ ಆರೋಪ ಮಾಡಿದ್ದಾರೆ.

ಚಾಮರಾಜಪೇಟೆಯ ಗುತ್ತಿಗೆದಾರರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳಿಂದಲೇ ರಾಜ್ಯದಲ್ಲಿ ಭ್ರಷ್ಟಾಚಾರ ಬೇರೂರಿದೆ. ಮಿತಿಮೀರಿದ ಭ್ರಷ್ಟಾಚಾರಿ ಅಧಿಕಾರಿಗಳಿದ್ದಾರೆ. ಬಿಬಿಎಂಪಿ, ನೀರಾವರಿ ಸೇರಿದಂತೆ ಎಲ್ಲಾ ಇಲಾಖೆಯಲ್ಲಿಯೂ ಭ್ರಷ್ಟ ಅಧಿಕಾರಿಯಾಗಳಿದ್ದಾರೆಂದು ಆರೋಪ ಮಾಡಿದರು. ಇದೇ ವೇಳೆ ವಿವಿಧ ಇಲಾಖೆಗಳಲ್ಲಿ ಕರೆದಿರುವ ಪ್ಯಾಕೇಜ್ ಟೆಂಡರ್ ಅನ್ನು ರದ್ದುಗೊಳಿಸುವಂತೆ ಆಗ್ರಹಿಸಿದರು. ಅಲ್ಲದೆ, ಪ್ರತಿಯೊಂದು ಕಾಮಗಾರಿಗೂ ಪ್ರತ್ಯೇಕ ಟೆಂಡರ್ ಕರೆಯಬೇಕು ಎಂದು ಒತ್ತಾಯಿಸಿದರು.

ಸರ್ಕಾರ ಕೂಡಲೇ ಪ್ಯಾಕೇಜ್ ಸಿಸ್ಟಮ್ ಸ್ಟಾಪ್ ಮಾಡಿ ಪ್ರತ್ಯೇಕ ಟೆಂಡರ್ ಕರೆಯಬೇಕು. ಕೋಲಾರದಲ್ಲಿ ಪ್ಯಾಕೇಜ್ ಟೆಂಡರ್ ಕರೆದಿದ್ದಾರೆ ಬೇರೆ ಜಿಲ್ಲೆಗಳಲ್ಲೂ ಕರೆದಿದ್ದಾರೆ. ಅಧಿಕಾರಿಗಳಿಂದಲೇ ಭ್ರಷ್ಟಾಚಾರ ಶುರುವಾಗಿದೆ. ಅಧಿಕಾರಿಗಳು ದುಡ್ಡು ಕಲೆಕ್ಟ್ ಮಾಡಿ ರಾಜಕಾರಣಿಗಳಿಗೆ ಕೊಡುತ್ತಿದ್ದಾರೆ. ಈ ಹಿಂದೆ ರಾಜಕಾರಣಿಗಳು ನೇರವಾಗಿ ಕಮಿಷನ್ ತೆಗೆದುಕೊಳ್ಳುತ್ತಿದ್ದರು. ಈಗ ಅಧಿಕಾರಿಗಳು ಕಮಿಷನ್ ತೆಗೆದುಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಶೇ.40 ಕಮಿಷನ್ ಈಗಲೂ ಮುಂದುವರಿದಿದೆ ಎಂದು ದೂರಿದರು.

ವಿವಿಧ ಇಲಾಖೆಯಲ್ಲಿ ನಡೆಯುತ್ತಿರುವ ಅನಾವಶ್ಯಕ ಪ್ಯಾಕೇಜ್ ಟೆಂಡರ್‌ಗಳನ್ನು ಕೂಡಲೇ ಸರ್ಕಾರ ರದ್ದುಗೊಳಿಸಬೇಕು. ಈಗಾಗಲೇ ಹಲವು ಬಾರಿ ಸಿಎಂ ಅವರನ್ನು ಭೇಟಿ ಮಾಡಿದ್ದೇವೆ. ಪ್ಯಾಕೇಜ್ ಟೆಂಡರ್ ರದ್ದು ಮಾಡುವಂತೆ ಮನವಿ ಮಾಡಿದ್ದೇವೆ. ಹತ್ತಾರು ಪತ್ರ ಬರೆದು ಸಿಎಂಗೆ ಮನವಿ ಮಾಡಿದ್ದೇವೆ. ಮುಖ್ಯ ಎಂಜಿನಿಯರ್ ಅವರನ್ನು ಪ್ರಶ್ನೆ ಮಾಡಿದರೆ ಮೇಲಾಧಿಕಾರಿಗಳ ಕಡೆ ತೋರಿಸುತ್ತಾರೆ. ಅವರನ್ನು ಕೇಳಿದರೆ ಸಚಿವರು, ಶಾಸಕರ ಕಡೆ ಬೊಟ್ಟು ಮಾಡಿ ತೋರಿಸುತ್ತಾರೆ ಎಂದರು. ಪೊಲೀಸ್ ವಸತಿ ಗೃಹ ಅಭಿವೃದ್ಧಿ ನಿಗಮ, ಬೆಂಗಳೂರು ಮಹಾನಗರ ಪಾಲಿಕೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಹಲವು ಇಲಾಖೆಗಳಲ್ಲಿ ಪ್ಯಾಕೇಜ್ ಟೆಂಡರ್ ಆಹ್ವಾನ ಬಂದಿದೆ. ಇದರಿಂದ ಸ್ಥಳೀಯ ಗುತ್ತಿಗೆದಾರರಿಗೆ ಮೋಸಗಳಾಗುತ್ತಿದೆ. ನೆರೆ ರಾಜ್ಯದ ಗುತ್ತಿಗೆ ಅನಕೂಲ ಮಾಡಿಕೊಡಲು ಪ್ಯಾಕೇಜ್ ಟೆಂಡರ್ ಮಾಡುತ್ತಿದ್ದಾರೆ. ಪ್ಯಾಕೇಜ್ ಟೆಂಡರ್ ಪದ್ಧತಿ ಭ್ರಷ್ಟಾಚಾರಕ್ಕೆ ಆಸ್ಪದವಾಗಿದೆ. ತಮ್ಮ ಆಪ್ತರಾದ ಗುತ್ತಿಗೆ ಕಾಮಗಾರಿ ನೀಡಲು ಮುಂದಾಗಿದ್ದಾರೆ. ಇದರಿಂದ ಅರ್ಹ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದೆ. ಎಲ್ಲಾ ರೀತಿಯ ಕಾಮಗಾರಿಗಳ ಟೆಂಡರ್ ಮೂಲಕ ಹಂಚಿಕೆ ಮಾಡಿದರೆ ನ್ಯಾಯ ಸಿಗುತ್ತೆ ಎಂದು ತಿಳಿಸಿದರು. ಪ್ಯಾಕೇಜ್ ಟೆಂಡರ್ ರದ್ದು ಮಾಡದೇ ಇದ್ದರೆ, ಹೋರಾಟ ಮಾಡಲು ಕರೆ ಕೊಡುತ್ತೇವೆ. ಒಂದು ವಾರದಲ್ಲಿ ಬಿಬಿಎಂಪಿಯಲ್ಲಿ 300 ಕೋಟಿ ಪ್ಯಾಕೇಜ್ ಟೆಂಡರ್‌ಗೆ ಆಹ್ವಾನಿಸಲಾಗಿದೆ. ಈ ಪ್ಯಾಕೇಜ್ ಟೆಂಡರ್ ಮೇಲೆ ಹಲವು ಅನುಮಾನ ಮೂಡಿದೆ. ನಿಮಗೆ ಕೆಲಸ ಬೇಕು ಎಂದರೆ ಅಧಿಕಾರಿಗಳೇ ಹಣ ಕೇಳುತ್ತಿದ್ದಾರೆ. ಕಾಮಗಾರಿ ಪೂರ್ಣಗೊಳಿಸಿ ಎರಡು ವರ್ಷ ಆದರೂ ಹಣ ಬಿಡುಗಡೆ ಆಗಿಲ್ಲ. ಶೇ.40 ಕಮಿಷನ್ ಮುಂದುವರಿದಿರುವ ಬಗ್ಗೆ ಸಮಯ ನೋಡಿ ದೂರು ಕೊಡುತ್ತೇವೆ. ಯಾರಿಗೂ ಹೆದರಬೇಕಿಲ್ಲ ಎಂದರು. ಇದೇ ವೇಳೆ ದಾಖಲಾತಿ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 800 ಪುಟಗಳ ದಾಖಲಾತಿ ಕೊಟ್ಟಿದ್ದೇವೆ. ಕೋರ್ಟ್ ಅಲ್ಲಿ ಕೊಡುತ್ತೇವೆ ಎಂದರು.

# ಇದನ್ನು ಒಂದು ಆಡಳಿತ ಎನ್ನಲಾದಿತೇ?

ಮೈಸೂರು,ಫೆ.8(ಆರ್‌ಕೆ)–ಮೈಸೂರಿನ ರಸ್ತೆಬದಿ ಮರಗಳ ಒಣಗಿದ ರೆಂಬೆ ಹಾಗೂ ಅಪಾಯಕಾರಿ ಮರಗಳನ್ನು ತೆರವುಗೊಳಿಸುವುದು ಮೈಸೂರು ಮಹಾನಗರ ಪಾಲಿಕೆಯ ತೋಟಗಾರಿಕೆ ವಿಭಾಗದ ಹೊಣೆಗಾರಿಕೆ. ವಿಪರ್ಯಾಸವೆಂದರೆ, ಈ ವಿಭಾಗದಲ್ಲೀಗ ಕಾರ್ಯಾಚರಣೆ ನಡೆಸಲು ಲ್ಯಾಡರ್ ವಾಹನಗಳೇ (ಏಣಿ ಜೋಡಿಸಲ್ಪಟ್ಟ ವಾಹನ) ಇಲ್ಲವಂತೆ. ಇದನ್ನು ಒಂದು ಆಡಳಿತ ಎಂದು ಕರೆಯಲಾದಿತೇ?

ರೆಜಿನಾಲ್ಡ್ ಪ್ಲಾಟೆಲ್ ಅವರ ಸಾವಿಗೆ ಕಾರಣವಾದ ರೆಂಬೆ ತೆರವುಗೊಳಿಸದ ಸಂಬಂಧ ಪಾಲಿಕೆ ತೋಟಗಾರಿಕೆ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮಧುಕರ್ ಅವರನ್ನು 'ಮೈಸೂರು ಮಿತ್ರ' ಸಂಪರ್ಕಿಸಿದಾಗ, ಲ್ಯಾಡರ್ ವಾಹನಗಳೇ ಇಲ್ಲದಿರುವುದು ತಿಳಿಯಿತು. ಒಣ ರೆಂಬೆ ಕತ್ತರಿಸಲು ನಮ್ಮಲ್ಲೀಗ ಏಣಿ ಜೋಡಿಸಲ್ಪಟ್ಟ ವಾಹನಗಳು (ಲ್ಯಾಡರ್ ವಾಹನ) ಇಲ್ಲ ಎಂದು ಅವರು ತಿಳಿಸಿದರು.

ಈ ಹಿಂದೆ ಇದ್ದ ಅಂತಹ ಎರಡು ವಾಹನಗಳು 35 ವರ್ಷಗಳಿಗಿಂತ ಹಳೆಯವು ಹಾಗೂ ಕಾರ್ಯಾಚರಣೆಗೆ ಯೋಗ್ಯವಲ್ಲವೆಂದು ಆರ್‌ಟಿಓ ಅಧಿಕಾರಿಗಳು ಅವುಗಳನ್ನು ವಶಪಡಿಸಿಕೊಂಡಿದ್ದಾರೆ. ಮರದ ರಂಬೆಗಳನ್ನು ಕತ್ತರಿಸಲು ವಾಹನ ಹಾಗೂ ಸಲಕರಣೆಗಳ ಕೊರತೆಯಿಂದ ನಮ್ಮ ಕೈ ಕಟ್ಟಿಹಾಕಿದಂತಾಗಿದೆ. ಲ್ಯಾಡರ್ ವಾಹನಗಳ ಒದಗಿಸಲು ಎರಡು ಬಾರಿ ಟೆಂಡರ್ ಕರೆಯಲಾಗಿತ್ತು. ಆದರೆ ಯಾರೂ ಭಾಗವಹಿಸದ ಕಾರಣ ಅಪಾಯದ ಅಂಚಿನಲ್ಲಿರುವ ಮರ ಮತ್ತು ರೆಂಬೆ-ಕೊಂಬೆಗಳ ತೆರವು ಕಾರ್ಯಾಚರಣೆಗೆ ತೊಡಕು ಉಂಟಾಗಿದೆ ಎಂದು ಅಸಹಾಯಕತೆ ವ್ಯಕ್ತಪಡಿಸಿದರು. ಅಲ್ಲದೆ, ಸದ್ಯ ಇದೀಗ ಅನಾಹುತಕ್ಕೆ ಕಾರಣವಾದ ಮರದ ರೆಂಬೆ ಅಪಾಯದಂಚಿನಲ್ಲಿದ್ದ ಬಗ್ಗೆ ನಮಗೆ ಮಾಹಿತಿಯೇ ಇರಲಿಲ್ಲ ಎಂದೂ ಅವರು ತಿಳಿಸಿದರು.

ಇದೇ ತೋಟಗಾರಿಕೆ ವಿಭಾಗದ ಸಹಾಯಕ ನಿರ್ದೇಶಕ ಪುನೀತ್ ಪ್ರತಿಕ್ರಿಯಿಸಿ, ನಮ್ಮ ವಿಭಾಗದಿಂದ ರಸ್ತೆ ಬದಿಯ ಮರಗಳನ್ನು ಪರಿಶೀಲಿಸಿ ಒಣಗಿದ ಮರದ ರೆಂಬೆ ಮತ್ತು ಬುಡಭದ್ರವಿಲ್ಲದ ಮರಗಳ ತೆರವಿಗೆ ಕ್ರಮ ವಹಿಸಿ ಕಾರ್ಯಾಚರಣೆ ನಡೆಸುತ್ತೇವೆ. ಆದರೆ ಕುಕ್ಕರಹಳ್ಳಿ ಕೆರೆ ಬಳಿಯ ಬೇಂದ್ರೆ ವನದ ಎದುರಿನ ಅರಳೀಮರದ ರೆಂಬೆ ಒಣಗಿ, ಅಪಾಯಕಾರಿಯಾಗಿದ್ದ ಬಗ್ಗೆ ನಮ್ಮ ಗಮನಕ್ಕೆ ಬಂದಿರಲಿಲ್ಲ. ಅಲ್ಲದೆ, ಈ ಸಂಬಂಧ ಯಾವುದೇ ದೂರುಗಳು ಬಂದಿರಲಿಲ್ಲ ಎಂದು ತಿಳಿಸಿದರು.

# ಇಂದು ಮಂಡ್ಯ ಬಂದ್‌ಗೆ ಕರೆ

## ವರ್ತಕರಿಗೆ ಗುಲಾಬಿ ಹೂ ನೀಡಿ ಸಹಕಾರ ಕೋರಿದ ಹಿಂದೂಪರ ಸಂಘಟನೆಗಳು



ವರ್ತಕರಿಗೆ ಗುಲಾಬಿ ಹೂ ನೀಡಿ ಸಹಕಾರ ಕೋರುತ್ತಿರುವ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು.

ಮಂಡ್ಯ,ಫೆ.8– ವಿಶ್ವ ಹಿಂದೂ ಪರಿಷತ್, ಬಜರಂಗದಳ, ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ನಗರದ ವರ್ತಕರಿಗೆ ಮತ್ತು ವ್ಯಾಪಾರಿಗಳಿಗೆ ನಾಳೆ (ಫೆ.9) ಕರೆ ನೀಡಿರುವ ಮಂಡ್ಯ ಬಂದ್‌ಗೆ ಗುಲಾಬಿ ಹೂ ನೀಡಿ ಸ್ವಯಂ ಪ್ರೇರಿತ ಬೆಂಬಲ ನೀಡುವಂತೆ ಮನವಿ ಮಾಡಿದರು.

ತಾಲೂಕಿನ ಕೆರಗೋಡಿನಲ್ಲಿ ಹನುಮ ಧ್ವಜ ತೆರವು ಮಾಡಿರುವ ಬಗ್ಗೆ, ಕೆರಗೋಡು ಗ್ರಾಮಸ್ಥರು ಎಷ್ಟೇ ಮನವಿ ಮಾಡಿದರೂ ಕ್ಯಾರೇ ಎನ್ನದ ಜಿಲ್ಲಾಡಳಿತ ಹಾಗೂ ಕಾಂಗ್ರೆಸ್ ಸರ್ಕಾರ ಹಿಂದೂಗಳ ದಮನಕಾರಿ ನೀತಿ ಅನುಸರಿಸುತ್ತಿದೆ, ಪಂಚಾಯಿತಿ ಸದಸ್ಯರ ನಿರ್ಣಯ ಹನುಮ ಧ್ವಜದ ಪರವಾಗಿದ್ದರು ಬೇಕಂತಲೇ ಗೊಂದಲ ಮೂಡಿಸುವ ಕೆಲಸಕ್ಕೆ ಕಾಂಗ್ರೆಸ್ ಸರ್ಕಾರ ಕೈ ಹಾಕಿದೆ ಎಂದು ಆಪಾದಿಸಿ ಈ ಬಂದ್‌ಗೆ ಕರೆ ನೀಡಲಾಗಿದೆ.

ಹನುಮ ಧ್ವಜವನ್ನು ಹಾರಿಸುವವರೆಗೂ ನಮ್ಮ ಹೋರಾಟ ನಿರಂತವಾಗಿರುತ್ತದೆ, ಹಾಗಾಗಿ ಮಂಡ್ಯನಗರ ಬಂದ್‌ಗೆ ಸಾರ್ವಜನಿಕರು, ವರ್ತಕರು, ರಸ್ತೆ ಬದಿ ವ್ಯಾಪಾರಿಗಳು, ಹೋಟೆಲ್ ಮಾಲೀಕರು, ಬೇಕರಿ ಮಾಲೀಕರು, ಆಟೋ ಚಾಲಕರು ಸೇರಿದಂತೆ ಎಲ್ಲರೂ ಸಕಾರಾತ್ಮಕವಾಗಿ ಸ್ಪಂದಿಸಿ ಸ್ವಯಂ ಪ್ರೇರಿತ ಬಂದ್‌ಗೆ ಸಹಕರಿಸಿ, ಬೆಳಿಗ್ಗೆ 6 ಗಂಟೆಯಿಂದ ಸಂಜೆ 6ಗಂಟೆವರೆಗೆ ಬಂದ್‌ಗೆ ಸಹಕಾರ ನೀಡಿ, ಬಲವಂತ ಮಾಡುವುದಿಲ್ಲ, ಸಾವಿರಕ್ಕೂ ಹೆಚ್ಚು ಹಿಂದೂ ಕಾರ್ಯಕರ್ತರು ಮಂಡ್ಯ ನಗರದಲ್ಲಿ ಬೈಕ್ ಮೂಲಕ ತೆರಳಿ ಮನವಿ ಮಾಡಲಿದ್ದಾರೆ ಎಂದು ಈ ವೇಳೆ ಹಿಂದೂಪರ ಸಂಘಟನೆಗಳ ಮುಖಂಡರು ತಿಳಿಸಿದರು. ಇದೇ ಸಂದರ್ಭದಲ್ಲಿ ಹೂ ನೀಡುವ ಅಭಿಯಾನದಲ್ಲಿ ಬೇಕರಿ ಮಾಲೀಕ ಸಂಘದ ಅಧ್ಯಕ್ಷ ಎಚ್.ಆರ್. ಅರವಿಂದ್, ಹಿಂದೂ ಪರ ಸಂಘಟಕರಾದ ಸಿ.ಟಿ.ಮಂಜುನಾಥ್, ಹೊಸಹಳ್ಳಿ ಶಿವು, ಮಹೇಶ್ ಕೆರಗೋಡು, ಹುಲಿವಾನ ಮಹೇಶ್, ಪ್ರಸನ್ನ ಮತ್ತಿತರರಿದ್ದರು.

### ಬಂದ್‌ಗೆ ವರ್ತಕರ ಬೆಂಬಲವಿಲ್ಲ

**ಮಂಡ್ಯ:** ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಹಿಂದೂ ಪರ ಸಂಘಟನೆಗಳು ಕರೆ ನೀಡಿರುವ ಶುಕ್ರವಾರ ಮಂಡ್ಯ ಬಂದ್‌ಗೆ ಯಾವುದೇ ವರ್ತಕರು ಬೆಂಬಲ ಸೂಚಿಸಿಲ್ಲ.

ಹನುಮ ಧ್ವಜ ವಿವಾದದ ಹಿನ್ನೆಲೆಯಲ್ಲಿ ಹಿಂದೂಪರ ಸಂಘಟನೆಗಳ ವಿರುದ್ಧ ಫೆ.7 ರಂದು ಪ್ರಗತಿಪರ ಸಂಘಟನೆಗಳು ಬಂದ್‌ಗೆ ಕರೆಕೊಟ್ಟಿದ್ದರೆ, ಫೆ.9ರಂದು ಹಿಂದೂಪರ ಸಂಘಟನೆಗಳು ಹನುಮ ಧ್ವಜ ತೆಗೆದ ಹಿನ್ನೆಲೆಯಲ್ಲಿ ಬಂದ್‌ಗೆ ಕರೆ ಕೊಟ್ಟಿದ್ದವು.

ಆದರೆ ಡಿಸಿ ನೇತೃತ್ವದ ಶಾಂತಿ ಸಭೆ ಬಳಿಕ ಪ್ರಗತಿಪರ ಸಂಘಟನೆಗಳು ಬಂದ್ ವಾಪಸ್ ಪಡೆದಿದ್ದರೆ, ಇತ್ತ ಹಿಂದೂಪರ ಸಂಘಟನೆಗಳು ಮಾತ್ರ ಬಂದ್ ನಡೆಸುವುದಾಗಿ ಘೋಷಿಸಿದ್ದವು. ಆದರೆ ಈಗಾಗಲೇ ಕೊರೊನಾ ಹಾಗೂ ಇನ್ನಿತರೆ ವಿಚಾರಗಳಿಂದ ಬಂದ್‌ಗಳಾಗಿರುವುದರಿಂದ ವರ್ತಕರು ಮೇಲ್ನೋಟಕ್ಕೆ ಬಂದ್‌ಗೆ ಬೆಂಬಲ ಸೂಚಿಸುವುದಾಗಿ ಹೇಳಿದ್ದರಾದರೂ ಅಧಿಕೃತವಾಗಿ ಬಂದ್ ಬೆಂಬಲ ಸೂಚಿಸಿಲ್ಲ.

ಇತ್ತ ಜೆಡಿಎಸ್ ಸಹ ತಟಸ್ಥ ನಿಲುವು ಕೈಗೊಂಡಿದ್ದು, ಹೆಚ್.ಡಿ.ಕುಮಾರಸ್ವಾಮಿ ಅವರು ಕೆರಗೋಡು ಪಾದಯಾತ್ರೆ ವೇಳೆ ಕೇಸರಿ ಬಾವುಟ ಹಾಕಿದ್ದಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಗರಂ ಆಗಿದ್ದರಿಂದ ಜೆಡಿಎಸ್ ಕಾರ್ಯಕರ್ತರು ಈ ವಿಚಾರದಲ್ಲಿ ಅಂತರ ಕಾಯ್ದುಕೊಂಡಿದ್ದು, ನಾಳಿನ ಬಂದ್‌ಗೆ ಅವರ ಸಹಕಾರ ಸಿಗುವುದು ಕಷ್ಟ ಎನ್ನಲಾಗಿದೆ. ಈ ನಿಟ್ಟಿನಲ್ಲಿ ನಾಳಿನ ಬಂದ್‌ಗೆ ಹಿಂದೂಪರ ಸಂಘಟನೆಗಳಿಗೆ ಬಿಜೆಪಿ ಬೆಂಬಲ ಸೂಚಿಸಿದ್ದು, ಬಂದ್ ಯಶಸ್ವಿಯಾಗುತ್ತದೆಯೇ ಎಂಬುದನ್ನು ಕಾದುನೋಡಬೇಕಿದೆ.

# ಗ್ಯಾರಂಟಿಗಳನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ

## ಫಲಾನುಭವಿಗಳ ಸಮಾವೇಶದಲ್ಲಿ ಸಚಿವ ಚಲುವರಾಯಸ್ವಾಮಿ ಸ್ಪಷ್ಟನೆ



ಕಾರ್ಯಕ್ರಮವನ್ನು ಉದ್ಘಾಟಿಸಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ

ಪಾಂಡವಪುರ, ಫೆ.8– ರಾಜ್ಯ ಸರಕಾರ ಅಸ್ತಿತ್ವಕ್ಕೆ ಬಂದ ತಕ್ಷಣವೇ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ನುಡಿದಂತೆ ನಡೆದಿದೆ. ಅವುಗಳನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ನಡೆದ ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಹಾಗೂ ಸರಕಾರದ ವಿವಿಧ ಯೋಜನೆಗಳ ಸೌಲಭ್ಯ ವಿತರಣೆ ಮತ್ತು ಮಾಹಿತಿ ನೀಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರಾಜ್ಯದಲ್ಲಿ ಈ ವರ್ಷ 54000 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ವೆಚ್ಚ ಮಾಡಲಾಗುತ್ತಿದೆ. ಮುಂದಿನ ವರ್ಷದಿಂದ 69000 ಕೋಟಿ ರೂ. ಅನುದಾನವನ್ನು ಸರಕಾರ ಮೀಸಲಿರಿಸಲಿದೆ ವಿವಿಧ ಯೋಜನೆಗಳ ಮೂಲಕ 1 ಲಕ್ಷ ಕೋಟಿ ರೂ.ನೇರವಾಗಿ ಜನರಿಗೆ ತಲುಪುತ್ತಿದೆ. ಎಂದಿಗೂ ನಮ್ಮ ಸರಕಾರ ಬಡವರು, ಜನ ಸಾಮಾನ್ಯರ ಪರವಾಗಿ ಕೆಲಸ ಮಾಡಲಿದೆ ಎಂದು ಭರವಸೆ ನೀಡಿದರು. ನಾಡಿನ ಎಲ್ಲಾ ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ ನೀಡಲಾಗಿದೆ. ಉಚಿತ ಬಸ್ ಪ್ರಯಾಣಕ್ಕೆ ಶಕ್ತಿ ಯೋಜನೆ ಹಾಗೂ ಮಾಸಿಕ 2000 ರೂ ನೀಡುವ ಗೃಹಲಕ್ಷ್ಮಿ ಯೋಜನೆ ಜಾರಿಗೊಳಿಸಿದೆ. ಅನ್ನ ಭಾಗ್ಯ, ಗೃಹ ಜ್ಯೋತಿ, ಯುವ ನಿಧಿ ಯೋಜನೆಗಳೂ ಜನರ ಮನೆಗಳಿಗೆ ತಲುಪುತ್ತಿವೆ ಎಂದರು.

ಮಂಡ್ಯ, ಶ್ರೀರಂಗಪಟ್ಟಣ, ಪಾಂಡವಪುರ ತಾಲೂಕುಗಳಲ್ಲಿ ಬರದ ಕಾರಣ ಈ ಬಾರಿ 15,000 ಹೆಕ್ಟೇರ್‌ನಲ್ಲಿ ಭತ್ತ ಬೆಳೆಯಲು ಸಾಧ್ಯವಿಲ್ಲ. ರೈತರು ಫೆಬ್ರವರಿ ಅಂತ್ಯದೊಳಗೆ ಎಕರೆಗೆ 566 ರೂ. ಹಣಕೊಟ್ಟು ವಿಮೆ ಮಾಡಿಸಿದರೆ, 9498 ರೂ. ವಿಮೆ ಹಣ ದೊರೆಯಲಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

**ಬರ ಪರಿಹಾರ, ಜಿ.ಎಸ್.ಟಿ ಪಾಲಿನಲ್ಲಿ ತಾರತಮ್ಯ:** ಗ್ಯಾರಂಟಿ ಯೋಜನೆಗಳ ಜೊತೆ ನಾವು ಬರ ಪರಿಹಾರದ ಕಂತು 2000 ರೂ.ಗಳನ್ನು ರೈತರ ಖಾತೆಗೆ ವರ್ಗಾವಣೆ ಮಾಡಿದ್ದೇವೆ. ಆದರೆ, ಕೇಂದ್ರ ಸರಕಾರ ಸಂಕಷ್ಟಕ್ಕೆ ಸಿಲುಕಿದ ರಾಜ್ಯದ ರೈತರಿಗೆ ಸ್ಪಂದಿಸಿಲ್ಲ. ನಮ್ಮ ಮನವಿಗಳನ್ನು ಪರಿಗಣಿಸಲೇ ಇಲ್ಲ. ಜಿ.ಎಸ್.ಟಿ ಪಾಲಿನಲ್ಲೂ ತಾರತಮ್ಯ ಮಾಡಿದ್ದು ಜನ ಎಲ್ಲವನ್ನೂ ಗಮನಿಸುತ್ತಿದ್ದಾರೆ ಎಂದು ಕೇಂದ್ರದ ವಿರುದ್ಧ ಕಿಡಿಕಾರಿದರು.

ಶಾಸಕ ದರ್ಶನ ಪುಟ್ಟಣ್ಣಯ್ಯ ಮಾತನಾಡಿ, ಗ್ಯಾರಂಟಿ ಯೋಜನೆಗಳು ಸಾರ್ವಜನಿಕರನ್ನು ಆರ್ಥಿಕವಾಗಿ ಸದೃಢ ಮಾಡಲು ರೂಪಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಸರಕಾರದ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಶಾಸಕ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ರಮೇಶಬಾಬು ಬಂಡಿಸಿದ್ದೇಗೌಡ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್ ನಾಗರಾಜು, ಉಪವಿಭಾಗಾಧಿಕಾರಿ ನಂದೀಶ್, ತಹಶೀಲ್ದಾರ್ ಶ್ರೇಯಸ್, ಉಪತಹಶೀಲ್ದಾರ್ ಮೋಹನ್, ವರುಣ್, ಕೆ.ಪಿ.ಸಿ.ಸಿ.ಸದಸ್ಯ ಎಚ್.ತ್ಯಾಗರಾಜು, ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು, ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು ಸಿಬ್ಬಂದಿಗಳು ಹಾಜರಿದ್ದರು.

## ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಸ್ಟಾರ್ ಚಂದ್ರು ಅಖಾಡಕ್ಕೆ

ಮಂಡ್ಯ,ಫೆ.8– ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣಾ ಕಣ ರಂಗೇರಿದ್ದು, ಕಾಂಗ್ರೆಸ್‌ನ ಸಂಭಾವ್ಯ ಅಭ್ಯರ್ಥಿ ಎಂದೇ ಬಿಂಬಿತವಾಗಿರುವ ಸ್ಟಾರ್ ಚಂದ್ರು (ವೆಂಕಟರಮಣೇಗೌಡ) ಮಂಡ್ಯ ಕ್ಷೇತ್ರದಲ್ಲಿ ಓಡಾಟ ಆರಂಭಿಸಿದ್ದಾರೆ.



ಗುರುವಾರ ಸಚಿವ ಎನ್.ಚಲುವರಾಯಸ್ವಾಮಿ ಸೇರಿದಂತೆ ಕಾಂಗ್ರೆಸ್ ಶಾಸಕರು ಹಾಗೂ ಮುಖಂಡರುಗಳನ್ನು ಭೇಟಿ ಮಾಡಿದ ಸ್ಟಾರ್ ಚಂದ್ರು ಮಾತುಕತೆ ನಡೆಸಿದ್ದು, ಜೆಡಿಎಸ್– ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಯಾರೇ ಕಣಕ್ಕಿಳಿದರೂ ತಮಗೆ ಪಕ್ಷ ಟಿಕೆಟ್ ಕೊಟ್ಟರೆ ಸ್ಪರ್ಧಿಸುವುದು ಖಚಿತ ಎಂದು ಸ್ಪಷ್ಟಪಡಿಸಿದ್ದಾರೆ.

ನಾಗಮಂಗಲ ತಾಲೂಕು ಮೂಲದವರಾದ ಸ್ಟಾರ್ ಚಂದ್ರು ರಿಯಲ್ ಎಸ್ಟೇಟ್ ಉದ್ಯಮಿ ಹಾಗೂ ಇನ್ನಿತರೆ ಉದ್ಯಮದಲ್ಲಿ ತೊಡಗಿಕೊಂಡಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಕಣಕ್ಕಿಳಿಸಲು ಉತ್ಸಾಹ ತೋರಿ ಇವರನ್ನು ಕರೆತರುತ್ತಿದ್ದಾರೆ ಎನ್ನಲಾಗಿದ್ದು, ಬಹುತೇಕ ಇವರಿಗೆ ಕಾಂಗ್ರೆಸ್ ಟಿಕೆಟ್ ಎಂಬ ಗುಸು ಗುಸು ಕಾಂಗ್ರೆಸ್ ವಲಯದಲ್ಲಿ ಕೇಳಿಬಂದಿದೆ. ಸ್ಟಾರ್ ಚಂದ್ರು ಸಹೋದರ ಪುಟ್ಟಸ್ವಾಮಿಗೌಡ ಗೌರಿಬಿದನೂರು ಕ್ಷೇತ್ರದ ಪಕ್ಷೇತರ ಶಾಸಕರಾಗಿದ್ದಾರೆ. ಜೊತೆಗೆ ಚಿಕ್ಕಬಳ್ಳಾಪುರ ಸಂಸದ ಬಿ.ಎನ್.ಬಚ್ಚೇಗೌಡ, ಪುಟ್ಟಸ್ವಾಮಿಗೌಡ ಹಾಗೂ ಸ್ಟಾರ್ ಚಂದ್ರು ಅವರ ಬೀಗರಾಗಿದ್ದಾರೆ.

# ಬಿಜೆಪಿ–ಜೆಡಿಎಸ್‌ನ ಹಲವು ನಾಯಕರು ಶೀಘ್ರ ಕಾಂಗ್ರೆಸ್ ಸೇರ್ಪಡೆ

## ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿಕೆ



ಚಲುವರಾಯಸ್ವಾಮಿ

ಮಂಡ್ಯ, ಫೆ.8– ಜೆಡಿಎಸ್–ಬಿಜೆಪಿ ಮೈತ್ರಿಯಾದ ಮೇಲೆ ಅಲ್ಲಿರುವ ತಳಮಟ್ಟದ ಮುಖಂಡರು ಭಾರಿ ಅಸಮಾಧಾನಗೊಂಡಿದ್ದು, ಶೀಘ್ರದಲ್ಲೇ ಎರಡು ಪಕ್ಷಗಳ ಹಲವು ಮುಖಂಡರು ಕಾಂಗ್ರೆಸ್ ಸೇರಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭವಿಷ್ಯ ನುಡಿದಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಮಂಡ್ಯ ಜಿಲ್ಲೆಯ ಹಲವು ನಾಯಕರು ಕಾಂಗ್ರೆಸ್ ಸೇರಲಿದ್ದಾರೆ ಎಂದು ಮೊದಲೇ ಭವಿಷ್ಯ ನುಡಿದಿದ್ದೆ. ಇನ್ನು ಹತ್ತು ದಿನಗಳಲ್ಲಿ ಈ ಬಗ್ಗೆ ಸ್ಪಷ್ಟ ಚಿತ್ರಣ ಸಿಗಲಿದೆ. ನಾವು ಯಾರಿಗೂ ಕಂಡಿಷನ್ ಹಾಕಿಲ್ಲ. ಬರುವವರನ್ನು ಸ್ವಾಗತಿಸುತ್ತೇವೆ ಎಂದರು.

ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಸಿಎಂ ಭೇಟಿ ಮಾಡಿದ್ದು, ದೊಡ್ಡ ವಿಚಾರವಲ್ಲ. ಅವರು ನಮ್ಮ ಪಕ್ಷಕ್ಕೆ ಬರುತ್ತಾರೆ ಅಂತಲೂ ನಾನು ಹೇಳಲ್ಲ. ನಾರಾಯಣಗೌಡರು ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದರು. ಈಗ ಬಿಜೆಪಿ–ಜೆಡಿಎಸ್ ಒಂದಾದ ಮೇಲೆ ಅವರು ಪಕ್ಷದಲ್ಲಿ ಹೇಗಿರುತ್ತಾರೆ. ಬಿಜೆಪಿ ಮುಖಂಡರಿಗೆ ಮಂಡ್ಯದಲ್ಲಿ ಪ್ರಾಮುಖ್ಯತೆ ಸಿಗುತ್ತಿಲ್ಲ ಇಲ್ಲಿ ಬಿಜೆಪಿಗಿಂತ ಜೆಡಿಎಸ್‌ಗೆ ಪ್ರಾಮುಖ್ಯತೆ. ಅದಕ್ಕೆ ಬಿಜೆಪಿಯವರಿಗೆ ಅಸಮಾಧಾನ ಆಗುತ್ತಿದೆ. ಇದರಿಂದಲೇ ನಾರಾಯಣಗೌಡರಿಗೆ ಕಾಂಗ್ರೆಸ್‌ಗೆ ಬರಲು ಆಸಕ್ತಿ ಇದೆ ಎಂದು ಹೇಳಿದರು.

ನಾಳೆ ಭಜರಂಗದಳದಿಂದ ಮಂಡ್ಯ ನಗರ ಬಂದ್‌ಗೆ ಕರೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಬಂದ್‌ಗೆ ಕರೆ ಕೊಟ್ಟವರು ಕಾನೂನು ಹಾಗೂ ಸಂವಿಧಾನದ ವಿರುದ್ಧ ನಡೆದುಕೊಳ್ಳುತ್ತಿದ್ದಾರೆ. ಮಂಡ್ಯ ಜಿಲ್ಲೆಯ ಜನರು ನೆಮ್ಮದಿಯಿಂದ ಇರಲು ಬಿಡಬೇಕು. ಬಿಜೆಪಿಯವರಿಗೆ ಜೆಡಿಎಸ್ ಜೊತೆ ಸೇರಿ ಶಕ್ತಿ ಬಂದಿರಬಹುದು. ಇದರ ಹಿಂದೆ ಬಿಜೆಪಿ, ಜೆಡಿಎಸ್ ನೇತೃತ್ವ ವಹಿಸಿದ್ದೋ ನನಗೆ ಗೊತ್ತಿಲ್ಲ. ಕೆರಗೋಡಿನಲ್ಲಿ ಹಾರಿಸಿರುವ ರಾಷ್ಟ್ರಧ್ವಜ ಇಳಿಸಬೇಕಾ, ಬೇಡ್ವಾ ಎಂದು ಸ್ಪಷ್ಟಪಡಿಸಲಿ. ನಾಳೆ ಲಿಖಿತ ರೂಪದಲ್ಲಿ ತಿಳಿಸಿದ ಬಳಿಕ ನಾನು ಮಾತನಾಡ್ತೇನೆ ಎಂದರು. ಈಗಾಗಲೇ ಜಿಲ್ಲಾಧಿಕಾರಿ ಸಭೆ ಮಾಡಿ ಮಾತಾಡಿದ್ದಾರೆ. ಅವರು ನಿಖರವಾಗಿ ತಮ್ಮ ಪ್ರಸ್ತಾವನೆ ಇಟ್ಟಿಲ್ಲ. ಪಂಚಾಯಿತಿ ಜಾಗದಲ್ಲಿ ಎಲ್ಲಿಯೂ ರಾಷ್ಟ್ರ ಹಾಗೂ ಕನ್ನಡ ಧ್ವಜ ಬಿಟ್ಟು ಬೇರೆ ಧ್ವಜ ಹಾರಿಸಲು ಅವಕಾಶ ಇಲ್ಲ. ಅದನ್ನು ಜಿಲ್ಲಾಡಳಿತ ಮಾಡಿದೆ ಅಷ್ಟೇ ಎಂದರು.

## ಫೆ.15, ಸಂತ ಸೇವಾಲಾಲ್ ಜಯಂತಿ

ಮಂಡ್ಯ, ಫೆ.8– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರ ಸಹಯೋಗದೊಂದಿಗೆ 2023–24ನೇ ಸಾಲಿನ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮವನ್ನು ಗಾಂಧಿ ಭವನದಲ್ಲಿ ಫೆ.15 ರಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

### ಎಂ.ಸುರೇಶ್ ನಿಧನ



**ಪಾಂಡವಪುರ:** ಪಟ್ಟಣದ ಶಾಂತಿನಗರದ ನಿವಾಸಿ ಪುರಸಭೆ ಸದಸ್ಯ ಎಂ.ಗಿರೀಶ್ ಅವರ ಸಹೋದರ ಎಂ.ಸುರೇಶ್(52) ಅವರು ಹೃದಯಾಘಾತದಿಂದ ನಿಧನ ಹೊಂದಿದರು.

ಮೃತರು ಸಹೋದರರು ಹಾಗೂ ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ(ಫೆ.9) ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

### ಜಯಮ್ಮ



**ಕೆ.ಆರ್.ಪೇಟೆ:** ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷರು ಹಾಗೂ ಯುವ ವಕೀಲರಾದ ವಿ.ಎಸ್.ಧನಂಜಯ್ ಕುಮಾರ್ ಅವರ ತಾಯಿ ಜಯಮ್ಮ(75) ಅವರು ಗುರುವಾರ ಬೆಳಗ್ಗೆ ನಿಧನ ಹೊಂದಿದರು.

ವಡ್ಡರಹಳ್ಳಿ ಗ್ರಾಮದ ಲೇಟ್ ಶಂಭಪ್ಪ ಅವರ ಧರ್ಮಪತ್ನಿ ಜಯಮ್ಮ ಅವರು ವಿ.ಎಸ್.ಧನಂಜಯ್ ಕುಮಾರ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಜಯಮ್ಮ ಅವರ ನಿಧನಕ್ಕೆ ತಾಲೂಕಿನ ವಿವಿಧಗಣ್ಯರು ಸಂತಾಪ ಸೂಚಿಸಿದ್ದಾರೆ ಮೃತರ ಅಂತ್ಯಕ್ರಿಯೆಯು ಗುರುವಾರ ಸಂಜೆ ವಡ್ಡರಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು.

## ಬೆನಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ

# ಅಧ್ಯಕ್ಷ ಬಸವಣ್ಣ, ಉಪಾಧ್ಯಕ್ಷರಾಗಿ ಪ್ರಕಾಶ್ ಅವಿರೋಧ ಆಯ್ಕೆ



ಬೆನಕನಹಳ್ಳಿ ಡೈರಿ ಅಧ್ಯಕ್ಷರಾಗಿ ಬಿ.ಎಂ.ಬಸವಣ್ಣ, ಉಪಾಧ್ಯಕ್ಷರಾಗಿ ಬಿ.ಎನ್.ಪ್ರಕಾಶ್ ಆಯ್ಕೆಯಾದರು.

ತಿ.ನರಸೀಪುರ, ಫೆ.8– ತಾಲೂಕಿನ ಬೆನಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿ.ಎಂ.ಬಸವಣ್ಣ, ಉಪಾಧ್ಯಕ್ಷರಾಗಿ ಬಿ.ಎನ್.ಪ್ರಕಾಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿ.ಎಂ.ಬಸವಣ್ಣ, ಉಪಾಧ್ಯಕ್ಷ ಸ್ಥಾನಕ್ಕೆ ಬಿ.ಎನ್.ಪ್ರಕಾಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೊಧ ಆಯ್ಕೆಯನ್ನು ಚುನಾವಣಾಧಿಕಾರಿ ರಾಜಣ್ಣ ಘೋಷಿಸಿದರು.

ಈ ವೇಳೆ ನಿರ್ದೇಶಕರಾದ ನಾಗೇಂದ್ರ, ಬಿ.ಎಂ.ಮಹೇಶ್, ಬಿ.ಎಂ. ಶಿವಕುಮಾರಸ್ವಾಮಿ, ಮಹದೇವಸ್ವಾಮಿ, ರಾಜಬುದ್ದಿ, ಸಿ.ಮರಿಸ್ವಾಮಿ, ಬಿ.ಎಂ.ಬಸವಣ್ಣ, ಸಿ.ಎಂ. ಇಂದ್ರಮ್ಮ ಹಾಗೂ ಶಿವಮ್ಮ ಹಾಜರಿದ್ದರೆ, ಎಂ.ಗಿರೀಶ್ ಗೈರಾಗಿದ್ದರು.

ನೂತನ ಅಧ್ಯಕ್ಷ ಬಿ.ಎಂ.ಬಸವಣ್ಣ, ಹಾಲು ಉತ್ಪಾದಕರಿಗೆ ಸಿಗಬೇಕಾದ ಸವಲತ್ತು ಹಾಗೂ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ತಲುಪಿಸಲು ಶ್ರಮಿಸುತ್ತೇನೆ. ಬೆನಕನಹಳ್ಳಿ ಡೈರಿಯನ್ನು ತಾಲೂಕಿನಲ್ಲಿಯೇ ಮಾದರಿ ಡೈರಿ ಮಾಡಬೇಕೆಂಬ ಅಭಿಲಾಷೆ ಹೊಂದಿ ರುವ ನನ್ನ ಆಶಯಕ್ಕೆ ಸಂಘದ ನಿರ್ದೇಶಕರು ಸಹಕರಿಸಬೇಕು ಎಂದು ಮನವಿ ಮಾಡಿದರು. ತಮ್ಮ ಅವಿರೋಧ ಆಯ್ಕೆಗೆ ಸಹಕರಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಶರಣ್ ಫ್ಯಾಷನ್ ಬಿ.ಎಂ.ಶಿವಮಲ್ಲಪ್ಪ ಮಾತನಾಡಿ, ನೂತನ ಅಧ್ಯಕ್ಷ, ಉಪಾಧ್ಯಕ್ಷರು ಡೈರಿ ಅಭಿವೃದ್ಧಿಗೆ ಶ್ರಮಿಸಬೇಕು. ಮೈಮೂಲ್‌ನಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ರೈತರಿಗೆ ಕೊಡಿಸಬೇಕು. ಸಂಘದಲ್ಲಿ ಡಿವಿಡೆಂಡ್ ಕೊಡುವಂತಹ ಉಪಯುಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಂಘದ ಏಳಿಗೆಗೆ ಶ್ರಮಿಸಬೇಕೆಂದು ಸಲಹೆ ನೀಡಿದರು.

ಈ ವೇಳೆ ಗ್ರಾಮದ ಮಠಾಧ್ಯಕ್ಷ ಮಹದೇವಸ್ವಾಮಿ, ಯಜಮಾನರಾದ ಬಿ.ಜೆ. ರಾಜಶೇಖರಮೂರ್ತಿ, ಬಿ.ಜೆ. ರಮೇಶನ್, ಬಿ.ಪಿ.ಮಹದೇವಸ್ವಾಮಿ, ಬಿ.ಜಿ. ಗುರುಸ್ವಾಮಿ, ಬಿ.ಎಸ್. ಪ್ರಭುಸ್ವಾಮಿ, ರವೀಂದ್ರ ಬಾಬು, ಹೂವಿನ ಸಿದ್ದಪ್ಪ, ವಿಜಯ ಕುಮಾರ್, ಕುಮಾರ್, ಬಿ.ಪಿ. ಶಿವಸ್ವಾಮಿ, ಭಜನೆ ಮಧು, ಮಹಾಲಿಂಗಪ್ಪ, ಗುರುಮೂರ್ತಿ, ಬಿ.ಜಿ.ಮಲ್ಲಿಕಾರ್ಜುನಸ್ವಾಮಿ, ಗ್ರಾಪಂ ಅಧ್ಯಕ್ಷ ಮಂಟೇಲಿಂಗು, ಸದಸ್ಯ ಸಂಭ್ರಮ್, ಬಿ.ಸಿ.ನಾಗೇಶ್, ಗಂಗಾಧರಸ್ವಾಮಿ, ಗೌರಮ್ಮ, ಕೊಂಗಳ್ಳಿ ಮಮತ, ಬಿ.ಎಸ್.ಪ್ರಕಾಶ್, ಸಂಘದ ಕಾರ್ಯದರ್ಶಿ ಮಾದಪ್ಪ, ಹಾಲು ಪರೀಕ್ಷಕ ಬಿ.ಪಿ. ಮಹೇಶ್, ಸಹಾಯಕ ಬಿ.ಎನ್.ಮಹೇಶ್, ಹೂವಮ್ಮ ಸೇರಿದಂತೆ ಗ್ರಾಮಸ್ಥರು, ಯಜಮಾನರು ಮತ್ತಿತರರಿದ್ದರು.

# ಸರಗೂರಲ್ಲಿ ಕಾಡಾನೆ ದಾಳಿಗೆ ಅರಣ್ಯ ಸಿಬ್ಬಂದಿ ಬಲಿ

## ರೈಲ್ವೆ ಕಂಬಿ ಬ್ಯಾರಿಕೇಡ್ ಅಳವಡಿಸದ ಬಗ್ಗೆ ಗ್ರಾಮಸ್ಥರ ಆಕ್ರೋಶ

ಸರಗೂರು, ಫೆ.8– ಕಾಡಾನೆ ದಾಳಿಗೆ ಅರಣ್ಯ ಸಿಬ್ಬಂದಿ ಬಲಿಯಾದ ಘಟನೆ ತಾಲೂಕಿನ ಕೆಬ್ಬೆಪುರ ಹಾಡಿ ಬಳಿ ನಡೆದಿದೆ.



ಬಂಡೀಪುರ ಅರಣ್ಯ ವ್ಯಾಪ್ತಿಯ ಮೊಳೆಯೂರು ವಲಯದ ಕೆಬ್ಬೆಪುರ ಹಾಡಿ ನಿವಾಸಿ, ಅರಣ್ಯ ಇಲಾಖೆಯ ವಾಚರ್ ಬಿ.ರಾಜು(38) ಕಾಡಾನೆ ದಾಂಧಲೆಗೆ ಬಲಿಯಾದವರು. ಈತ ನಾಗರಹೊಳೆ ಅರಣ್ಯದ ಉದ್ಬೂರು ಗೇಟ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಎಂದಿನಂತೆ ಗುರುವಾರ ಬೆಳಗ್ಗೆ ಬಸ್ ಹತ್ತಲು ಕೆಬ್ಬೆಪುರ ಹಾಡಿಯಿಂದ ಮೊಳೆಯೂರಿಗೆ ನಡೆದುಕೊಂಡು ಬರುವ ವೇಳೆ ಕಾಡಾನೆ ಏಕಾಏಕಿ ದಾಳಿ ನಡೆಸಿ, ತುಳಿದು ಸಾಯಿಸಿದೆ. ರಾಜು ಶವ ರಸ್ತೆ ಪಕ್ಕದ ಹಳ್ಳದಲ್ಲಿ ಬಿದ್ದಿತ್ತು. ಮಧ್ಯಾಹ್ನವರೆಗೂ ಯಾರಿಗೂ ದುರಂತದ ಬಗ್ಗೆ ಗೊತ್ತಿರಲಿಲ್ಲ. ಆದರೆ ಮಧ್ಯಾಹ್ನ ರಾಜು ಮಗಳು ಬಟ್ಟೆ ಒಗೆಯಲು ಹೋಗುವ ವೇಳೆ ತಂದೆ ಶವ ಕಂಡು ಗ್ರಾಮಸ್ಥರಿಗೆ ವಿಚಾರ ಮುಟ್ಟಿಸಿದ್ದು, ನಂತರ ಅರಣ್ಯ ಹಾಗೂ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದ್ದಾರೆ.

**ಅರಣ್ಯ ಇಲಾಖೆ ವಿರುದ್ಧ ಆಕ್ರೋಶ:** ಈ ವೇಳೆ ಸ್ಥಳದಲ್ಲಿ ಜಮಾಯಿಸಿದ ಗ್ರಾಮಸ್ಥರು, ಕಾಡಾನೆ ದಾಳಿಗೆ ರಾಜು ಬಲಿಯಾಗಿರುವುದಕ್ಕೆ ಅರಣ್ಯ ಇಲಾಖೆ ಅಧಿಕಾರಿ ವರ್ಗವೇ ಕಾರಣ ಎಂದು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಮುಖಂಡರು ಈ ಭಾಗದಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಜನರನ್ನು ಬಲಿ ಪಡೆಯುತ್ತಿವೆ. ಕಾಡಾನೆ ದಾಳಿ ನಿಯಂತ್ರಿಸಲು ರೈಲ್ವೆ ಕಂಬಿ ಬ್ಯಾರಿಕೇಡ್ ಅಳವಡಿಸುವಂತೆ ಸಾಕಷ್ಟು ಬಾರಿ ಮನವಿ ಮಾಡಿದರೂ, ಅರಣ್ಯ ಇಲಾಖೆ ನಮ್ಮ ಮನವಿಯನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಪರಿಣಾಮ ಕಾಡು ಪ್ರಾಣಿಗಳ ದಾಳಿಗೆ ಜೀವಗಳು ಬಲಿಯಾಗುತ್ತಿವೆ. ಕೂಡಲೇ ಅರಣ್ಯ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಕಾಡು ಪ್ರಾಣಿಗಳ ಹಾವಳಿ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಬೇಕು. ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವುದರ ಜೊತೆಗೆ ಮೃತರ ಕುಟುಂಬ ಸದಸ್ಯರಿಗೆ ಉದ್ಯೋಗ ನೀಡಬೇಕು. ಕಾಡಾನೆಗಳ ಹಾವಳಿಗೆ ಶಾಶ್ವತ ಪರಿಹಾರ ನೀಡಬೇಕು ಎಂದು ಪಟ್ಟು ಹಿಡಿದರು.

ಇದೇ ವೇಳೆ ಘಟನೆ ನಡೆದು ಸಾಕಷ್ಟು ಸಮಯ ಕಳೆದರೂ ಸ್ಥಳಕ್ಕೆ ಆಗಮಿಸದ ಅರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿ ಪ್ರತಿಭಟನಾಕಾರರ ಮನವೊಲಿಸಿದ ಅರಣ್ಯಾಧಿಕಾರಿಗಳು ಮೃತರ ಕುಟುಂಬಕ್ಕೆ 15 ಲಕ್ಷ ರೂ. ಚೆಕ್ ವಿತರಿಸಿದರು. ರಾಜು ಪತ್ನಿಗೆ ತಿಂಗಳಿಗೆ 5 ಸಾವಿರ ರೂ. ಮಾಸಾಶನ, ಮೃತರ ಮಗನಿಗೆ ಇಲಾಖೆಯಲ್ಲಿ ಉದ್ಯೋಗ ನೀಡುವ ಭರವಸೆ ನೀಡಲಾಯಿತು.

ಸ್ಥಳದಲ್ಲಿ ಹುಲಿ ಯೋಜನೆ ಎಸಿಎಫ್ ನಿಂಗರಾಜು, ಆನೆ ಯೋಜನೆಯ ಎಸಿಎಫ್ ಮನೋಜ್, ಸಿಎಫ್ ರಮೇಶ್ ಕುಮಾರ್, ಎಸಿಎಫ್ ಪರಮೇಶ್, ತಹಸೀಲ್ದಾರ್ ರುಕೀಯಾ ಬೇಗಂ, ಆರ್‌ಎಫ್‌ಓಗಳಾದ ಅಮೃತ, ವಿವೇಕ್, ಪುನೀತ್, ಎಸ್‌ಐ ಹನುಮಂತ ಉಪ್ಪಾರ್ ಇನ್ನಿತರರಿದ್ದರು.

### ಶ್ರುತಿ ನಿಧನ

ಹುಣಸೂರು, ಫೆ.8– ತಾಲೂಕಿನ ಮರದೂರು ಗ್ರಾಮದ ಲಾಸಲೇಟ್ ವಿದ್ಯಾ ಸಂಸ್ಥೆ ಶಿಕ್ಷಕಿ, ಮರದೂರು ಹೊಸೂರು ಗ್ರಾಮದ ಯೋಗೇಶ್ ಅವರ ಪತ್ನಿ ಶ್ರುತಿ (30) ಮಂಗಳವಾರ ನಿಧನರಾದರು.



ಮೃತರು ಪತಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮರದೂರು ಹೊಸೂರು ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಶಿವಪ್ಪ ನಾಯಕ

ಹುಣಸೂರು, ಫೆ.8– ಕುಶಾಲನಗರ ಪುರಸಭೆ ಮುಖ್ಯಾಧಿಕಾರಿ ಹಾಗೂ ಹುಣಸೂರು ನಿವಾಸಿ ಶಿವಪ್ಪ ನಾಯಕ(56) ಗುರುವಾರ ಬೆಳಗ್ಗೆ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮ ತಾಲೂಕಿನ ಹೊಸ ರಾಮನಹಳ್ಳಿಯಲ್ಲಿ ನೆರವೇರಿತು.

## ಹುಣಸೂರಲ್ಲಿ ಸಂವಿಧಾನ ಜಾಗೃತಿ ರಥಕ್ಕೆ

# ಹಾಲಿ, ಮಾಜಿ ಶಾಸಕರಿಂದ ಅದ್ದೂರಿ ಸ್ವಾಗತ



ಚಿಲ್ಕುಂದಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ರಥವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಸ್ವಾಗತಿಸಿದರು.

ಹುಣಸೂರು, ಫೆ.8– ಪಿರಿಯಾಪಟ್ಟಣದಿಂದ ತಾಲೂಕಿನ ಚಿಲ್ಕುಂದ ಗ್ರಾಮಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ರಥವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಪ್ರತ್ಯೇಕವಾಗಿ ಅದ್ದೂರಿಯಾಗಿ ಸ್ವಾಗತಿಸಿ ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು.

**ಶಾಸಕರಿಂದ ಸ್ವಾಗತ:** ತಾಲೂಕಿನ ಚಿಲ್ಕುಂದಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ರಥವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಸ್ವಾಗತಿಸಿದರು. ಈ ವೇಳೆ ಎಸಿ ಮೊಹಮ್ಮದ್ ಹ್ಯಾರೀಸ್ ಸುಬೇರ್, ತಹಸೀಲ್ದಾರ್ ಜೆ. ಮಂಜುನಾಥ್, ತಾಪಂ ಇಓ ಬಿ.ಕೆ.ಮನು, ಚಿಲ್ಕುಂದ ಗ್ರಾಪಂ ಅಧ್ಯಕ್ಷ ಎನ್.ಎಂ.ಸತೀಶ್, ಉಪಾಧ್ಯಕ್ಷೆ ಪುಟ್ಟಮ್ಮ, ಸಮಾಜ ಕಲ್ಯಾಣಾಧಿಕಾರಿ ಸಿದ್ದರಾಜು, ಬಿಇಓ ರೇವಣ್ಣ, ಪಿಡಿಓ ರವಿ ಮತ್ತಿತರರು ರಥಕ್ಕೆ ಗೌರವ ಸಲ್ಲಿಸಿದರು.

ಈ ವೇಳೆ ಶಾಲಾ ಮಕ್ಕಳು ಬ್ಯಾಂಡ್‌ಸೆಟ್ ಬಾರಿಸುತ್ತಾ ರಾಷ್ಟ್ರಧ್ವಜ ಹಿಡಿದು ಸಂವಿಧಾನದ ಆಶಯ ಕುರಿತ ಫಲಕಗಳನ್ನು ಕೈಯ್ಯಲ್ಲಿ ಹಿಡಿದು ಮೆರವಣಿಗೆ ಮೂಲಕ ಚಿಲ್ಕುಂದ ಪ್ರೌಢಶಾಲಾ ಆವರಣಕ್ಕೆ ಆಗಮಿಸಿದರು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣಕಾರ ಮೈಸೂರು ವಿವಿ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ.ಷಣ್ಮುಖಯ್ಯ ಮಾತನಾಡಿ, ಸಂವಿಧಾನ ಅಂಗೀಕಾರಗೊಂಡು 75 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸರ್ಕಾರ ಸಂವಿಧಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ರಾಜ್ಯದೆಲ್ಲೆಡೆ ಜಾಗೃತಿ ಜಾಥಾ ಹಮ್ಮಿಕೊಂಡಿರುವುದು ಸ್ವಾಗತಾರ್ಹ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಸತೀಶ್, ಬಿಇಓ ರೇವಣ್ಣ ಬಿಆರ್‌ಸಿ ಸಂತೋಷ್ ಕುಮಾರ್, ಶಿಕ್ಷಕ ಕೃಷ್ಣಯ್ಯ ಮಾತನಾಡಿದರು. ಸಂವಿಧಾನದ ಪೀಠಿಕೆ ಬೋಧಿಸಲಾಯಿತು. ಈ ವೇಳೆ ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಆನಂದಸ್ವಾಮಿ, ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ, ಸದಸ್ಯ ಪ್ರೇಮಕುಮಾರ್, ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಮಹದೇವ್, ಗ್ರಾಪಂ ಸದಸ್ಯರಾದ ಶಿವಕುಮಾರ್, ವಸಂತಕುಮಾರಿ, ರೆಹಮಾನ್ ಷರೀಫ್, ರವಿ, ವಿನೋದ್ ರಾಜ್, ಶೈಲಜಾ, ನಾಗರತ್ನ, ಗಾಯಿತ್ರಿ, ಚಿಕ್ಕಸ್ವಾಮಿ, ಮಯೂರ, ರಾಘು, ಕುಮಾರ, ದಸಂಸ ಮುಖಂಡರಾದ ರಾಮಕೃಷ್ಣ, ರಾಜು, ಸಿದ್ದೇಶ್, ಸ್ವಾಮಿ, ಶಿವರಾಜ್, ಗೋವಿಂದರಾಜು ಮತ್ತಿತರಿದ್ದರು.

**ಮಾಜಿ ಶಾಸಕರಿಂದ ಸ್ವಾಗತ:** ಇದಕ್ಕೂ ಮುನ್ನಾ ತಾಲೂಕಿನ ಚಿಲ್ಕುಂದಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ರಥಕ್ಕೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸ್ವಾಗತ ಕೋರಿದರು. ಬಳಿಕ ಸಂವಿಧಾನ ಪೀಠಿಕೆ ವಾಚನದಲ್ಲಿ ಭಾಗವಹಿಸಿದ್ದರು. ಈ ವೇಳೆ ಗ್ರಾಪಂ ಅಧ್ಯಕ್ಷ ಸತೀಶ್, ತಾಲೂಕು ಬಿಎಸ್‌ಪಿ ಅಧ್ಯಕ್ಷ ಪ್ರಸನ್ನ, ಮುಖಂಡರಾದ ಬಸವರಾಜ್, ವಕೀಲ ಪುಟ್ಟರಾಜ್, ಚಿಕ್ಕಸ್ವಾಮಿ, ಮಯೂರ, ರಾಘು, ಕುಮಾರ್, ನಾಗರಾಜ್, ರಾಮಕೃಷ್ಣ ಸಿದ್ದೇಶ್, ಶಿವರಾಜ್ ಹಲವರಿದ್ದರು.

# ತಿ.ನರಸೀಪುರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ

## 400ಕ್ಕೂ ಹೆಚ್ಚು ಮಕ್ಕಳಿಗೆ ವೈದ್ಯರಿಂದ ತಪಾಸಣೆ



ತಿ.ನರಸೀಪುರ, ಫೆ.8– ಕಣ್ಣಿನ ಸಮಸ್ಯೆಗಳು ಕಾಣಿಸಿಕೊಂಡಾಗ ಅದನ್ನು ನಿರ್ಲಕ್ಷಿಸದೆ ಚಿಕಿತ್ಸೆ ಪಡೆಯಬೇಕು ಎಂದು ವಿದ್ಯೋದಯ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ತಿಳಿಸಿದರು.

ಪಟ್ಟಣದ ವಿದ್ಯೋದಯ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಗ್ರಾಮ ವಿದ್ಯೋದಯ ಸಂಘ ಮತ್ತು ನೇತ್ರಧಾಮ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಸಂಸ್ಥೆಯ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

ಕೆಲವರು ಹುಟ್ಟಿನಿಂದಲೇ ದೃಷ್ಟಿ ಕಳೆದುಕೊಂಡು ಪ್ರಪಂಚ ನೋಡುವ ಭಾಗ್ಯದಿಂದ ವಂಚಿತರಾಗಿದ್ದಾರೆ. ಇನ್ನಷ್ಟು ಮಂದಿ ತಮ್ಮ ನಿರ್ಲಕ್ಷ್ಯದಿಂದ ಕಣ್ಣು ಕಳೆದುಕೊಂಡಿದ್ದಾರೆ. ಆದ ಕಾರಣ ದೃಷ್ಟಿ ಇದ್ದವರು ಕಣ್ಣಿನ ರಕ್ಷಣೆಗೆ ಒತ್ತು ನೀಡುವುದು ಅವಶ್ಯಕ ಎಂದರು.

ಶಿಬಿರದಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಪಾಸಣೆಗೆ ಒಳಗಾದರು. ವೈದ್ಯರಾದ ಡಾ.ಪ್ರಕ್ಯ, ಡಾ.ಪೂಜಾ, ಸಹಾಯಕರಾದ ಪ್ರಜ್ವಲ್, ಅಂಜಲಿ, ಅಪರ್ಣ ತಪಾಸಣೆ ಕಾರ್ಯದಲ್ಲಿ ಭಾಗವಹಿಸಿದ್ದರು.

ಈ ವೇಳೆ ಸಂಸ್ಥೆ ಆಡಳಿತಾಧಿಕಾರಿ ಕೆ.ಪಿ. ಉದಯ ಕುಮಾರ್, ಆಡಳಿತ ಸಹಾಯಕ ಶಿವನಂಜಪ್ಪ, ಮುಖ್ಯಸ್ಥರಾದ ಎನ್.ಕಲ್ಪನಾ, ಬಸವಣ್ಣಸ್ವಾಮಿ, ಬಿ.ಎಸ್.ಸುನೀತ, ಎಂ. ಸುರೇಶ, ದೇವಿಕಾ, ಸುಧಾ, ನಂದೀಶ, ಶಿವಮೂರ್ತಿ, ಹೇಮ, ಆರ್.ಎಸ್.ಮಹದೇವಸ್ವಾಮಿ, ಶಿವಶಂಕರ, ಮೂಗೂರು ಕುಮಾರಸ್ವಾಮಿ, ರವೀಶ್ ಕುಮಾರ್, ಮಹದೇವಪ್ರಸಾದ್, ಮಹದೇವಪ್ಪ, ಪ್ರದೀಪ ಇದ್ದರು.

## ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ

# ಯುವ ಪೀಳಿಗೆಗೆ ಕನ್ನಡದ ಮಹತ್ವ ತಿಳಿಸುವಲ್ಲಿ ವಿಫಲರಾಗಿದ್ದೇವೆ

### ಹಾಸ್ಯ ಸಾಹಿತಿ ಪ್ರೊ. ಎಂ.ಕೃಷ್ಣೇಗೌಡ ವಿಷಾದ



ಮೈಸೂರಿನ ಕಲಾಮಂದಿರದಲ್ಲಿ ನಡೆದ 'ಚಾಮರಾಜ ವಿಧಾನಸಭಾ ಕ್ಷೇತ್ರದ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನ'ವನ್ನು ಹಾಸ್ಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಉದ್ಘಾಟಿಸಿದರು.

ಮೈಸೂರು,ಫೆ.8(ಎಂಟಿವೈ)– ಶ್ರೀಮಂತ ಹಾಗೂ ಸಂಪದ್ಭರಿತ ಭಾಷೆಯಾಗಿರುವ ಕನ್ನಡದ ಮಹತ್ವದ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟು, ಕನ್ನಡ ಭಾಷೆಯ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಬೇಕು ಎಂದು ಹಾಸ್ಯ ಸಾಹಿತಿ ಪ್ರೊ.ಎಂ. ಕೃಷ್ಣೇಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ಮೈಸೂರು ನಗರ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ 'ಚಾಮರಾಜ ವಿಧಾನಸಭಾ ಕ್ಷೇತ್ರದ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದಲ್ಲಿ 4500ಕ್ಕೂ ಹೆಚ್ಚು ಭಾಷೆಗಳಿವೆ. ಅವುಗಳಲ್ಲಿ ಹಲವು ಭಾಷೆಗಳಿಗೆ ಲಿಪಿಗಳಿಲ್ಲ, ಹಲವು ಭಾಷೆಗಳಲ್ಲಿ ಗೀತೆ, ಕಥೆ, ಚಲನಚಿತ್ರಗಳೂ ಇಲ್ಲ. ಎಲ್ಲಾ ಭಾಷೆಗಳಿಗಿಂತ ಕನ್ನಡ ಭಾಷೆ ಸಂಪದ್ಭರಿತವಾಗಿದೆ. ಅಕ್ಷರ, ಪದ ಜೋಡಣೆಯೂ ಸುಂದರವಾಗಿದೆ. ಆದರೆ ಯುವ ಪೀಳಿಗೆಗೆ ಹಾಗೂ ಶಾಲಾ ಮಕ್ಕಳಿಗೆ ಕನ್ನಡ ಭಾಷೆಯ ಮಹತ್ವ ತಿಳಿಸಲು ವಿಫಲವಾಗುತ್ತಿದ್ದೇವೆ ಎಂದು ವಿಷಾದಿಸಿದರು.

ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲೀಷ್ ಭಾಷೆಯೇ ಮೇಲು. ಕನ್ನಡದಲ್ಲಿ ಏನೂ ಇಲ್ಲ ಎಂಬ ಭಾವನೆ ಬಿತ್ತುತ್ತಿದ್ದಾರೆ. ಇಂಗ್ಲೀಷ್ ಮಾಧ್ಯಮದಲ್ಲಿ ಓದುವ ಮಕ್ಕಳನ್ನು ಹವಾನಿಯಂತ್ರಿತ ವಾಹನಗಳಲ್ಲಿ ಕರೆದೊಯ್ದರೆ, ಕನ್ನಡ ಮಾಧ್ಯಮದ ವಿದ್ಯಾರ್ಥಿಗಳನ್ನು ಸರ್ಕಾರಿ ಬಸ್ ಅಥವಾ ಸಾಮಾನ್ಯ ವಾಹನಗಳಲ್ಲಿ ಕರೆದೊಯ್ಯಲಾಗುತ್ತದೆ. ಇಂತಹ ವ್ಯತ್ಯಾಸಗಳಿಂದಲೇ ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಕನ್ನಡ ಭಾಷೆಯಲ್ಲಿ ಏನೂ ಇಲ್ಲ. ಇಂಗ್ಲೀಷ್ ಶ್ರೇಷ್ಠ ಎಂಬ ತಪ್ಪು ಸಂದೇಶ ರವಾನೆಯಾಗುತ್ತದೆ. ಇದನ್ನು ಹೋಗಲಾಡಿಸಲು ಪೋಷಕರು ಮುಂದಾಗಬೇಕು. ಜಗತ್ತಿನಲ್ಲಿಯೇ ಕನ್ನಡ ಭಾಷೆ ಶ್ರೇಷ್ಠ ಹಾಗೂ ಶ್ರೀಮಂತ ಭಾಷೆ ಎನ್ನುವುದನ್ನು ಸಾರಬೇಕು ಎಂದರು.

ವಸಾಹತುಶಾಹಿ ಕಾರಣದಿಂದಾಗಿ ಇಂದು ಇಂಗ್ಲೀಷ್ ಭಾಷೆ ಹಲವೆಡೆ ಪ್ರಭಾವ ಬೀರಿದೆ. ವಿವಿಧ ರಾಷ್ಟ್ರಗಳಲ್ಲಿ ಇಂಗ್ಲೀಷ್ ಬಳಕೆಯಾಗುತ್ತದೆ. ಈ ವಿಚಾರವನ್ನು ನಮ್ಮ ಮಕ್ಕಳ ತಲೆಗೆ ತುಂಬುತ್ತಿದ್ದೇವೆ. ಕನ್ನಡ ಭಾಷೆಯ ಘನತೆ, ಶ್ರೇಷ್ಠತೆ ಕುರಿತು ಹೇಳುತ್ತಿಲ್ಲ. ಇಂಗ್ಲೆಂಡಿನಿಂದ 35 ಕಿಮೀ ಅಂತರದಲ್ಲಿರುವ ಫ್ರಾನ್ಸ್ ಒಳಗೆ ಇಂಗ್ಲಿಷ್ ಭಾಷೆ ಪ್ರವೇಶಿಸಲು ಬಿಟ್ಟಿಲ್ಲ. ಅವರು ತಮ್ಮ ದೇಶದ ಸುತ್ತಲೂ ಬೇಲಿ ಹಾಕಿಕೊಂಡು ಇಂಗ್ಲೀಷ್ ಭಾಷೆ ನುಸುಳದಂತೆ ಕಟ್ಟೆಚ್ಚರವಹಿಸಿದ್ದಾರೆ. ಇಂಗ್ಲೀಷ್ ಬಳಕೆ ಜರ್ಮನಿಗರ ಪಾಲಿಗೆ ಅವಮಾನ ಎಂಬಂತಾಗಿದೆ. ತರ್ಕ ಮತ್ತು ರಾಚನೀಕ ದೃಷ್ಟಿಯಿಂದಲೂ ಮುಖ್ಯ ಆಗಿರದ ಇಂಗ್ಲಿಷ್ ಭಾಷೆಯನ್ನು ದೊಡ್ಡ ಭಾಷೆಯಾಗಿ ಕಟ್ಟಿದ್ದಾರೆ. ಅದು ಇಂಗ್ಲಿಷರ ತಾಕತ್ತು. ಆದರೆ, ಶ್ರೀಮಂತಿಕೆಯುಳ್ಳ ಕನ್ನಡ ಭಾಷೆಯನ್ನು ಸಾರ್ವಜನಿಕವಾಗಿ ಬಳಸಲು ಹಿಂದೇಟು ಹಾಕುವುದು ನಮ್ಮ ದೌರ್ಭಾಗ್ಯ ಎಂದು ಕಿಡಿಕಾರಿದರು.

ತರ್ಕದ ದೃಷ್ಟಿಯಿಂದ ಪ್ರಪಂಚದ ಅತ್ಯುತ್ತಮ ಭಾಷೆಗಳಲ್ಲಿ ಕನ್ನಡವೂ ಒಂದು. ಕನ್ನಡದ ಕವಿಗಳು, ಜಗತ್ತಿನ ಯಾವ ದೇಶದ ಕವಿಗಳಿಗೂ ಕಡಿಮೆ ಇಲ್ಲ. ದರ್ಶನ ದೃಷ್ಟಿಯಲ್ಲೂ ಕಡಿಮೆಯಲ್ಲ. ಕನ್ನಡ ಭಾಷೆಯ ಪ್ರತಿಯೊಂದು ಅಕ್ಷರದಲ್ಲೂ ಭಾವನೆ ಅಡಗಿದೆ. ನೋವು, ನಲಿವು, ಸಂಭ್ರಮ, ದುಃಖ ಸೇರಿದಂತೆ ವಿವಿಧ ಭಾವವನ್ನು ಅಕ್ಷರಗಳು ಬಿಂಬಿಸುತ್ತವೆ. ಆದರೆ ಇಂಗ್ಲೀಷ್ ಭಾಷೆಯ ಅಕ್ಷರಗಳು ಸಂದರ್ಭಕ್ಕೆ ಅನುಸಾರವಾಗಿ ಅರ್ಥ ಕೊಡುತ್ತವೆ ಎಂದು ತಿಳಿಸಿದರು.

> ಮಕ್ಕಳಿಗೆ ಕನ್ನಡದ ಮೇಲೆ ಪ್ರೀತಿ, ಘನತೆ ಮತ್ತು ವಿಶ್ವಾಸ ಉಂಟು ಮಾಡಬೇಕು. ಮೇಷ್ಟ್ರು ಕನ್ನಡ ಪಾಠ ಮಾಡಿದರೆ, ಕವಿತೆಗಳ ರಚನೆಯಿಂದ ಕನ್ನಡ ಉದ್ಧಾರವಾಗುವುದಿಲ್ಲ. ತಂತ್ರಜ್ಞಾನ, ಕೃಷಿ, ರಾಜಕಾರಣ ಒಳಗೊಂಡಂತೆ ಎಲ್ಲಾ ಕ್ಷೇತ್ರಗಳಲ್ಲೂ ಕನ್ನಡ ಭಾಷೆಯೇ ಪಾರುಪತ್ಯ ಮೆರೆಯಬೇಕು. ಎಲ್ಲೆಡೆ ಕನ್ನಡತನ ಪ್ರಖರಗೊಂಡಾಗ ಭಾಷೆ ಉಳಿವು ಸಾಧ್ಯ ಎಂದು ಅಭಿಪ್ರಾಯಪಟ್ಟರು.
> – ಪ್ರೊ.ಎಂ. ಕೃಷ್ಣೇಗೌಡ, ಹಾಸ್ಯ ಸಾಹಿತಿ

ಹುಲಿ ಸಂರಕ್ಷಣಾ ಯೋಜನೆಯೆಂದು ಅರಣ್ಯ ಇಲಾಖೆ ಹಲವು ವರ್ಷಗಳಿಂದ ಕಾರ್ಯಕ್ರಮ ರೂಪಿಸಿದೆ. ಈ ಯೋಜನೆ ಬಂಡೀಪುರದಲ್ಲಿ ಹುಲಿ ಸಂರಕ್ಷಿತ ಪ್ರದೇಶದಲ್ಲೂ ಜಾರಿಯಲ್ಲಿದೆ. ಈ ಯೋಜನೆ ಕೇವಲ ಹುಲಿ ಸಂತತಿ ರಕ್ಷಣೆ ಮಾಡುವುದಕ್ಕೆ ಮಾತ್ರ ಸೀಮಿತವಲ್ಲ. ಇದರಲ್ಲಿ ಹುಲಿ ಹೆಸರು ಕೇವಲ ಸಂಕೇತವಷ್ಟೆ. ಆಹಾರ ಸರಪಳಿಯಲ್ಲಿ ಮೇಲಿನ ಸ್ಥಾನದಲ್ಲಿರುವ ಹುಲಿ ಸಂರಕ್ಷಿಸಿದರೆ, ಆ ನಂತರ ಸರಪಳಿಯಲ್ಲಿರುವ ಇತರೆ ಪ್ರಾಣಿಗಳನ್ನು ರಕ್ಷಿಸಬಹುದು. ಇದರಿಂದ ಕಾಡು ಸಮೃದ್ಧವಾಗಿರುತ್ತದೆ. ಆಹಾರ ಸರಪಳಿಯಲ್ಲಿರುವ ಎಲ್ಲಾ ಪ್ರಾಣಿಗಳು ಇರಬೇಕು. ವಾತಾವರಣ ಸಂರಕ್ಷಿಸಬೇಕು. ಮನುಷ್ಯನ ಹಸ್ತಕ್ಷೇಪ ಇರದಿದ್ದರೆ ಹುಲಿ ಸುರಕ್ಷಿತವಾಗಿರುತ್ತದೆ. ಈಗ ಕನ್ನಡ ಸಂರಕ್ಷಿಸುವುದು ಹುಲಿ ಸಂರಕ್ಷಣೆಯಂತೆ ಆಗಬೇಕು. ಕನ್ನಡ ಭಾಷೆ ರಕ್ಷಣೆ ಕೇವಲ ಕನ್ನಡದ ಮೇಷ್ಟ್ರು, ಸಾಹಿತ್ಯ ಬರೆಯುವವರಿಗೆ ಮಾತ್ರ ಸೇರಿದ್ದು, ಉಳಿದವರಿಗೆ ಸಂಬಂಧಿಸಿದ್ದಲ್ಲ ಎಂಬ ತಪ್ಪು ಕಲ್ಪನೆಗಳು ನಿವಾರಣೆಯಾಗಬೇಕು. ಕನ್ನಡ ಅಂದರೆ ಬರೀ ನುಡಿಯಲ್ಲ. ನಾವು–ನೀವು–ಅವರು ಎಂಬ ವಿಶಾಲತೆ ಬರಬೇಕು. ಆಗ ಮಾತ್ರ ಕನ್ನಡ ಭಾಷೆಯ ಉಳಿವು ಸಾಧ್ಯ ಎಂದು ಹೇಳಿದರು.

> ಕನ್ನಡ ಭಾಷೆ ಉಳಿವಿಗಾಗಿ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದ್ದು, ಎಲ್ಲಾ ಕಚೇರಿಗಳಲ್ಲೂ ಕಡ್ಡಾಯವಾಗಿ ಕನ್ನಡ ಭಾಷೆ ಬಳಸುವಂತೆ ಆದೇಶಿಸಿದೆ. ಅದರಂತೆ ಈಗಾಗಲೇ ಎಲ್ಲಾ ಕಚೇರಿಗಳಲ್ಲೂ ಕನ್ನಡವನ್ನು ಕಡ್ಡಾಯವಾಗಿ ಬಳಸಲಾಗುತ್ತಿದೆ. ಚಾಮರಾಜ ಕ್ಷೇತ್ರದಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡ ಭಾಷೆಯ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ಮಾಡಿದೆ.
> -ಕೆ.ಹರೀಶ್‌ಗೌಡ, ಶಾಸಕ

1985ರಲ್ಲಿ ಕಲಾಮಂದಿರದಲ್ಲಿ ನಡೆದ ವಿಶ್ವಕನ್ನಡದ ಸಮೇಳನದಲ್ಲಿ ಕುವೆಂಪು ಅಧ್ಯಕ್ಷರಾಗಿದ್ದರು. ರಾಜೀವ್ ಗಾಂಧಿ ಭಾಗವಹಿಸಿದ್ದರು. ಈಗ ನಾನು ಶಾಸಕನಾಗಿರುವ ತಮ್ಮ ಕ್ಷೇತ್ರದ ಪ್ರಥಮ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ನನ್ನ ಭಾಗ್ಯ. ಕರ್ನಾಟಕದಲ್ಲಿ ಕನ್ನಡಕ್ಕೆ ಆದ್ಯತೆ ಮತ್ತು ಆಡಳಿತದಲ್ಲಿ ಕನ್ನಡಕ್ಕೆ ಮೊದಲ ಪ್ರಾಶಸ್ತ್ಯ ನೀಡುವುದು ನಮ್ಮ ಗುರಿಯಾಗಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್‌ನ ಮೈಸೂರು ನಗರ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿ, ಕನ್ನಡ ಭಾಷೆ ಉಳಿವಿಗೆ ಹಾಗೂ ಭಾಷೆಯಲ್ಲಿ ಅಡಗಿರುವ ಶ್ರೀಮಂತಿಕೆಯನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ಸಾಹಿತ್ಯ ಸಮ್ಮೇಳನ ನಡೆಸಲಾಗುತ್ತಿದೆ. ಕನ್ನಡ ಭಾಷೆ ಉಳಿವಿಗಾಗಿ ಕಸಾಪ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಕೃತಿ ಲೋಕಾರ್ಪಣೆ ಮಾಡಿದರು. ಪ್ರೊ.ಸಿ. ನಾಗಣ್ಣ ವಿಶೇಷ ಉಪನ್ಯಾಸ ನೀಡಿದರು. ಕಸಾಪ ನಗರಾಧ್ಯಕ್ಷ ಕೆ.ಎಸ್. ಶಿವರಾಮು ಸ್ವಾಗತಿಸಿದರು. ಸಮ್ಮೇಳನದ ಪ್ರಧಾನ ಸಂಚಾಲಕ ಎಂ. ಚಂದ್ರಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ.ನಿಂಗರಾಜು ಆರ್ ಮತ್ತು ತಂಡದವರು ನಾಡಗೀತೆ ಹಾಡಿದರು. ಪಲ್ಲವಿ ನಿರೂಪಿಸಿದರು.

## ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ



ಚಾಮರಾಜ ವಿಧಾನಸಭಾ ಕ್ಷೇತ್ರದ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸಮ್ಮೇಳನಾಧ್ಯಕ್ಷ ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡ ಅವರನ್ನು ಮೆರವಣಿಗೆಯಲ್ಲಿ ಕರೆದೊಯ್ಯುತ್ತಿರುವುದು.

ಮೈಸೂರು, ಫೆ.8(ಎಂಟಿವೈ)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಮೊಟ್ಟ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದ ಗೌಡ ಅವರನ್ನು ವಿವಿಧ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ಅರಮನೆಯ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ.ಕೆ.ಚಿದಾನಂದಗೌಡ ಅವರನ್ನು ಸಾರೋಟಿನಲ್ಲಿ ಕೂರಿಸಿ ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬ ರಸ್ತೆಯ ಮೂಲಕ ಕಲಾಮಂದಿರಕ್ಕೆ ಕರೆದೊಯ್ಯಲಾಯಿತು.

ಶಾಸಕ ಕೆ.ಹರೀಶ್‌ಗೌಡ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ, ಗೊಂಬೆ ಕುಣಿತ, ಮಹಿಳಾ ದೊಡ್ಡು ಕುಣಿತ, ಮಹಿಳಾ ಕಂಸಾಳೆ ತಂಡ ಸೇರಿದಂತೆ ಇನ್ನಿತರ ಜಾನಪದ ಕಲಾತಂಡಗಳು ಸಾಗಿ ಮೆರವಣಿಗೆಗೆ ಮೆರಗು ಹೆಚ್ಚಿಸಿದವು.

ಇದರೊಂದಿಗೆ ಸೇವಾದಳ, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ವಿವಿಧ ಶಾಲೆಗಳ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿ ಗಮನ ಸೆಳೆದರು. ಮೆರವಣಿಗೆಯಲ್ಲಿ ಕನ್ನಡ ಭಾಷೆಯ ಸಾಹಿತ್ಯ ಲೋಕ ಅನಾವರಣಗೊಳಿಸುವ ಸ್ತಬ್ಧಚಿತ್ರ, ಕನ್ನಡದ ಧ್ವಜವುಳ್ಳ ಸಾರೋಟ ಹಾಗೂ ಕನ್ನಡಪರ ಹೋರಾಟಗಾರರು, ವಿವಿಧ ರಾಜಕೀಯ ಪಕ್ಷಗಳ ಪಾಲಿಕೆ ಮಾಜಿ ಸದಸ್ಯರು, ವಿವಿಧ ಸಂಘಟನೆಗಳ ಮುಖಂಡರು ಸಾಗಿದರು. ಮೆರವಣಿಗೆಯುದ್ದಕ್ಕೂ ಕನ್ನಡದ ಧ್ವಜ ರಾರಾಜಿಸಿದವು. ಕನ್ನಡ ಪರ ಜೈಕಾರ ಮೊಳಗಿದವು.



# ಸಾಹಿತ್ಯ ಸಮ್ಮೇಳನದಲ್ಲಿ ಸಾಧಕರಿಗೆ ಸನ್ಮಾನ



ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಲಾಯಿತು. ಸಮ್ಮೇಳನಾಧ್ಯಕ್ಷ ಡಾ.ಕೆ.ಚಿದಾನಂದಗೌಡ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮತ್ತಿತರರಿದ್ದರು.

ಮೈಸೂರು, ಫೆ.8(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರನ್ನು ಅತ್ಯಂತ ಆತ್ಮೀಯವಾಗಿ ಸನ್ಮಾನಿಸಿ, ಅಭಿನಂದಿಸಲಾಯಿತು.

ಪ್ರೊ.ಕೆ.ಟಿ.ವೀರಪ್ಪ(ಸಾಹಿತ್ಯ ಸೇವೆ), ಡಾ.ರಾಮೇಗೌಡ(ಸಾಹಿತ್ಯ), ಡಿ.ಮಾದೇಗೌಡ(ಸಮಾಜ ಸೇವೆ), ಪ್ರೊ.ಕೆ.ಪಿ.ಬಸವೇಗೌಡ(ಸಮುದಾಯ ಸೇವೆ), ತೋಂಟದಾರ್ಯ(ರಾಜಕೀಯ), ಪಾಲಹಳ್ಳಿ ರಾಮಕೃಷ್ಣ(ಸಮಾಜ ಸೇವೆ), ಎಸ್.ಟಿ.ರವಿಕುಮಾರ್(ಪತ್ರಿಕಾರಂಗ), ಆರ್. ಮೂರ್ತಿ (ಸಮುದಾಯ ಸೇವೆ), ಎಂ.ಕೆ.ಪೋತರಾಜು (ಉದ್ಯಮ), ಮೋದಾಮಣಿ(ಮಹಿಳಾಪರ ಹೋರಾಟ), ಎಂ.ಆರ್.ಚೌದರಿ (ಸಮುದಾಯ ಸೇವೆ), ಶ್ರೀಮತಿ ಸುಶೀಲ ಮರೀಗೌಡ (ಸಮಾಜಸೇವೆ), ಬಸವರಾಜು(ಮದ್ಯವ್ಯಸನ ನಿವಾರಣೆ), ಕೆ.ಆರ್. ಗೋಪಾಲ ಕೃಷ್ಣ(ರಂಗಭೂಮಿ) ಮತ್ತಿತರರನ್ನು ಸಮ್ಮೇಳನಾಧ್ಯಕ್ಷರಾದ ಡಾ.ಕೆ.ಚಿದಾನಂದಗೌಡ, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಸೇರಿದಂತೆ ಇನ್ನಿತರ ಗಣ್ಯರು ಸನ್ಮಾನಿಸಿದರು.

ಬಳಿಕ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ಕನ್ನಡ ನಮ್ಮ ತಾಯಿ ನುಡಿ. ಕನ್ನಡ ಭಾಷೆ, ನಾಡು ಮತ್ತು ಗಡಿಯನ್ನು ಪ್ರತಿಯೊಬ್ಬರು ಗೌರವಿಸಬೇಕು ಹಾಗೂ ರಕ್ಷಣೆ ಮಾಡಬೇಕು. ಕನ್ನಡಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದವರನ್ನು ಸ್ಮರಿಸುವುದರ ಜೊತೆಗೆ ಕನ್ನಡ ಉಳಿಸೋಣ – ಬೆಳೆಸೋಣ, ವಿಶ್ವವನ್ನೇ ಕನ್ನಡಮಯವನ್ನಾಗಿಸೋಣ ಎಂದು ಕರೆ ನೀಡಿದರು.

## ಕಾವ್ಯಗಳು ಸಮಾಜಮುಖಿಯಾಗಿರಬೇಕು...



ಮೈಸೂರು, ಫೆ.8(ಎಂಕೆ)– ಕಾವ್ಯಗಳು ಸಮಾಜಮುಖಿಯಾಗಿ, ಜೀವನ್ಮುಖಿಯಾಗಿ, ಸಮಾಜದ ಗತಿ–ಮತಿ ಬಿಂಬಿಸುವ ಕೈಗನ್ನಡಿಯಾಗಿರಬೇಕು ಎಂದು ಕವಯತ್ರಿ ಡಾ.ಲತಾರಾಜಶೇಖರ್ ಅಭಿಪ್ರಾಯಪಟ್ಟರು.

ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಾಜದಲ್ಲಿ ವಿಶೇಷ ಸ್ಥಾನ ಪಡೆಯುವ ಕವಿಯೂ ಮನಕುಲದ ಅಗತ್ಯವಾಗಿರುತ್ತಾನೆ. ಹಲವರಿಗೆ ಕವಿಯಾಗಬೇಕು ಎಂಬುದು ಜೀವನದ ಪರಮ ಗುರಿಯೂ ಆಗಿರುತ್ತದೆ ಎಂದರು.

ಗದ್ಯಕ್ಕಿಂತ ಭಿನ್ನವಾಗಿರುವ ಕಾವ್ಯಗಳು ಉನ್ನತ ಸ್ತರದಲ್ಲಿ ನಿಂತಿವೆ. ಕಾವ್ಯಗಳ ಭಾವನೆಯ ಅಭಿವ್ಯಕ್ತವೂ ಆಗಿದ್ದು, ಓದುಗರನ್ನು ಸೆಳೆಯುವ ಪ್ರಮುಖ ಆಕರ್ಷಣೆಯಾಗಿದೆ. ಕವಿಗಳು, ಬರಹಗಾರರು ಕಾವ್ಯಗಳ ರಚನೆಗೆ ಹೆಚ್ಚಿನ ಒತ್ತು ನೀಡುವ ಮೂಲಕ ಸಾಹಿತ್ಯ ಕ್ಷೇತ್ರವನ್ನು ಇನ್ನಷ್ಟು ಶ್ರೀಮಂತಗೊಳಿಸಬೇಕು ಎಂದು ತಿಳಿಸಿದರು.

# ಸಂಸ್ಕೃತದಂತೆ ಕನ್ನಡ ಮೃತಭಾಷೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದ್ದು

### ವಿಶ್ರಾಂತ ಕುಲಪತಿ ಡಾ. ಕೆ.ಚಿದಾನಂದಗೌಡ



ಮೈಸೂರು, ಫೆ.8(ಎಂಟಿವೈ)– ಸಂಸ್ಕೃತದಂತೆ ಕನ್ನಡ ಭಾಷೆ ಮೃತಭಾಷೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ ಎಂದು ಚಾಮರಾಜ ವಿಧಾನ ಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡ ಎಚ್ಚರಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಅವರು, ಕನ್ನಡ ಆಡಳಿತ ಭಾಷೆಯಾಗದಿದ್ದರೆ, ಅದು ಸಂಸ್ಕೃತದಂತೆ ಮೃತ ಭಾಷೆ ಆಗುತ್ತದೆ ಎಂದು ಹಿರಿಯ ವಿಜ್ಞಾನಿ ಡಾ.ರಾಜಾ ರಾಮಣ್ಣನವರು ಎಚ್ಚರಿಕೆ ನೀಡಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಗಣಕಗಳಲ್ಲಿ ಕನ್ನಡ ಬಳಕೆ ಹೆಚ್ಚಿಸದಿದ್ದರೆ ಕನ್ನಡವು ಆಡಳಿತದ ಭಾಷೆಯ ಸ್ಥಾನದಿಂದ ಕೆಳಗಿಳಿಯುವ ಆತಂಕವಿದೆ. ಆ ಮೂಲಕ ಕನ್ನಡ ಕೇವಲ ಆಡುಭಾಷೆಯಾಗಿ, ಮನೆ ಮಾತಾಗಿ ಮಾತ್ರ ಉಳಿಯುವ ಸಂದರ್ಭ ಒದಗಿ ಬರುತ್ತದೆ. ಇದರಿಂದ ನಿಧಾನವಾಗಿ ಭಾಷೆಯ ಏಳಿಗೆ ಕುಂಠಿತವಾಗಿ ಸತ್ವಹೀನವಾಗಿ, ಮಸುಕಾಗಿ, ಮೃತಭಾಷೆಯಾದರೆ ಅಚ್ಚರಿಯಿಲ್ಲ ಎಂದರು.

ಒಂದು ಭಾಷೆ ಮತ್ತು ಅದನ್ನು ಬಳಸುವ ಜನರ ಸಂಸ್ಕೃತಿಗಳ ನಡುವೆ ಅವಿನಾಭಾವ ಸಂಬಂಧವನ್ನು ಹೊಂದಿರುತ್ತವೆ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಒಂದು ವೇಳೆ ಕನ್ನಡವು ಮೃತಭಾಷೆಯಾದರೆ ಅದರೊಡನೆ ಕರ್ನಾಟಕದ ಸಂಸ್ಕೃತಿಯು ಮೃತವಾಗುತ್ತದೆ. ಆಗ ಕನ್ನಡಿಗರಾದ ನಾವು ಬದುಕಿದ್ದೂ ಮೃತರಾಗಿರುತ್ತೇವೆ. ಜಾಗತೀಕರಣದಲ್ಲಿ ಭಾಷೆ ಮತ್ತು ಸಂಸ್ಕೃತಿ ಉಳಿವಿನ ಸವಾಲನ್ನು ಸದೃಢ ಮನಸ್ಸಿನಿಂದ ಎದುರಿಸಬೇಕಾಗಿದೆ. ಇದಕ್ಕಾಗಿ ನಾವು ಹೋರಾಟ ಮಾಡಬೇಕು. ಅದು ಬೀದಿಯ ಹೋರಾಟವಲ್ಲ. ಅಜ್ಞಾನದ ಮಾನಸಿಕ ಸ್ಥಿತಿಯೆದುರು, ಗಣಕದೊಡನೆ ಸಾಧ್ಯವಿರುವಲ್ಲೆಲ್ಲ ಕನ್ನಡವನ್ನು ಬಳಸುವ ಛಲ ಹೊತ್ತು ಸುಜ್ಞಾನದ ಬುದ್ಧಿಪೂರ್ವಕವಾದ ಹೋರಾಟ ರೂಪಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ಸಂಪೂರ್ಣವಾಗಿ ಮಾತೃಭಾಷೆಯಲ್ಲಿ ಆಗುವಂತೆ ಮಾಡುವುದು. ಗತಕಾಲದ ಕನ್ನಡ ವಿದ್ವಾಂಸರ ಕೊರತೆ ನಿವಾರಿಸುವುದು. ಕನ್ನಡದ ಮೇರು ಕೃತಿಗಳನ್ನು ತರ್ಜುಮೆ ಮಾಡುವುದು. ವಿದೇಶಗಳಲ್ಲಿ ಕನ್ನಡ ಪೀಠಗಳ ಸ್ಥಾಪನೆ ಮಾಡುವಂತೆ ಸಲಹೆ ನೀಡಿದರು.

ಬಾಹ್ಯಲೋಕದಲ್ಲಿ ಚಂದಿರನ ಅಂಗಳಕ್ಕೆ ಹೋಗಿ ಬಂದಿದ್ದೇವೆ. ಆದರೆ ಅಂತರಂಗದ ಮಂದಿರದಲ್ಲಿ ಅಮಾವಾಸ್ಯೆಯ ಕತ್ತಲು. ವಿವೇಕ ಕಡಿಮೆಯಾಗಿ ವಿಶ್ವಜ್ಞಾನ ಹೆಚ್ಚುತ್ತಿದೆ. ಕಂಪ್ಯೂಟರಿನ ಕಾಮನಬಿಲ್ಲಿಗೆ ಕಣ್ಣು ತೆರೆದಿದ್ದೇವೆ. ಆದರೆ, ಕನ್ನಡದ ಕಂಪಿಗೆ ಮೂಗು ಮುಚ್ಚಿದ್ದೇವೆ. ಅಂತರ್ಜಾಲದ ಮೂಲಕ ಸಂಬಂಧ ಪಡೆದುಕೊಂಡಿದ್ದೇವೆ. ಆದರೆ, ಸಾಹಿತ್ಯ ಸಂಬಂಧ ಕಳೆದುಕೊಳ್ಳುವ ಭೀತಿಯಲ್ಲಿದ್ದೇವೆ ಎಂದು ವರ್ತಮಾನದ ಸ್ಥಿತಿಯನ್ನು ವಿವರಿಸಿದರು.

# ಸಾಹಿತ್ಯ ಪ್ರಜ್ಞೆ ಮೊಳಕೆಯೊಡೆದಿದ್ದೆ ಮೈಸೂರಲ್ಲಿ

### ಸಂಸ್ಕೃತಿ ಚಿಂತಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅಭಿಮತ



ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಂಸ್ಕೃತಿ ಚಿಂತಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಸಮಾರೋಪ ಭಾಷಣ ಮಾಡಿದರು.

ಮೈಸೂರು, ಫೆ.8(ಎಂಕೆ)– ಕರ್ನಾಟಕ ಸಾಂಸ್ಕೃತಿಕ ಚಿತ್ರಣದಲ್ಲಿ ಮೈಸೂರಿನ ಪಾತ್ರ ಮಹತ್ವದ್ದಾಗಿದ್ದು, ಕನ್ನಡ ಸಾಹಿತ್ಯ ಚರಿತ್ರೆ ಮೈಸೂರು ಮಲ್ಲಿಗೆ ಹೂವಿನ ಪರಿಮಳದಂತೆ ವಿಶ್ವದೆಲ್ಲೆಡೆ ಹರಡಿದೆ ಎಂದು ಸಂಸ್ಕೃತಿ ಚಿಂತಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಹೇಳಿದರು.

ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಅವರು, ಸಾಹಿತ್ಯ ಕೆಲಸ ಮಾಡಬೇಕು ಎನ್ನುವ ಸರ್ವಾಂಗೀಣ ಪ್ರಜ್ಞೆ ಕುಡಿಯೊಡೆದಿದ್ದು, ಚಿಗುರೊಡೆದಿದ್ದು ಮೈಸೂರಿನಲ್ಲಿ. ಸಾಹಿತ್ಯ ಕೆಲವರಿಗೆ ಸೀಮಿತವಲ್ಲ ಸಮಾಜದ ಸಮಸ್ತರಿಗೂ ಮೀಸಲು ಎಂಬ ಆಶಯ ಮೈಸೂರಿನದ್ದಾಗಿದೆ. ಇದಕ್ಕೆ ಪೂರಕವಾಗಿ ಮೈಸೂರು ಒಡೆಯರ ಆಶ್ರಯದಲ್ಲಿ ಪೋಷಿಸಿದ ಕಲೆ, ಸಾಹಿತ್ಯ ವಿಶ್ವದ ನಾನಾ ಭಾಗಗಳಿಂದ ಜನರನ್ನು ಆಕರ್ಷಿಸಿದೆ ಎಂದರು.

ಇತ್ತೀಚಿನ ವರ್ಷಗಳಲ್ಲಿ ತರುಣರಲ್ಲಿ ಸಾಹಿತ್ಯ ಅಭಿರುಚಿ ಇಲ್ಲವಾಗಿದೆ. ಈ ಬಗ್ಗೆ ಪೋಷಕರು, ಸರ್ಕಾರ ಗಂಭೀರವಾಗಿ ಚಿಂತಿಸಬೇಕು. ಮನೆಯಲ್ಲಿ ಅಲಂಕಾರಿಕ ವಸ್ತುಗಳನ್ನು ಜೋಡಿಸುವಂತೆ ಪುಸ್ತಕಗಳನ್ನು ಜೋಡಿಸಬೇಕು. ಇದರಿಂದ ಮಕ್ಕಳು ಇದು ಪುಸ್ತಕವೆಂದಾದರೂ ಕುತೂಹಲದಿಂದ ಕೇಳುತ್ತಾರೆ ಎಂದರಲ್ಲದೆ ಭಾಷಾ ಕೌಶಲ್ಯತೆ ಕಡಿಮೆಯಾಗುತ್ತಿದ್ದು, ಸ್ಪಷ್ಟವಾಗಿ ಕನ್ನಡ ಮಾತನಾಡುವವರೇ ಇಲ್ಲವಾಗಿದ್ದಾರೆ. ಭಾಷಾ ಪ್ರೀತಿ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಹೊಸ ಕಾರ್ಯರೂಪಿಸಬೇಕು ಎಂದು ತಾಕೀತು ಮಾಡಿದರು.

ಸುದ್ದಿ ಮಾಧ್ಯಮಗಳು ರಾಜಕೀಯ ಕೆಸರೆರಚಾಟಕ್ಕೆ ವೇದಿಕೆಯಾಗಿ ಬಿಟ್ಟಿವೆ. ಬೆಳಗ್ಗೆದ್ದು ಪೇಪರ್ ನೋಡಿದರೆ ಬರೀ ರಾಜಕೀಯದ್ದೇ ಸುದ್ದಿ. ಸಾಹಿತ್ಯ, ಸಂಸ್ಕೃತಿ, ಕಲೆ, ಜಾನಪದಕ್ಕೆ ಸಂಬಂಧಪಟ್ಟ ಯಾವ ಸುದ್ದಿಯೂ ಇರುವುದಿಲ್ಲ. ಚಾನೆಲ್‌ಗಳಂತೂ ಮೂರು ಹೊತ್ತು ರಾಜಕಾರಣ ಸುತ್ತ ಗಿರಕಿ ಹೊಡೆಯುತ್ತಿರುತ್ತವೆ. ನಮ್ಮ ಸ್ಥಿತಿ ದಿನವಿಡೀ ರಾಜಕಾರಣ ಜಗಳ ನೋಡುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರಲ್ಲದೆ ಕಳೆದ ರಾಜ್ಯ ಸರ್ಕಾರ ಪುಸ್ತಕಗಳನ್ನು ಖರೀದಿಸದೆ ಪ್ರಕಾಶಕರನ್ನು ಸಂಕಷ್ಟಕ್ಕೆ ದೂಡಿತ್ತು. ಈಗಿನ ಸರ್ಕಾರ ಪುಸ್ತಕಗಳನ್ನು ಖರೀದಿ ಮಾಡಿದ್ದು, ಕವಿಗಳು, ಪ್ರಕಾಶಕರಿಗೆ ಯಾವ ರೀತಿ ನೆರವು ನೀಡಲಿದೆ ಎಂಬುದನ್ನು ಕಾದು ನೋಡಬೇಕು ಎಂದು ತಿಳಿಸಿದರು.

### ಸಾಹಿತ್ಯ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳು

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ನೀಡಲಾಗಿದೆ. ಆದರೆ ಕೇಂದ್ರ ಸರ್ಕಾರ ಸರಿಯಾಗಿ ಅನುದಾನವನ್ನು ನೀಡದೆ ಸಂಶೋಧನಾತ್ಮಕ ಕೆಲಸಗಳಿಗೆ ಹಿನ್ನಡೆಯಾಗಿದೆ. ಈ ಕೂಡಲೇ ಬೇರೆ ಭಾಷೆಗಳಿಗೆ ಕೊಡಮಾಡಿರುವಂತೆ ಕನ್ನಡ ಭಾಷೆಯ ಸಂಶೋಧನೆ ಕಾರ್ಯಚಟುವಟಿಕೆಗಳಿಗೆ ಅನುದಾನವನ್ನು ನೀಡಬೇಕು.

ಈಗಾಗಲೇ ರಾಜ್ಯ ಸರ್ಕಾರ ನಿರ್ಣಯಿಸಿರುವಂತೆ ನಾಮಫಲಕಗಳಲ್ಲಿ ಶೇ.60 ರಷ್ಟು ಕಡ್ಡಾಯ ಕನ್ನಡ ಭಾಷೆ ಬಳಕೆಗೆ ಅವಕಾಶ ನೀಡಿ, ರಾಜ್ಯಪಾಲರು ಕರ್ನಾಟಕದಾದ್ಯಂತ ನಾಮಫಲಕಗಳಲ್ಲಿ ಕನ್ನಡಕ್ಕೆ ಪ್ರಥಮ ಆದ್ಯತೆ ನೀಡುವಂತೆ ಆಗ್ರಹಿಸಬೇಕು ಎಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

# ಗ್ಯಾರೇಜ್‌ನಲ್ಲಿ ವಾಹನಗಳ ಬಿಡಿಭಾಗ ಕಳವು

### ಇಬ್ಬರು ವಶಕ್ಕೆ; ಮೂವರು ನಾಪತ್ತೆ


ಮೈಸೂರು, ಫೆ.8(ಎಸ್‌ಬಿಡಿ)– ಗ್ಯಾರೇಜ್‌ನಲ್ಲಿ ವಾಹನಗಳ ಬಿಡಿಭಾಗಗಳನ್ನು ಕಳವು ಮಾಡಿದ್ದ ಪ್ರಕರಣದಲ್ಲಿ ಮೈಸೂರಿನ ಆಲನಹಳ್ಳಿ ಠಾಣೆ ಪೊಲೀಸರು ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ.

ಅವರಿಂದ ಐಷರ್ ವಾಹನ ಹಾಗೂ ವಿವಿಧ ವಾಹನಗಳ ಸುಮಾರು 3 ಲಕ್ಷ ಮೌಲ್ಯದ ಬಿಡಿಭಾಗಗಳನ್ನು ವಶಪಡಿಸಿಕೊಳ್ಳಲಾಗಿದ್ದು, ತಲೆಮರೆಸಿಕೊಂಡಿರುವ ಮೂವರು ಖದೀಮರ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಲನಹಳ್ಳಿ, ತಿ.ನರಸೀಪುರ ರಸ್ತೆ ಸಿಗ್ನಲ್ ಬಳಿ ಇರುವ ಫ್ರೆಂಡ್ಸ್ ಆಟೋ ಗ್ಯಾರೇಜ್‌ನಲ್ಲಿ ವಾಹನಗಳ ಬಿಡಿಭಾಗಗಳು ಕಳುವಾಗಿದ್ದರ ಬಗ್ಗೆ ಅಲ್ಲಿನ ಮೆಕ್ಯಾನಿಕ್ ಸೈಯದ್ ಸಾಹಿದ್ ಫೆ.6ರಂದು ಆಲನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಗ್ರಾಹಕರೊಬ್ಬರ ಟಿಪ್ಪರ್ ವಾಹನವನ್ನು ತುರ್ತಾಗಿ ರಿಪೇರಿ ಮಾಡಬೇಕಿದ್ದ ಕಾರಣ ಫೆ.2ರಂದು ಮುಂಜಾನೆ 4 ಗಂಟೆ ಸಮಯದಲ್ಲಿ ಗ್ಯಾರೇಜ್‌ಗೆ ಹೋಗಿದ್ದೆ. ರಿಪೇರಿ ಮುಗಿದ ನಂತರ ಮತ್ತೆ ಬೇಗ ವಾಪಸ್ ಬರೋಣವೆಂದು ಗ್ಯಾರೇಜ್‌ಗೆ ಬೀಗ ಹಾಕದೆ ಹೊರ ಹೋಗಿದ್ದೆ. ಮತ್ತೆ 7.30ಕ್ಕೆ ವಾಪಸ್ ಬಂದಾಗ ಬ್ರೇಕ್ ಡ್ರಮ್, ಜಾಯಿಂಟ್ ಅಸೆಂಬಲ್, ಐಡ್ರಾಲಿಕ್ ಟ್ಯಾಂಕ್, ಲಿಫ್ಟ್ ಪಂಪ್ ಸೇರಿದಂತೆ ಸುಮಾರು 3.15 ಲಕ್ಷ ಮೌಲ್ಯದ ಬಿಡಿಭಾಗಗಳು ಕಳುವಾಗಿದ್ದವು. ತಂಗಿಯ ವಿವಾಹವಿದ್ದ ಕಾರಣ ತಡವಾಗಿ ದೂರು ನೀಡುತ್ತಿರುವುದಾಗಿ ಸೈಯದ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದರು.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿ, ಇಬ್ಬರನ್ನು ವಶಕ್ಕೆ ಪಡೆದು ಕಳುವಾಗಿದ್ದ ಬಿಡಿಭಾಗಗಳು ಹಾಗೂ ಅವುಗಳನ್ನು ತುಂಬಿದ್ದ ಐಷರ್ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಪೊಲೀಸರು ವಶಕ್ಕೆ ಪಡೆದಿರುವ ಇಬ್ಬರು, ಕೂಲಿ ಕೆಲಸಕ್ಕೆಂದು ಖದೀಮರು ಕರೆದುಕೊಂಡು ಹೋಗಿದ್ದರು ಎಂದು ತಿಳಿದುಬಂದಿದೆ. ಅವರು ನೀಡಿರುವ ಮಾಹಿತಿ ಮೇರೆಗೆ ತಲೆಮರೆಸಿಕೊಂಡಿರುವ ಮೂವರು ಖದೀಮರ ಪತ್ತೆಗೆ ಕ್ರಮ ವಹಿಸಿದ್ದಾರೆ.



ಆಲನಹಳ್ಳಿ ಪೊಲೀಸರು ವಶಪಡಿಸಿಕೊಂಡಿರುವ ಐಷರ್ ವಾಹನ ಹಾಗೂ ಕಳುವಾಗಿದ್ದ ವಸ್ತುಗಳು

ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ ಮಾರ್ಗದರ್ಶನ, ಎಸಿಪಿ ಶಾಂತಮಲ್ಲಪ್ಪ ನಿರ್ದೇಶನದಲ್ಲಿ ಆಲನಹಳ್ಳಿ ಇನ್‌ಸ್ಪೆಕ್ಟರ್ ಸ್ವರ್ಣ, ಸಬ್‌ಇನ್ಸ್‌ಪೆಕ್ಟರ್ ಗಂಗಾಧರ್, ಎಎಸ್‌ಐ ಲಕ್ಷ್ಮಿನಾರಾಯಣ್, ಸಿಬ್ಬಂದಿ ಶಿವಪ್ರಸಾದ್, ಸುಹೇಲ್, ರುಕ್ಮಿಣಿ ಹಾಗೂ ರಂಗಸ್ವಾಮಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

## 'ಕಥಾಸಂಧಿ' ಕಾರ್ಯಕ್ರಮ



ಮೈಸೂರು, ಫೆ.8– ನವದೆಹಲಿಯ ಸಾಹಿತ್ಯ ಅಕಾಡೆಮಿ ಹಾಗೂ ಮೈಸೂರು ಕೊಂಕಣಿ ಕ್ರಿಶ್ಚಿಯನ್ ಅಸೋಸಿಯೇಷನ್ ಸಹಯೋಗದಲ್ಲಿ 'ಕಥಾಸಂಧಿ' ಕಾರ್ಯಕ್ರಮವನ್ನು ವಿಜಯನಗರ 2ನೇ ಹಂತದ 'ಕೊಂಕಣಿ ಭವನ'ದಲ್ಲಿ ಫೆ.11ರಂದು ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದ್ದು, ಕೊಂಕಣಿ ಹಾಗೂ ಕನ್ನಡದ ಖ್ಯಾತ ಕಥೆಗಾರ ವಲ್ಲಿ ವಗ್ಗ(ವಲೇರಿಯನ್ ಡಿಸೋಜಾ) ಅವರು ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ವಿಶೇಷಚೇತನ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

## ಆಟವಾಡಲು ಹೋದ ಬಾಲಕ ನಾಪತ್ತೆ



ಮೈಸೂರು,ಫೆ.8–ನಗರದ ನಜರ್‌ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆಟವಾಡಲು ಹೋದ ಕುಶಾಲ್ ಆರಾಧ್ಯ(17) ಎಂಬ ಬಾಲಕ ನಾಪತ್ತೆಯಾಗಿರುವ ಘಟನೆ ವರದಿಯಾಗಿದೆ.

ಈತನ ಬಗ್ಗೆ ಸುಳಿವು ಸಿಕ್ಕಮಲ್ಲಿ ದೂ:112, 0821–2418339, 2452200, 2418308 ಮೂಲಕ ತಿಳಿಸುವಂತೆ ಪ್ರಕರಣ ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ಮನವಿ ಮಾಡಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 9 ಫೆಬ್ರವರಿ 2024

# ಶಾಲೆಗಳಿಗೆ ತುರ್ತಾಗಿ ಮೂಲಸೌಕರ್ಯ ಒದಗಿಸಿ

## ಕೊಡಗರಹಳ್ಳಿ ಗ್ರಾಪಂನ ಮಕ್ಕಳ ಗ್ರಾಮಸಭೆಯಲ್ಲಿ ವಿದ್ಯಾರ್ಥಿಗಳ ಮನವಿ

ಮಡಿಕೇರಿ, ಫೆ.8–ಕುಶಾಲನಗರ ತಾಲೂಕಿನ ಕೊಡಗರಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಗುರುವಾರ ನಡೆದ ಮಕ್ಕಳ ಗ್ರಾಮ ಸಭೆಯಲ್ಲಿ ವಿದ್ಯಾರ್ಥಿಗಳು ಶಾಲೆಯ ವಿವಿಧ ಬೇಡಿಕೆ ಈಡೇರಿಸುವಂತೆ ಮನವಿ ಮಾಡಿದರು.

ಗ್ರಾಪಂ ಅಧ್ಯಕ್ಷೆ ನಿರತಾ ಬೆಳ್ಳಿಯಪ್ಪ ಅಧ್ಯಕ್ಷತೆಯಲ್ಲಿ ನಡೆದ ಮಕ್ಕಳ ಗ್ರಾಮಸಭೆಯಲ್ಲಿ ಸುಂಟಿಕೊಪ್ಪನಾಡು ಅನುದಾನಿತ ಪ್ರೌಢಶಾಲೆಯ ವಿದ್ಯಾರ್ಥಿಯೊಬ್ಬ ಮಾತನಾಡಿ, ತಮ್ಮ ಶಾಲೆಗೆ ಶೌಚಾಲಯ ಅಗತ್ಯವಿದೆ. ಆದ್ದರಿಂದ ತುರ್ತಾಗಿ ಶೌಚಾಲಯ ನಿರ್ಮಿಸಿ ಕೊಡುವಂತೆ ಮನವಿ ಮಾಡಿದರು.

ಈ ಬಗ್ಗೆ ಪಿಡಿಓ ರವೀಶ್ ಮಾತನಾಡಿ, ಸರ್ಕಾರಿ ಶಾಲೆಗಳಿಗೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಶೌಚಾಲಯ ನಿರ್ಮಾಣಕ್ಕೆ ಅವಕಾಶವಿದೆ. ಆದರೆ, ಅನುದಾನಿತ ಶಾಲೆಗಳಲ್ಲಿ ನಿರ್ಮಾಣಕ್ಕೆ ಅವಕಾಶವಿಲ್ಲ. ಈ ಬಗ್ಗೆ ತುರ್ತಾಗಿ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಇತ್ಯರ್ಥಪಡಿಸಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಕೊಡಗರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯೊಬ್ಬಳು ಮಾತನಾಡಿ, ನಮ್ಮ ಶಾಲೆಯಲ್ಲಿ ನೀರಿನ ಟ್ಯಾಂಕ್ ಇಲ್ಲ ಗ್ರಾಮ ಪಂಚಾಯಿತಿ ವತಿಯಿಂದ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಿದಳು. ಬಳಿಕ ಗ್ರಾಪಂ ಅಧ್ಯಕ್ಷೆ ನಿರತಾ ಬೆಳ್ಳಿಯಪ್ಪ ಮಾತನಾಡಿ, ಮುಂದಿನ ಗ್ರಾಪಂ ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.



ಕುಶಾಲನಗರ ತಾಲೂಕಿನ ಕೊಡಗರಹಳ್ಳಿ ಗ್ರಾಪಂನಲ್ಲಿ ನಡೆದ ಮಕ್ಕಳ ಗ್ರಾಮಸಭೆಯಲ್ಲಿ ರಾಷ್ಟ್ರಮಟ್ಟದ ವಿಜ್ಞಾನ ಸಮಾವೇಶಕ್ಕೆ ಆಯ್ಕೆಯಾದ ಸುಂಟಿಕೊಪ್ಪನಾಡು ಪ್ರೌಢಶಾಲೆಯ ಶ್ರೀಷಾ ವಿದ್ಯಾರ್ಥಿನಿಯನ್ನು ಸನ್ಮಾನಿಸಲಾಯಿತು.

ಶಾಂತಿನಿಕೇತನ ಪ್ರೌಢಶಾಲೆಯ ವಿದ್ಯಾರ್ಥಿನಿ ಮಾತನಾಡಿ, ಕೊಡಗರಹಳ್ಳಿ ಜಂಕ್ಷನ್‌ನಲ್ಲಿ ವಾಹನಗಳನ್ನು ಎಲ್ಲೆಂದರಲ್ಲಿ ಪಾರ್ಕಿಂಗ್ ಮಾಡುತ್ತಾರೆ. ಇದರಿಂದ ಸಂಚಾರಕ್ಕೆ ಸಾಕಷ್ಟು ಸಮಸ್ಯೆಯಾಗುತ್ತಿದೆ. ಜೊತೆಗೆ ಅಪಘಾತಗಳೂ ಹೆಚ್ಚುತ್ತಿವೆ ಎಂದು ತಿಳಿಸಿದಳು. ಇದಕ್ಕೆ ಪ್ರತಿಕ್ರಿಯಿಸಿ ಗ್ರಾಪಂ ಅಧ್ಯಕ್ಷೆ, ಈ ಸಂಬಂಧ ಹಲವು ದೂರುಗಳು ಬಂದಿವೆ. ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನವೀನ್, ಮಕ್ಕಳ ಹಕ್ಕುಗಳು ಮತ್ತು ಗ್ರಾಮಸಭೆಯ ಮಹತ್ವದ ಬಗ್ಗೆ ತಿಳಿಸಿದರು. ಸುಂಟಿಕೊಪ್ಪ ಪೊಲೀಸ್ ಠಾಣೆ ಎಎಸ್ಐ ಸೈಮನ್ ಡಿ.ಕುನ್ಹಾ, ಸಂಚಾರಿ ನಿಯಮ, ಮಕ್ಕಳ ರಕ್ಷಣೆ ಕುರಿತು ಮಾಹಿತಿ ನೀಡಿದರು. ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಜ್ಯೋತಿ, ಆರೋಗ್ಯ ನಿರ್ವಹಣೆ, ವೈಯಕ್ತಿಕ ಶುಚಿತ್ವ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಿದರು. ಜಿಲ್ಲಾ ಐಇಸಿ ಸಂಯೋಜಕ ಪವನ್ ಕುಮಾರ್, ಮಕ್ಕಳ ಜ್ಞಾನ ವೃದ್ಧಿಯಲ್ಲಿ ಮಾಧ್ಯಮದ ಪಾತ್ರ ಕುರಿತು ತಿಳಿಸಿದರು.

**ಬಾಲ ವಿಜ್ಞಾನಿಗೆ ಸನ್ಮಾನ:** ರಾಜ್ಯಮಟ್ಟದ ಅಖಿಲ ಕರ್ನಾಟಕ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ 'ಕಲುಷಿತಗೊಳಿಸುತ್ತಿರುವ ಕಾವೇರಿ ನದಿ' ವಿಷಯದ ಬಗ್ಗೆ ಪ್ರಬಂಧ ಮಂಡಿಸಿ, ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಸುಂಟಿಕೊಪ್ಪನಾಡು ಪ್ರೌಢಶಾಲೆಯ ಶ್ರೀಷಾ ವಿದ್ಯಾರ್ಥಿನಿಯನ್ನು ಗ್ರಾಪಂ ವತಿಯಿಂದ ಸನ್ಮಾನಿಸಲಾಯಿತು. ಗ್ರಾಪಂ ಸದಸ್ಯರಾದ ನೀತಾ, ಕವಿತಾ, ಕಲಾಮಣಿ, ಚೆನ್ನಬಸವಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ದಮಯಂತಿ, ಶಾಂತಿನಿಕೇತನ ಶಾಲೆಯ ಮುಖ್ಯಶಿಕ್ಷಕಿ ಮೇರಿ ಫಾಟಿಮಾ, ಗ್ರಾಪಂ ಸಿಬ್ಬಂದಿ ಹಾಜರಿದ್ದರು.

# ಕಾಡಾನೆ ದಾಳಿಯಿಂದ ಮಹಿಳೆಯ ಕಾಲು ಮುರಿತ

## ಅರಣ್ಯ ಇಲಾಖೆ ವಿರುದ್ಧ ರೈತ ಸಂಘ ಕಾರ್ಯಕರ್ತರ ಪ್ರತಿಭಟನೆ

**ಕುಶಾಲನಗರ:** ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯ ಮೇಲೆ ಕಾಡಾನೆ ದಾಳಿ ನಡೆಸಿದ ಪರಿಣಾಮ ಮಹಿಳೆಯ ಕಾಲು ಮುರಿದಿರುವ ಘಟನೆ ಸಮೀಪದ ಹೆಬ್ಬಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಡಾಂಚಿನ ಚಿನ್ನೇನಹಳ್ಳಿ ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ರೈತ ಮಹಿಳೆ ವೆಂಕಟಮ್ಮನ (65) ಮಂಡಿಯಿಂದ ಪಾದದವರೆಗೆ ಬಲಗಾಲು ಸಂಪೂರ್ಣ ನುಜ್ಜುಗುಜ್ಜಾಗಿದ್ದು, ಈಕೆಯನ್ನು ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

**ಶಾಸಕರ ನೆರವು:** ಕಾಡಾನೆ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿರುವ ವೆಂಕಟಮ್ಮನ ಚಿಕಿತ್ಸೆಗೆ ಅಗತ್ಯ ನೆರವು ನೀಡುವುದಾಗಿ ಶಾಸಕ ಡಾ.ಮಂತರ್‌ಗೌಡ ಭರವಸೆ ನೀಡಿದರು.

**ರೈತರ ಪ್ರತಿಭಟನೆ:** ಕಾಡಾನೆ ಹಾವಳಿಯಿಂದ ರೈತರಿಗೆ ತುಂಬ ತೊಂದರೆಯಾಗುತ್ತೆ ಎಂದು ರೈತ ಸಂಘದ ಮುಖಂಡರು ಗ್ರಾಮದಲ್ಲಿ ಗುರುವಾರ ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ನಡೆಸಿದರು.

ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವಾಸುದೇವ ಮೇಟಿ ಬಣದ ಪದಾಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಮಾಹಿತಿ ಪಡೆದರು. ಇದೇ ವೇಳೆ ಕಾಡಾನೆ ಹಾವಳಿ ನಿಯಂತ್ರಿಸಲು ಅರಣ್ಯ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಡಾನೆಗಳ ಹಾವಳಿ ನಿಯಂತ್ರಿಸಲು ಸೋಲಾರ್ ಬೇಲಿ ಹಾಗೂ ಕಂದಕಗಳ ನಿರ್ಮಾಣ ವಿಫಲವಾಗಿದೆ. ಆದ್ದರಿಂದ ರೈಲ್ವೆ ಬ್ಯಾರಿಕೇಡ್‌ಗಳನ್ನು ಅಳವಡಿಸಲು ಕ್ರಮ ವಹಿಸುವಂತೆ ಒತ್ತಾಯಿಸಿದರು. ಗ್ರಾಮದೊಳಗೆ ಅಡ್ಡಾಡುತ್ತಿರುವ ಕಾಡಾನೆಗಳು ಈ ಭಾಗದಲ್ಲಿ ಫಸಲುಗಳನ್ನು ತಿಂದು ತುಳಿದು ನಾಶಪಡಿಸುತ್ತಿವೆ. ಅರಣ್ಯ ಇಲಾಖೆಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಕಾಡಾನೆ ದಾಳಿಯಿಂದ ಗಾಯಗೊಂಡ ವೆಂಕಟಮ್ಮ.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎಚ್.ಜೆ.ಶರತ್, ಉಪಾಧ್ಯಕ್ಷ ಕೆ.ಸಿ.ಪ್ರಸನ್ನ ರೆಡ್ಡಿ, ಗೌರವಾಧ್ಯಕ್ಷ ಚಂದ್ರಣ್ಣ, ಕೊಡಗು–ಮೈಸೂರು ಜಿಲ್ಲಾ ಸಂಚಾಲಕ ಡಾ.ಅರುಣ್ ಕುಮಾರ್, ತೊರೆನೂರು ಘಟಕ ಅಧ್ಯಕ್ಷ ಅರುಣ್ ಕುಮಾರ್, ಮಾಜಿ ಸೈನಿಕ ಪುಟ್ಟೇಗೌಡ, ಸ್ಥಳೀಯ ನಿವಾಸಿಗಳಾದ ಗಿರೀಶ್, ಎಚ್.ಟಿ.ನಾಗರಾಜು, ದಿಲೀಪ್ ಪಾಲ್ಗೊಂಡಿದ್ದರು.

## ವಾಹನ ಡಿಕ್ಕಿ: ಅಪರಿಚಿತ ವ್ಯಕ್ತಿ ಸಾವು

**ಕುಶಾಲನಗರ:** ವಾಹನ ಡಿಕ್ಕಿ ಹೊಡೆದ ಪರಿಣಾಮ ಅಪರಿಚಿತ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಸಮೀಪದ ಆನೆಕಾಡು ಬಳಿ ಗುರುವಾರ ರಾತ್ರಿ ನಡೆದಿದೆ. ಆನೆಕಾಡು ಬಳಿ ರಾತ್ರಿ ನಡೆದುಕೊಂಡು ಹೋಗುತ್ತಿದ್ದ ಅಪರಿಚಿತ ವ್ಯಕ್ತಿಗೆ ಪಿಕ್‌ಅಪ್ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಈತ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತ ಮಾಡಿದ ಚಾಲಕ ವಾಹನವನ್ನು ನಿಲ್ಲಿಸದೇ ಪರಾರಿಯಾಗಿದೆ. ಕುಶಾಲನಗರ ಗ್ರಾಮಾಂತರ ಸಂಚಾರಿ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಇಂದು ಡಿಸಿ ಕಚೇರಿ ಎದುರು ಧರಣಿ

ಮಡಿಕೇರಿ, ಫೆ.8– ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ಮತ್ತು ಹೊಸ ಸಂಸತ್‌ನಲ್ಲಿ ಪ್ರತ್ಯೇಕ ಕೊಡವ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಫೆ9 ರಂದು ಬೆಳಗ್ಗೆ 10.30 ಜಿಲ್ಲಾಧಿಕಾರಿ ಕಚೇರಿ ಎದುರು ಶಾಂತಿಯುತ ಧರಣಿ ಸತ್ಯಾಗ್ರಹ ಹಮ್ಮಿಕೊಂಡಿದೆ.



ಎನ್.ಯು.ನಾಚಪ್ಪ

ಅತ್ಯಂತ ಸೂಕ್ಷ್ಮ ಆದಿಮ ಸಂಜಾತ ಕೊಡವ ಬುಡಕಟ್ಟು ಜನಾಂಗಕ್ಕೆ ಸಂವಿಧಾನದ ಅನುಚ್ಛೇದ 244 ಆರ್/ಡಬ್ಲ್ಯೂ 6ನೇ ಮತ್ತು 8ನೇ ಶೆಡ್ಯೂಲ್‌ನಡಿ ಕೊಡವಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ನೀಡಬೇಕು. ಸಿಕ್ಕಿಂ ರಾಜ್ಯದ ಬೌದ್ಧ ಸನ್ಯಾಸಿ ಸಮುದಾಯದ ಸಂಘ ಕ್ಷೇತ್ರದ ಮಾದರಿಯಲ್ಲಿ ಹೊಸ ಸಂಸತ್‌ನಲ್ಲಿ ಪ್ರತ್ಯೇಕ ಕೊಡವ ಪ್ರಾತಿನಿಧ್ಯ ಕಲ್ಪಿಸಬೇಕೆನ್ನುವ ಬೇಡಿಕೆಯ ಮನವಿಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದಾಗಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

# ಕೊಡಗಿನ ಸಮಸ್ಯೆ ಬಗೆಹರಿಸದ ಕೇಂದ್ರ ಸರ್ಕಾರ

ವಿರಾಜಪೇಟೆ, ಫೆ.8–ಕಾಫಿ ಮತ್ತು ಸೈನಿಕರ ನಾಡು ಕೊಡಗು ಜಿಲ್ಲೆ ಕೇಂದ್ರ ಸರ್ಕಾರದ ಧೋರಣೆಯಿಂದ ಸಮಸ್ಯೆಗಳ ನಾಡಾಗಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 10 ವರ್ಷಗಳಲ್ಲಿ ಕೊಡಗು ಜಿಲ್ಲೆಯ ಯಾವುದೇ ಒಂದು ಸಮಸ್ಯೆ ಬಗೆಹರಿಸಿಲ್ಲ ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ಭೋಜಣ್ಣ ಸೋಮಯ್ಯ ಆರೋಪಿಸಿದರು.

ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗಿನಲ್ಲಿ ಮಳೆಗಾಲದಲ್ಲಿ ಪ್ರಕೃತಿ ವಿಕೋಪದಿಂದ ಬರೆ, ಭೂಕುಸಿತ, ಪ್ರವಾಹ, ನೆರೆ ಸಮಸ್ಯೆ, ಅತಿವೃಷ್ಟಿ ಹೆಚ್ಚಾಗಿದೆ. ಹಿಂದೆ ಸಣ್ಣಪುಟ್ಟ ಭೂಕುಸಿತ ಆಗುತ್ತಿತ್ತು. ಆದರೆ, ಕೆಲ ವರ್ಷಗಳಿಂದ ಮಳೆಗಾಲ ಬಂತೆಂದರೆ ಜನರಿಗೆ ಭಯದ ವಾತಾವರಣ ನಿರ್ಮಾಣವಾಗಿದೆ. ಕೊಡಗು ಅರಣ್ಯ ಪ್ರದೇಶ ಆಗಿರುವುದರಿಂದ ಆನೆ, ಹುಲಿ ಸೇರಿದಂತೆ ಇತರೆ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿ ಮಾನವ ಮತ್ತು ವನ್ಯಜೀವಿಗಳ ಸಂಘರ್ಷ ಮಿತಿಮೀರಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಭೋಜಣ್ಣ ಸೋಮಯ್ಯ

ಮಾಜಿ ಸೈನಿಕರಿಗೆ ಭೂಮಿ ಮಂಜೂರಾಗಿಲ್ಲ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗಿನಲ್ಲಿ ಸಮಸ್ಯೆ ಎದ್ದು ಕಾಣುತ್ತಿದೆ. ಆಸ್ಪತ್ರೆಯಲ್ಲಿ ವೈದ್ಯರು, ಪಿಡಿಓಗಳ ಕೊರತೆ, ನೆಟ್‌ವರ್ಕ್ ಸಮಸ್ಯೆ, ಅಧಿಕಾರಿಗಳ ನೇಮಕ, ಸರ್ಕಾರಿ ಬಸ್‌ಗಳ ಸೇವೆ ಸೇರಿದಂತೆ ಮೂಲ ಸೌಕರ್ಯಗಳಿಲ್ಲದಂತಾಗಿದೆ. ಕಂದಾಯ ಇಲಾಖೆಗೆ ಸಂಬಂಧಿಸಿದ ದಾಖಲೆಗಳು ಸರಿಯಾಗಿಲ್ಲ. ಕುಶಾಲನಗರವರೆಗೆ ರೈಲು ಮಾರ್ಗ ಯೋಜನೆ ರೂಪಿಸಲು ಕೇಂದ್ರ ಸರ್ಕಾರದಿಂದ ಸಾಧ್ಯವಾಗಿಲ್ಲ ಎಂದು ದೂರಿದರು.

ಜಿಲ್ಲೆಯಲ್ಲಿ ಸೇನೆ ನೇಮಕಾತಿ ಹಾಗೂ ಪಾಸ್‌ಪೋರ್ಟ್ ಕೇಂದ್ರವಿಲ್ಲ. ಇಲ್ಲಿನ ಯುವಕರು ಬೇರೆ ಜಿಲ್ಲೆಗಳಿಗೆ ಹೋಗುವ ಪರಿಸ್ಥಿತಿ ಬಂದಿದೆ. ಜಿಲ್ಲೆಯ ಮೂಲ ಆರ್ಥಿಕತೆ ಕೃಷಿ ಅವಲಂಬಿತವಾಗಿದ್ದು, ಇಲ್ಲಿನ ಜನರಿಗೆ ಕೃಷಿ ಹೊರತುಪಡಿಸಿ ಬೇರೆ ಆದಾಯ ಮಾರ್ಗವಿಲ್ಲ. ಸ್ವಾತಂತ್ರ್ಯ ನಂತರ ರಾಜಕೀಯ ಸಮಸ್ಯೆಯಿಂದ ಕೊಡಗು ಪ್ರದೇಶ ಮಾಯವಾಗುತ್ತಿದೆ. ಜನಸಾಮಾನ್ಯರ ಕೂಗು ಕೇಂದ್ರಕ್ಕೆ ತಲುಪಲು ಜಿಲ್ಲೆಯಿಂದ ಪ್ರತಿನಿಧಿ ಇಲ್ಲ. ಈ ರಾಜಕೀಯ ಸಮಸ್ಯೆ ಸ್ವಾತಂತ್ರ್ಯ ಪೂರ್ವದಲ್ಲಿ ಶುರುವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಗೆದ್ದು ಬಂದ ಶಾಸಕರಿಗೆ ತಮ್ಮದೇ ಪಕ್ಷದ ಸರ್ಕಾರದಲ್ಲಿ ಮಂತ್ರಿ ಸ್ಥಾನ ದೊರಕದೆ, ಕೊಡಗಿಗೆ ರಾಜಕೀಯವಾಗಿ ಇನ್ನಷ್ಟು ಹಿನ್ನೆಡೆಯಾಗುತ್ತಿದೆ. ಒಟ್ಟಿನಲ್ಲಿ ಕೊಡಗು ಜಿಲ್ಲೆಯ ಸಾಮಾನ್ಯ ಜನರ ಜೀವನ ದುಸ್ತಾರ ಆಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

## ಶತಾಯುಷಿ ಚಿಂಡಮಾಡ ಮಾದಪ್ಪಗೆ ಸನ್ಮಾನ



ತೂಚಮಕೇರಿ ಗ್ರಾಮದ ಶತಾಯುಷಿ ಚಿಂಡಮಾಡ ಮಾದಪ್ಪ ಅವರನ್ನು ಕ್‌ಗ್ಗಟ್ನಾಡ್ ಹಿರಿಯ ನಾಗರಿಕ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು.

ಗೋಣಿಕೊಪ್ಪ, ಫೆ.8–ತೂಚಮಕೇರಿ ಗ್ರಾಮದ ಶತಾಯುಷಿ ಚಿಂಡಮಾಡ ಮಾದಪ್ಪ ಅವರನ್ನು ಕ್‌ಗ್ಗಟ್ನಾಡ್ ಹಿರಿಯ ನಾಗರಿಕ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು.

ಟೈಲರಿಂಗ್ ವೃತ್ತಿಯೊಂದಿಗೆ ತೂಚಮಕೇರಿ ಸರ್ಕಾರಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ, ಸಾಮಾಜಿಕ, ರಾಜಕೀಯ, ತೂಚಮಕೇರಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಮಾದಪ್ಪ ಅವರ ಸೇವೆ ಗುರುತಿಸಿ, ಸನ್ಮಾನಿಸಲಾಯಿತು.

ಕ್‌ಗ್ಗಟ್ನಾಡ್ ಹಿರಿಯ ನಾಗರಿಕ ವೇದಿಕೆಯ ಸದಸ್ಯರಾದ ಕಾಟಿಮಾಡ ಜಿಮ್ಮಿ ಅಣ್ಣಯ್ಯ, ಮಂಡೆಚಂಡ ಗಣಪತಿ, ಚೇಂದೀರ ಎಂ.ಬೋಪಣ್ಣ, ಐನಂಡ ಕೆ.ಮಂದಣ್ಣ, ಮಾಚಿಮಾಡ ಲೌಲಿ ಸೋಮಯ್ಯ, ಕೇಚೇಟ್ಟೀರ ಕಾಮುಣಿ ಪೂಣಚ್ಚ, ಮದ್ರೀರ ಸಿ.ಕರುಂಬಯ್ಯ, ಕಾಟಿಮಾಡ ಡಿಕ್ಕಿ ಅಣ್ಣಯ್ಯ, ಮಾಣಿಪಂಡ ಪಾರ್ವತಿ ಜೋಯಪ್ಪ, ಕೊಳ್ಳಿಮಾಡ ಚಿಪ್ಪಿ ಕಾರ್ಯಪ್ಪ, ನೆರೆಯಂಡಮ್ಮನ ಎಸ್. ಸುಬ್ರಮಣಿ, ಚಿಂಡಮಾಡ ಬೋಪಯ್ಯ ಇದ್ದರು.

## ಧ್ರುವಿನ್‌ಗೆ ಕರಾಟೆಯಲ್ಲಿ ತೃತೀಯ ಸ್ಥಾನ



ಮಡಿಕೇರಿ, ಫೆ.8–ನಂಜನಗೂಡಿನಲ್ಲಿ ನಡೆದ 26ನೇ ಶೋರಿನ್ ಕಾಯ್ ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ 8 ವರ್ಷದ ಬಾಲಕರ ವಿಭಾಗದಲ್ಲಿ ಕೊಡಗಿನ ಕೆ.ಎಸ್.ಧ್ರುವಿನ್ ಅಯ್ಯಪ್ಪ ತೃತೀಯ ಸ್ಥಾನ ಗಳಿಸಿದ್ದಾನೆ.

ಹಾಸನದ ನಟರಾಜ್ ಕರಾಟೆ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಧ್ರುವಿನ್ ಹಾಸನದ ಪೋದಾರ್ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಈತ ಕೋಳುಮಾಡಂಡ ಶರಣು ಮಾಚಯ್ಯ, ಬೀನಾ ದಂಪತಿಯ ಪುತ್ರ.

# ಆನೆ ಕಾರಿಡಾರ್‌ನಲ್ಲಿ ವಿದ್ಯುತ್ ಲೈನ್ ಎತ್ತರಿಸಲು ಕ್ರಮ



ಚಾಮರಾಜನಗರ ತಾಲೂಕಿನ ಹರದನಹಳ್ಳಿಯಲ್ಲಿ ನಡೆದ ವಿದ್ಯುತ್ ಸೇವೆ ಮತ್ತು ಸುರಕ್ಷತಾ ಅರಿವು ಸಪ್ತಾಹ ಕಾರ್ಯಕ್ರಮವನ್ನು ಸೆಸ್ಕ್ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ದೃಪದ್ ಉದ್ಘಾಟಿಸಿದರು.

ಚಾಮರಾಜನಗರ, ಫೆ.8– ಪುಣಜನೂರು ಮತ್ತು ಅರಕಲವಾಡಿ ಆನೆ ಕಾರಿಡಾರ್ ಪ್ರದೇಶದಲ್ಲಿ ಎಲ್‌ಟಿಎಸ್ ಕಂಬಗಳ ಲೈನ್‌ಗಳನ್ನು 8 ಮೀಟರ್‌ನಿಂದ 9 ಮೀಟರ್‌ಗೆ ಎತ್ತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸೆಸ್ಕ್‌ನ ಹರದನಹಳ್ಳಿ ಉಪವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ದೃಪದ್ ತಿಳಿಸಿದರು.

ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ ಗುರುವಾರ ನಡೆದ ವಿದ್ಯುತ್ ಸೇವೆ ಮತ್ತು ಸುರಕ್ಷತಾ ಅರಿವು ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸೆಸ್ಕ್ ವ್ಯಾಪ್ತಿಯಲ್ಲಿ ಫೆ.2ರಿಂದ 9ರವರೆಗೆ ವಿದ್ಯುತ್ ಸುರಕ್ಷತಾ ಅರಿವು ಸಪ್ತಾಹ ಹಮ್ಮಿಕೊಳ್ಳಲಾಗಿದೆ. ಗ್ರಾಹಕರಿಗೆ ಸೆಸ್ಕ್‌ನಿಂದ ದೊರೆಯುವ ಯೋಜನೆ, ಸವಲತ್ತು, ಗ್ರಾಹಕರ ಕುಂದುಕೊರತೆ ನಿವಾರಿಸಲಾಗುತ್ತಿದೆ. ಸರ್ಕಾರದ ಯೋಜನೆಗಳಾದ ಗಂಗಾ ಕಲ್ಯಾಣ, ಅಂಬೇಡ್ಕರ್, ವಾಲ್ಮೀಕಿ ಅಭಿವೃದ್ಧಿ ನಿಗಮಗಳ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದರು.

ಮುಂದಿನ ದಿನಗಳಲ್ಲಿ ಸರ್ಕಾರಿ ಜಾಗಗಳಲ್ಲಿ ಸೋಲಾರ್ ಮೂಲಕ ವಿದ್ಯುತ್ ಜನರೇಟ್ ಮಾಡಿ ರೈತರು ಹಾಗೂ ಗ್ರಾಹಕರಿಗೆ ವಿದ್ಯುತ್ ಕಲ್ಪಿಸಲಾಗುವುದು. ಈಗಾಗಲೇ ಹರದನಹಳ್ಳಿ ವ್ಯಾಪ್ತಿಯಲ್ಲಿ ಮಾದರಿ ಗ್ರಾಮ ಯೋಜನೆಯಡಿ ಕಂಬ, ಟಿಸಿ, ವೈರ್‌ಗಳನ್ನು ಬದಲಿಸಲಾಗುವುದು. ಗ್ರಾಹಕರು ವಿದ್ಯುತ್ ಸಂಬಂಧಿಸಿದಂತೆ ಯಾವುದೇ ಸಮಸ್ಯೆ ಇದ್ದರೂ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಪರಿಹರಿಸಿಕೊಳ್ಳುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ದೊಡ್ಡಮೋಳೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಿರ್ಮಲಾ, ಪಿಡಿಓ ಸೀಮಾ, ಶಾಖಾಧಿಕಾರಿ ವಸಂತ್, ಕಂದಾಯ ಹಿರಿಯ ಸಹಾಯಕ ಮಹದೇವಸ್ವಾಮಿ, ಸೆಸ್ಕ್ ಉಪವಿಭಾಗದ ತಾಂತ್ರಿಕ ಇಂಜಿನಿಯರ್ ಪ್ರದೀಪ್, ಪ್ರಾಥಮಿಕ ಸಮಿತಿ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಚನ್ನಂಜಕುಮಾರ್, ಮುಖಂಡರಾದ ಪುಟ್ಟಣ್ಣಿ ಇತರರು ಇದ್ದರು.



ಕೊಳ್ಳೇಗಾಲ ನೂತನ ಡಿವೈಎಸ್‌ಪಿ ಎಂ.ಧರ್ಮೇಂದ್ರ ಅವರಿಗೆ ನಿರ್ಗಮಿತ ಡಿವೈಎಸ್‌ಪಿ ಸೋಮೇಗೌಡ ಅಧಿಕಾರ ಹಸ್ತಾಂತರಿಸಿದರು.

# ಸಂಘದ ಒಂದಿಂಚು ಆಸ್ತಿ ಪರಭಾರೆ ಆಗಿಲ್ಲ

## ● ಆದಿಕರ್ನಾಟಕ ಅಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ನಂಜುಂಡಸ್ವಾಮಿ ಸ್ಪಷ್ಟನೆ ● ಚಾ.ನಗರದಲ್ಲಿ ಸಮುದಾಯದ ಸಭೆ



ಚಾಮರಾಜನಗರದ ಅಂಬೇಡ್ಕರ್ ವಿದ್ಯಾರ್ಥಿನಿಲಯ ಆವರಣದಲ್ಲಿ ಆದಿಕರ್ನಾಟಕ ಅಭಿವೃದ್ಧಿ ಸಂಘದ ಎಸ್.ನಂಜುಂಡಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಸ್ಪಷ್ಟೀಕರಣ ಸಭೆಯಲ್ಲಿ ಸಮುದಾಯದ ಯಜಮಾನರು, ಮುಖಂಡರು ಭಾಗವಹಿಸಿದ್ದರು.

ಚಾಮರಾಜನಗರ, ಫೆ.8– ತಾಲೂಕು ಆದಿಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ಒಂದು ಇಂಚು ಕೂಡ ಪರಭಾರೆ ಆಗಿಲ್ಲ ಎಂದು ಸಂಘದ ಅಧ್ಯಕ್ಷ ಹಾಗೂ ಮಾಜಿ ನಗರಸಭಾ ಅಧ್ಯಕ್ಷ ಎಸ್.ನಂಜುಂಡಸ್ವಾಮಿ ಸ್ಪಷ್ಟಪಡಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಾರ್ವಜನಿಕ ವಿದ್ಯಾರ್ಥಿನಿಲಯದ ಆವರಣದಲ್ಲಿ ತಾಲೂಕು ಆದಿಕರ್ನಾಟಕ ಸಮುದಾಯದ ಯಜಮಾನರು, ಮುಖಂಡರು ಹಾಗೂ ಅಂಬೇಡ್ಕರ್ ಸಂಘಗಳ ಪದಾಧಿಕಾರಿಗಳ ಸಮಾಕ್ಷಮದಲ್ಲಿ ನಡೆದ ಸ್ಪಷ್ಟೀಕರಣ ಸಭೆಯಲ್ಲಿ ಮಾತನಾಡಿದ ಅವರು, ಸಂಘದ ಆಸ್ತಿಯನ್ನು ನನ್ನ ತಮ್ಮನ ಮಕ್ಕಳಿಗೆ ಪರಭಾರೆ ಮಾಡಿಕೊಂಡಿದ್ದಾರೆ ಎಂದು ನನ್ನ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ. ಇದು ಸತ್ಯಕ್ಕೆ ದೂರ. ನಾನು ಅಧ್ಯಕ್ಷನಾದ ಬಳಿಕ ಸಂಘದ ಆಸ್ತಿಯನ್ನು ಸಂರಕ್ಷಿಸಲು ಶ್ರಮಿಸಿದ್ದೇನೆ. ಬಂದ ಆದಾಯದಿಂದ ಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಿದ್ದೇನೆ. ನನ್ನ ಮೇಲಿನ ಆರೋಪ ಸಾಬೀತು ಪಡಿಸಿದರೆ, ರಾಜಕೀಯ ನಿವೃತ್ತಿ ಘೋಷಣೆ ಮಾಡುವುದಾಗಿ ಸವಾಲು ಹಾಕಿದರು.

ನನ್ನ ವಿರುದ್ಧ ಆರೋಪ ಮಾಡಿರುವವರ ವಿರುದ್ಧ ಈಗಾಗಲೇ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದೇನೆ. ಈಗ ನನ್ನ ಸಮುದಾಯದ ಜನರಿಗೆ ವಾಸ್ತವ ಸತ್ಯ ಹೇಳಲು ಸಭೆ ಕರೆದಿದ್ದೇನೆ. ಈ ಸಂಬಂಧ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿ, ವಿಚಾರಣೆ ಮಾಡಲಾಗುತ್ತಿದೆ ಎಂದರು.

ಸಂಘಕ್ಕೆ ಪ್ರತಿ ಗ್ರಾಮಗಳಲ್ಲೂ ಇಬ್ಬರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲು ಕ್ರಮವಹಿಸಲಾಗಿದೆ. ದೊಡ್ಡ ಗ್ರಾಮಗಳಲ್ಲಿ 4 ರಿಂದ 6 ಸದಸ್ಯರನ್ನು ಮಾಡಲಾಗುವುದು. ನಾವೇ ಖುದ್ದಾಗಿ ಗ್ರಾಮಗಳಿಗೆ ಹೋಗಿ ಸದಸ್ಯರನ್ನು ಮಾಡಲಾಗುವುದು. ಆರೋಪ ಮಾಡುವವರು ಸರ್ವೆ ನಂ:295ಸಿ ರಲ್ಲಿ ಜಾಗ ಎಲ್ಲಿದೆ ಎಂಬುದನ್ನು ಸಾಬೀತು ಪಡಿಸಲಿ ಸವಾಲು ಹಾಕಿದರು.

ತಾಲೂಕಿನ ಜ್ಯೋತಿಗೌಡನಪುರ ಗ್ರಾಮದಲ್ಲಿ ನಮ್ಮ ಸಂಘಕ್ಕೆ ಸೇರಿದ 50 ಎಕರೆ ಜಮೀನಿದ್ದು, ಅದರಲ್ಲಿ ಈಗಾಗಲೇ ಸುಮಾರು 25 ಎಕರೆಯಷ್ಟು ಜಮೀನನ್ನು ಸಂಘಕ್ಕೆ ಅಳತೆ ಮಾಡಿಸಿಕೊಳ್ಳಲಾಗಿದೆ. ಅಲ್ಲದೇ, ಸಂಘದ ಜಾಗವನ್ನು ಏಕೆ ಅಧ್ಯಕ್ಷರ ಹೆಸರಲ್ಲಿ ಖಾತೆ ಪಡಿಸಲಾಗಿದೆಯೇ ಹೊರತು ಯಾರ ಹೆಸರಿನಲ್ಲೂ ಖಾತೆ ಮಾಡಿಲ್ಲ. ನಗರದ ರಾಮಚಂದ್ರ ವಿದ್ಯಾಸಂಸ್ಥೆಯಲ್ಲಿ ಸಂಘದ ಹೆಸರಿಗೆ 1.4 ಗುಂಟೆ ಜಾಗ ಇದೆ. ಕೂಡ್ಲೂರು ಗ್ರಾಮದಲ್ಲೂ 15 ಎಕರೆ ಜಮೀನಿದ್ದು, ಅದನ್ನು ಸಂಘದ ಸುಪರ್ದಿಗೆ ಪಡೆದುಕೊಳ್ಳಲು ಕ್ರಮ ವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

> ಗಡಿಕಟ್ಟೆ ಯಜಮಾನರು ಹಾಗೂ ನಿರ್ದೇಶಕರು ಒಂದಡೆ ಕುಳಿತು ಸಮಸ್ಯೆಗೆ ಇತಿಶ್ರೀ ಹಾಡಬೇಕು. ನಾಳೆ ಪಾದಯಾತ್ರೆ ಮಾಡುವವರು ನಮ್ಮವರೇ, ಇಂದು ಸಭೆಗೆ ಬಂದಿರುವವರು ನಮ್ಮವರೇ. ಹೀಗಾಗಿ ಸಮಸ್ಯೆ ಜಟಿಲವಾಗಬಾರದು. ಇದು ಸಮುದಾಯದ ಅಭಿವೃದ್ಧಿಗೆ ಮಾರಕವಾಗುತ್ತದೆ. ಪಾದಯಾತ್ರೆಯಲ್ಲಿ ಎಲ್ಲರನ್ನು ಸ್ವಾಗತಿಸಿ, ಅವರ ತಲೆಯಲ್ಲಿರುವ ಕೆಲ ಅನುಮಾನಗಳನ್ನು ಪರಿಹರಿಸಿ ಸಂಘಕ್ಕೆ ಸೇರಿಸಿಕೊಂಡು ದೊಡ್ಡ ಚುನಾವಣೆ ಮಾಡೋಣ.
> –ಎಸ್.ಮಹದೇವಯ್ಯ, ಆದಿಕರ್ನಾಟಕ ಅಭಿವೃದ್ಧಿ ಸಂಘದ ನಿರ್ದೇಶಕ

ಬಸವಪುರ ನಾಗರಾಜು ಮಾತನಾಡಿ, ಜ್ಯೋತಿಗೌಡನಪುರ ಹಾಗೂ ಕೂಡ್ಲೂರು ಗ್ರಾಮದ ಜಮೀನನ್ನು ಸಂಘಕ್ಕೆ ಪಡೆದುಕೊಳ್ಳಲು ಸಮುದಾಯದಿಂದ ಕಂದಾಯ ಸಚಿವ ಕೃಷ್ಣಭೈರೇಗೌಡರ ಬಳಿ ಒಂದು ನಿಯೋಗ ಹೋಗಿ ಮನವಿ ಸಲ್ಲಿಸುವುವಂತೆ ಸಲಹೆ ನೀಡಿದರು. ಸಭೆಯಲ್ಲಿ ಸಂಘದ ಕಾರ್ಯದರ್ಶಿ ರಾಜಗೋಪಾಲ್, ಖಜಾಂಚಿ ಸಿ.ಕೆ.ರವಿಕುಮಾರ್, ನಿರ್ದೇಶಕರಾದ ಮಲ್ಲಣ್ಣ, ಎಂ.ಎಸ್.ಮಾದಯ್ಯ, ಮೂಡ್ನಾಕೂಡು ಪ್ರಕಾಶ್, ಸಿ.ಕೆ.ರವಿಕುಮಾರ್, ವೆಂಕಟೇಶ, ಕಾಂತರಾಜು, ಎಸ್.ಪುಟ್ಟಸ್ವಾಮಿ, ಪಾರ್ವತಮ್ಮ, ರಂಗಸ್ವಾಮಿ ಹಾಗೂ ಜನಾಂಗದ ಕಟ್ಟೆ, ಗಡಿ ಮನೆ ಯಜಮಾನರು, ಮುಖಂಡರು ಹಾಜರಿದ್ದರು.

# ಅಮಚವಾಡಿ, ಪುಣಜನೂರಿನಲ್ಲಿ ಜಾಥಾಗೆ ಸ್ವಾಗತ

ಚಾಮರಾಜನಗರ, ಫೆ.8– ಸಂವಿಧಾನ ದಿನಾಚರಣೆ ಅಂಗವಾಗಿ ತಾಲೂಕಿನ ಅಮಚವಾಡಿ, ಪುಣಜನೂರು, ಹರದನಹಳ್ಳಿ ಹಾಗೂ ಮತ್ತಿತರ ಗ್ರಾಮಗಳಿಗೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾವನ್ನು ಸ್ವಾಗತಿಸಲಾಯಿತು.

ಅಮಚವಾಡಿ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಸ್ತಬ್ಧಚಿತ್ರದ ಮೆರವಣಿಗೆ ನಡೆಯಿತು. ಗ್ರಾಮದ ಮುಖ್ಯ ದ್ವಾರದಲ್ಲಿ ಸ್ವಾಗತ ಕೋರಿದ ಬಳಿಕ ನಡೆದ ಸಮಾರಂಭದಲ್ಲಿ ಗ್ರಾಪಂ ಅಧ್ಯಕ್ಷೆ ರಾಧಾ ತೇಜಸ್ವಿನಿ ಮಾತನಾಡಿ, ಅಂಬೇಡ್ಕರ್ ಸಂವಿಧಾನದ ಮೂಲಕ ಮಹಿಳೆಯರು ಹಾಗೂ ಶೋಷಿತ ಸಮುದಾಯಗಳಿಗೆ ನ್ಯಾಯ ಕಲ್ಪಿಸಿಕೊಟ್ಟ ಧೀಮಂತ ನಾಯಕ ಎಂದರು. ಗ್ರಾಪಂ ಉಪಾಧ್ಯಕ್ಷ ಕುಮಾರ್, ಸದಸ್ಯ ಶಿವಣ್ಣ, ಪಿಡಿಓ ಶ್ರೀನಿವಾಸ್ ಉಪಸ್ಥಿತರಿದ್ದರು.

ಪುಣಜನೂರಿನಲ್ಲಿ ಡೊಳ್ಳು ಕುಣಿತ ಕಲಾವಿದರು, ಮಕ್ಕಳು, ಕಳಶ ಹೊತ್ತ ಮಹಿಳೆಯರು ಜಾಥಾವನ್ನು ಸ್ವಾಗತಿಸಿದರು.




ಚಾಮರಾಜನಗರ ತಾಲುಕಿನ ಅಮಚವಾಡಿಯಲ್ಲಿ ಸಂವಿಧಾನ ಜಾಗೃತಿ ಜಾಥಾವನ್ನು ಸ್ವಾಗತಿಸಲಾಯಿತು.

ಆಶಾ, ಅಂಗನವಾಡಿ ಕಾರ್ಯಕರ್ತೆಯರು ಹೆಚ್ಚು ಸಂಖ್ಯೆಯಲ್ಲಿ ಉತ್ಸಾಹದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡರು. ಗ್ರಾಪಂ ಅಧ್ಯಕ್ಷೆ ಶಿವಿಬಾಯಿ ಗಣೇಶ ನಾಯ್ಕ, ಉಪಾಧ್ಯಕ್ಷ ರಾಚಯ್ಯ, ನೋಡಲ್ ಅಧಿಕಾರಿ ಕೆ.ಪಿ.ಮಹದೇವಸ್ವಾಮಿ, ಪಿಡಿಓ ಸಿದ್ದರಾಜು, ಶಿಕ್ಷಕಿ ವಸಂತ ಭಾಗವಹಿಸಿದ್ದರು.

ಹರದನಹಳ್ಳಿಯಲ್ಲಿ ಶಾಲಾ ವಿದ್ಯಾರ್ಥಿಗಳು ಅದ್ದೂರಿ ಸ್ವಾಗತ ಕೋರಿದರು. ಅಂಬೇಡ್ಕರ್ ವೇಷಭೂಷಣ ತೊಟ್ಟ ಮಕ್ಕಳು ಮೆರವಣಿಗೆಯಲ್ಲಿ ಗಮನ ಸೆಳೆದರು. ಹುಲಿವೇಷ ಕುಣಿತದ ಕಲಾವಿದರ ನೃತ್ಯ ಆಕರ್ಷಕವಾಗಿತ್ತು.

ಗ್ರಾಪಂ ಅಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷೆ ಯಶೋಧಮ್ಮ, ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ, ಗ್ರಾಪಂ ಸದಸ್ಯರಾದ ರಮೇಶ್, ಪುಟ್ಟರಾಜು, ಮಹೇಶ್ವರಿ, ಪಿಡಿಓ ರಾಜೇಶ್ವರಿ ಉಪಸ್ಥಿತರಿದ್ದರು.

# ಚಾವಣಿಯ ಗಾರೆಚಕ್ಕೆ ಬಿದ್ದು ಮಕ್ಕಳಿಗೆ ಸಣ್ಣಪುಟ್ಟ ಗಾಯ

ಚಾಮರಾಜನಗರ, ಫೆ.8–ತಾಲೂಕಿನ ಬಂಡಿಗೆರೆ ಗ್ರಾಮದಲ್ಲಿ ಗುರುವಾರ ಅಂಗನವಾಡಿ ಕೇಂದ್ರದ ಚಾವಣಿಯ ಗಾರೆಯ ಚಕ್ಕೆಗಳು ಉದುರಿ ಬಿದ್ದು ನಾಲ್ವರು ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಗ್ರಾಮದ ಅಶೋಕ, ಲಂಕೇಶ, ಜ್ಯೋತಿ ಮತ್ತು ಅರ್ಜುನ ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿವೆ ಈ ಅಂಗನವಾಡಿ ಕೇಂದ್ರದ ಕಟ್ಟಡ ಹಳೆಯದಾಗಿದ್ದು, ಒಳ ಭಾಗದ ಚಾವಣಿಯ ಗಾರೆ ಚಕ್ಕೆಗಳು ಉದುರಿವೆ. ತಕ್ಷಣ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಹಾಗೂ ಸಹಾಯಕಿ ಮಕ್ಕಳನ್ನು ಹೊರಗೆ ಕರೆತಂದರು.

ಗಾಯಗೊಂಡ ಮಕ್ಕಳಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಯಿತು. ಗ್ರಾಪಂ ಅಧ್ಯಕ್ಷ ಮಂಜುನಾಥ್, ಸದಸ್ಯ ಕೇಶವಮೂರ್ತಿ, ಪಿಡಿಓ ಮಹೇಶ್ವರಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಇದೇ ವೇಳೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಶಿಥಿಲಗೊಂಡಿರುವ ಅಂಗನವಾಡಿ ಕೇಂದ್ರದ ಕಟ್ಟಡವನ್ನು ದುರಸ್ತಿಪಡಿಸುವಂತೆ ಪೋಷಕರು ಆಗ್ರಹಿಸಿದರು.



ಬಂಡಿಗೆರೆ ಅಂಗನವಾಡಿ ಕೇಂದ್ರದ ಚಾವಣಿಯ ಗಾರೆಯ ಚಕ್ಕೆಗಳು ಉದುರಿರುವುದು.

## ಅನುರಾಧಾ ನಿಧನ



ಕೊಳ್ಳೇಗಾಲ, ಫೆ.8– ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಶಂಕರ ನಾರಾಯಣ್ ಗುಪ್ತ ಅವರ ಪತ್ನಿ ಅನುರಾಧಾ(53) ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರು ಪತಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಇಲ್ಲಿನ ಕಾವೇರಿ ನದಿ ದಡದ ಆರ್ಯವೈಶ್ಯ ಜನಾಂಗದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

**ಸಂತಾಪ:** ಶಾಸಕ ಎ.ಆರ್.ಕೃಷ್ಣಮೂರ್ತಿ, ಆರ್ಯವೈಶ್ಯ ಸಂಘದ ಅಧ್ಯಕ್ಷ ಕುಮಾರಕೃಷ್ಣ, ನಗರಸಭೆ ಸದಸ್ಯರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ಒಂದನೇ ಪುಟದಿಂದ

## ಹರಿದು ಬಂದವು ಸಾವಿರಾರು ಅಹವಾಲು

ಕುಳಿತ್ತಿದ್ದರು. ಇಂದು ಬೆಳಗ್ಗೆಯೂ ಜನರು ಆಗಮಿಸಿದ್ದು, ಪರ ಊರುಗಳಿಂದ ಬಂದವರಿಗೆ ರೈಲ್ವೆ ನಿಲ್ದಾಣ ಮತ್ತು ಮೆಜೆಸ್ಟಿಕ್ ಬಸ್ ನಿಲ್ದಾಣದಿಂದ ವಿಧಾನಸೌಧಗೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿತ್ತು. ಅರ್ಜಿ ಸ್ವೀಕರಿಸಲು 36 ಇಲಾಖೆಗಳ ಪ್ರತ್ಯೇಕ ಕೌಂಟರ್‌ಗಳನ್ನು ತೆರೆಯಲಾಗಿತ್ತು. ವಿಕಲಚೇತನರು ಮತ್ತು ವೃದ್ಧರಿಗಾಗಿ ಪ್ರತ್ಯೇಕ ಕೌಂಟರ್ ತೆರೆಯಲಾಗಿದ್ದು, ಅಲ್ಲಿ ವ್ಹೀಲ್‌ಚೇರ್ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಜನಸ್ಪಂದನಾದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಬೆಳಗಿನ ಉಪಹಾರ ಮತ್ತು ಮಧ್ಯಾಹ್ನದ ಊಟ ಹಾಗೂ ನೀರನ್ನು ಸ್ಥಳಕ್ಕೇ ತಲುಪಿಸಲಾಯಿತು.

ಇಂದು ಸಲ್ಲಿಕೆಯಾದ ಅರ್ಜಿಗಳ ಪೈಕಿ ಕಂದಾಯ ಇಲಾಖೆಯದ್ದೇ ಸಿಂಹಪಾಲು. ಈ ಇಲಾಖೆಗೆ ಸಂಬಂಧಿಸಿದಂತೆ 3100 ಅರ್ಜಿಗಳು, 1500 ಅರ್ಜಿಗಳೊಂದಿಗೆ ವಸತಿ ಇಲಾಖೆ ದ್ವಿತೀಯ ಸ್ಥಾನದಲ್ಲಿದ್ದರೆ, ಮೂರನೇ ಸ್ಥಾನದಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಅರ್ಜಿಗಳ ಸಂಖ್ಯೆ 903. ಇನ್ನುಳಿದಂತೆ ಹಿಂದುಳಿದ ವರ್ಗಗಳ ಇಲಾಖೆ 543. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ 65, ಸಾರಿಗೆ ಇಲಾಖೆ 163, ಸಹಕಾರ ಇಲಾಖೆ 138, ಸಮಾಜ ಕಲ್ಯಾಣ ಇಲಾಖೆ 870, ಸಣ್ಣ ನೀರಾವರಿ ಇಲಾಖೆ 37, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ 670, ವೈದ್ಯಕೀಯ ಶಿಕ್ಷಣ 68, ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ 5, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ 11, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ 217, ಲೋಕೋಪಯೋಗಿ ಇಲಾಖೆ 62, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ 4, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ 18, ಮೂಲ ಸೌಕರ್ಯ ಅಭಿವೃದ್ಧಿ ಇಲಾಖೆ 6, ಮುಖ್ಯ ಕಾರ್ಯದರ್ಶಿಯವರ ಕಚೇರಿ 1, ಪಶು ಸಂಗೋಪನಾ ಮತ್ತು ಮೀನುಗಾರಿಕಾ ಇಲಾಖೆ 144, ಪ್ರವಾಸೋದ್ಯಮ ಇಲಾಖೆ 22, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ 88, ನಗರಾಭಿವೃದ್ಧಿ ಇಲಾಖೆ 600, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ 143, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ 520, ಗೃಹ ಇಲಾಖೆ 384, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ 256, ಕೃಷಿ ಇಲಾಖೆ 88, ಕಾರ್ಮಿಕ ಇಲಾಖೆ 64, ಕಾನೂನು ಇಲಾಖೆ 17, ಕನ್ನಡ ಮತ್ತು ಸಂಸ್ಕೃತಿ 49, ಉನ್ನತ ಶಿಕ್ಷಣ 185, ಇಂಧನ ಇಲಾಖೆ 250, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ 280, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ 106, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಸಂಬಂಧಿಸಿದಂತೆ 120 ಅರ್ಜಿಗಳು ಸಲ್ಲಿಕೆಯಾದವು.

### ಮರುಕ ಹುಟ್ಟಿಸುವ ಅಹವಾಲುಗಳು

**ಬೆಂಗಳೂರು ನಗರದ** ನೂರ್ ಫಾತಿಮಾ ಎಂಬ ವಿದ್ಯಾರ್ಥಿನಿ ಖಜಕಿಸ್ತಾನದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯಲು ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದಿಂದ ಶೈಕ್ಷಣಿಕ ಸಾಲ ಯೋಜನೆಯಡಿ 10 ಲಕ್ಷ ರೂ.ಗಳ ಮಂಜೂರಾತಿ ಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿತರಿಸಿದರು.

**ರಾಮನಗರ ಜಿಲ್ಲೆಯ** ವಿಜಯಕುಮಾರ್ ಎಂಬುವರು ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದು, ಆರ್ಥಿಕ ಸಮಸ್ಯೆಯಿಂದಾಗಿ ಕಿಡ್ನಿ ಕಸಿ ಚಿಕಿತ್ಸೆ ಪಡೆದುಕೊಳ್ಳಲು ಸಾಧ್ಯವಾಗಿಲ್ಲ ಎಂದು ಅಳಲು ತೋಡಿಕೊಂಡಾಗ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸ್ಥಳದಲ್ಲೇ ಅವರಿಗೆ 4 ಲಕ್ಷ ರೂ. ಸಹಾಯ ಧನ ಮಂಜೂರು ಮಾಡಿದರು. ವಿಜಯಪುರ ಜಿಲ್ಲೆ ಸಿಂಧಗಿ ತಾಲೂಕಿನ ಬಿರಾದರ್ ಅವರಿಗೆ ಬೋನ್ ಮ್ಯಾರೋ ಕಸಿ ಚಿಕಿತ್ಸೆಗಾಗಿ 4 ಲಕ್ಷ ರೂ., ತುಮಕೂರು ಜಿಲ್ಲೆಯ 8 ವರ್ಷದ ಶಾಂಭವಿ ಎಂಬ ಮಗುವಿನ ಶ್ರವಣ ಸಾಧನಕ್ಕಾಗಿ 50 ಸಾವಿರ ರೂ.ಗಳನ್ನು ಸ್ಥಳದಲ್ಲೇ ಮಂಜೂರು ಮಾಡಿದರು.

**ಶ್ರೀರಂಗಪಟ್ಟಣ ತಾಲೂಕಿನ** ಮೀನಾ ಎಂಬ ವಿಕಲಚೇತನ ಮಹಿಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದೆ ತಮ್ಮ ಮಗನ ಶಿಕ್ಷಣಕ್ಕೆ ನೆರವು ನೀಡುವಂತೆ ಅಂಗಲಾಚಿದರಲ್ಲದೆ, ತನ್ನಿಂದ ಮಗನನ್ನು ಸಾಕಲಾಗುತ್ತಿಲ್ಲ. ದಯಾಮರಣ ಕೊಡಿ ಎಂದು ಕಣ್ಣೀರ ಕೋಡಿ ಹರಿಸಿದರು. ತನ್ನ ಪತಿ ಕೋವಿಡ್‌ನಲ್ಲಿ ಸಾವನ್ನಪ್ಪಿದ್ದು, ಆ ಸಂದರ್ಭದಲ್ಲಿ ತಮ್ಮ ಮನೆಗೆ ಬಂದಿದ್ದ ಸಂಸದೆ ಸುಮಲತಾ, ಅವರ ಪುತ್ರ ಅಭಿಷೇಕ್ ಅವರು ನನ್ನ ಮಗನ ಸಂಪೂರ್ಣ ವಿದ್ಯಾಭ್ಯಾಸವನ್ನು ನೋಡಿಕೊಳ್ಳುವುದಾಗಿ ಭರವಸೆ ನೀಡಿದ್ದರು. ನನಗೆ ಸುಮಲತಾ ಅವರಿಂದಲೂ ಸಹಾಯವಾಗಿಲ್ಲ. ನೀವಾದರೂ ಸಹಾಯ ಮಾಡಿ ಎಂದು ಅಂಗಲಾಚಿದರು.

**ಮೈಸೂರಿನ ಉತ್ತನಹಳ್ಳಿ ಗ್ರಾಮದ** ಶಾರದಮ್ಮ ಎಂಬ ವೃದ್ಧೆ ತನಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಅವರಿಗೆ ಮದುವೆ ಮಾಡಿಕೊಡಲಾಗಿದೆ. ನಾನು ಯಾರ ಮನೆಗೂ ಹೋಗುತ್ತಿಲ್ಲ. ಮನೆಗೆಲಸ ಮಾಡಿಕೊಂಡಿದ್ದೇನೆ. ಪಿಂಚಣಿ ಮತ್ತು ನೀವು ತಿಂಗಳಿಗೆ ಕೊಡುವ 2 ಸಾವಿರ ರೂ.ಗಳಿಂದ ಜೀವನ ಸಾಗಿಸುತ್ತಿದ್ದೇನೆ. ದಯವಿಟ್ಟು ನನಗೆ ಒಂದು ಸೂರು ಮಾಡಿಕೊಡಿ ಎಂದು ಮನವಿ ಮಾಡಿದರು.

**ಮೈಸೂರು ಜಿಲ್ಲೆಯ** ವೃದ್ಧೆಯೊಬ್ಬರು ತನ್ನ ಮಗನಿಗೆ ಉದ್ಯೋಗ ಕೊಡಿಸುವಂತೆ ಮುಖ್ಯಮಂತ್ರಿಗಳ ಕಾಲಿಗೆ ಬಿದ್ದು, ಅಂಗಲಾಚಿದರು. ಅವರಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ವೃದ್ಧೆಯ ಮಗನಿಗೆ ಯಾವುದಾದರೂ ಕೆಲಸ ಕೊಡಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

**ಚಾಮರಾಜನಗರದವನಾದ** ಕಾರ್ಮಿಕ ನಾಗರಾಜು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ಅಪಘಾತದಲ್ಲಿ ಕಾಲು ಕಳೆದುಕೊಂಡಿದ್ದಾನೆ. ಈತ ತನಗೆ ಪಿಂಚಣಿ ಬರುತ್ತಿಲ್ಲ. ಜೀವನ ನಡೆಸುವುದೇ ಕಷ್ಟಕರವಾಗಿದೆ ಎಂದು ಮುಖ್ಯಮಂತ್ರಿಗಳ ಬಳಿ ಅಳಲು ತೋಡಿಕೊಂಡರು. ಈತನ ಪ್ರಕರಣದ ಬಗ್ಗೆ ತ್ವರಿತ ಗತಿಯಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚಿಸಿದರು.

**ಚಿಕ್ಕಬಳ್ಳಾಪುರ ಜಿಲ್ಲೆಯ** ಶಿಕ್ಷಕಿ ಸುಷ್ಮಾ ಅವರು, ತಮ್ಮ ತಾಯಿ ಕ್ಯಾನ್ಸರ್ ಪೀಡಿತರಾಗಿದ್ದು, ತಾವು ಬೇರೆ ಊರಿನಲ್ಲಿ ಕೆಲಸ ಮಾಡುತ್ತಿರುವುದರಿಂದ ತಾಯಿಯನ್ನು ನೋಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ದಯವಿಟ್ಟು ವರ್ಗಾವಣೆ ಮಾಡಿಕೊಡಿ ಎಂದು ಕಣ್ಣೀರು ಸುರಿಸಿದರು.

**ಹುಬ್ಬಳ್ಳಿ ಜಿಲ್ಲೆಯ ಗ್ರಾಮವೊಂದರ** ವಿದ್ಯಾರ್ಥಿನಿಯರ ತಂಡ ಮುಖ್ಯಮಂತ್ರಿಗಳನ್ನು ಪ್ರತ್ಯೇಕವಾಗಿ ಭೇಟಿ ಮಾಡಬೇಕೆಂದು ಮನವಿ ಮಾಡಿದ ಮೇರೆಗೆ ಅಧಿಕಾರಿಗಳು ಅದಕ್ಕೆ ಅವಕಾಶ ಕಲ್ಪಿಸಿದ್ದರು. ತಮ್ಮ ಗ್ರಾಮದಿಂದ ಪ್ರೌಢಶಾಲೆಗೆ 4–5 ಕಿ.ಮೀ. ನಡೆದುಕೊಂಡು ಹೋಗಬೇಕಾಗಿದೆ. ಸರಿಯಾಗಿ ಬಸ್ ವ್ಯವಸ್ಥೆಯೂ ಇಲ್ಲ. ಹೆತ್ತವರು ಶಾಲೆಗೆ ಹೋಗುವುದೇ ಬೇಡ ಅನ್ನುತ್ತಿದ್ದಾರೆ. ದಯವಿಟ್ಟು ನಮ್ಮ ಊರಿನಲ್ಲೇ ಪ್ರೌಢಶಾಲೆ ಕಟ್ಟಿಸಿಕೊಡಿ ಎಂದು ಮನವಿ ಮಾಡಿದರು. ವಿದ್ಯಾರ್ಥಿನಿಯರ ಮನವಿಯನ್ನು ಸಹಾನುಭೂತಿಯಿಂದ ಆಲಿಸಿದ ಮುಖ್ಯಮಂತ್ರಿಗಳು, ಆ ಗ್ರಾಮದಲ್ಲಿ ಪ್ರೌಢಶಾಲೆ ಮಂಜೂರು ಮಾಡಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗೆ ಸೂಚಿಸಿದರು.

**ಕೋಲಾರ ಜಿಲ್ಲೆಯ** ವಿಶೇಷಚೇತನರಾದ ಸತ್ಯನಾರಾಯಣ ಎಂಬುವರು ಡಯಾಲಿಸಿಸ್‌ಗೆ ಮುಖ್ಯಮಂತ್ರಿಗಳಿಂದ ನೆರವು ನೀಡುವಂತೆ ಕೋರಿದಾಗ ಆದಷ್ಟು ನೆರವು ನೀಡುವಂತೆ ಅಧಿಕಾರಿಗಳಿಗೆ ಸಿಎಂ ಸೂಚಿಸಿದರು. ಬೆಂಗಳೂರಿನ ಜೆ.ಜೆ. ನಗರದ ಎಂ.ಶ್ರೀಧರ್ ಅವರ ಎರಡು ಕಿಡ್ನಿಗಳು ವಿಫಲವಾಗಿದ್ದು, ಮುಖ್ಯಮಂತ್ರಿಗಳ ಪರಿಹಾರ ನಿಧಿಗಾಗಿ ಅವರು ಅರ್ಜಿ ಸಲ್ಲಿಸಿದಾಗ ಅವರಿಗೆ ತಕ್ಷಣವೇ ನೆರವು ನೀಡಲು ಕ್ರಮ ಕೈಗೊಳ್ಳುವಂತೆ ಸಿಎಂ ಸೂಚಿಸಿದರು.

**ರಾಯಚೂರಿನ** ಮೂರು ವರ್ಷದ ಮಗು ಸುಶಾಂತ್ ಥಲಸ್ಸೆಮಿಯಾ ಎಂಬ ಕಾಯಿಲೆಗೆ ತುತ್ತಾಗಿದ್ದು, ಆತನನ್ನು ಮುಖ್ಯಮಂತ್ರಿಗಳ ಬಳಿ ಕರೆತಂದಿದ್ದ ತಾಯಿ ಲಲಿತಾ ಎಂಬುವರು ತನ್ನ ಮಗನನ್ನು ಉಳಿಸಿಕೊಳ್ಳಲು ಆರ್ಥಿಕ ಸಹಾಯ ನೀಡಬೇಕೆಂದು ಕಣ್ಣೀರು ಸುರಿಸಿದರಲ್ಲದೆ, ಮಗನ ರಕ್ಷಣೆಗೆ ಸಹಕರಿಸಿ, ಸಾಧ್ಯವಿಲ್ಲದಿದ್ದರೆ ದಯಾಮರಣ ನೀಡುವಂತೆ ಅಂಗಲಾಚಿದರು.

**ಮೈಸೂರಿನ** ಸರ್ಕಾರಿ ಆಯುರ್ವೇದ ಕಾಲೇಜಿನ ಎನ್.ರಾಜೇಶ್ ಎಂಬುವರು ತಮ್ಮ ಕೆಲಸವನ್ನು ಖಾಯಂ ಮಾಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.

### ಅಹವಾಲುಗಳಿಗೆ ತಿಂಗಳಲ್ಲಿ ಪರಿಹಾರ ಕಲ್ಪಿಸಿ

ಜನಸ್ಪಂದನಾ ಕಾರ್ಯಕ್ರಮದಲ್ಲಿ ಜನರು ಸಲ್ಲಿಸಬಹುದಾಗಿದೆ. ಕಾನೂನುಬದ್ಧವಾದ ಸಮಸ್ಯೆಗಳಿಗೆ ನಮ್ಮ ಸರ್ಕಾರ ಪರಿಹಾರ ಒದಗಿಸಲಿದೆ ಎಂದು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರು. ಸಮಸ್ಯೆ ಬಗೆಹರಿಸಲು ಕಾನೂನು ತೊಡಕು ಇದ್ದಲ್ಲಿ, ಈ ಕುರಿತು ಅರ್ಜಿದಾರರಿಗೆ ಕಾರಣ ಸಹಿತ ಹಿಂಬರಹ ನೀಡಲಾಗುವುದು ಎಂದು ತಿಳಿಸಿದರು.

**ಆಡಳಿತ ವ್ಯವಸ್ಥೆ ಚುರುಕುಗೊಳ್ಳಬೇಕು:** ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂಬ ಆಶಯದೊಂದಿಗೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸರ್ಕಾರ ರೂಪಿಸುವ ಜನೋಪಯೋಗಿ ಕಾರ್ಯಕ್ರಮಗಳು ನೇರವಾಗಿ ಫಲಾನುಭವಿಗಳಿಗೆ ತಲುಪಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಎಂಟು ತಿಂಗಳೊಳಗಾಗಿ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಬಿಜೆಪಿಯವರು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ. ಕರ್ನಾಟಕ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಟೀಕಿಸಿದ್ದರು. ಯೋಜನೆ ಜಾರಿಗೊಳಿಸಿದಾಗ ವಿರೋಧ ಪಕ್ಷಗಳ ನಾಯಕರು ಈಗ ಯೋಜನೆ ಜಾರಿಗೊಳಿಸಿ, ಆಮೇಲೆ ನಿಲ್ಲಿಸುತ್ತಾರೆ ಎಂದು ಹೇಳುತ್ತಿದ್ದಾರೆ. ಆದರೆ ಇಂತಹ ಅಪಪ್ರಚಾರಗಳಿಗೆ ಕಿವಿಗೊಡಬಾರದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

**ಗ್ಯಾರಂಟಿ ಯೋಜನೆಗಳು ಬಡವರ ಕಾರ್ಯಕ್ರಮ:** ಅಸಮಾನತೆ ನಿವಾರಿಸುವ ಕಾರ್ಯಕ್ರಮ. ನಾವು ಸಂವಿಧಾನದಲ್ಲಿ, ಬಸವಾದಿ ಶರಣರಲ್ಲಿ ನಂಬಿಕೆ ಇಟ್ಟುಕೊಂಡಿರುವವರು. ಸಮಾಜದಲ್ಲಿ ಭ್ರಾತೃತ್ವ ಬೆಳೆಯಬೇಕು. ಸಮಾನತೆ ಮೂಡಬೇಕು. ಆಗ ಮಾತ್ರ ಸಮಾಜದಲ್ಲಿ ಶಾಂತಿ, ನೆಮ್ಮದಿ ಕಾಪಾಡಲು ಸಾಧ್ಯ ಎಂದರು.

### ಮಂಡ್ಯದಲ್ಲಿ ಸ್ಪರ್ಧಿಸಲು ಜೆಡಿಎಸ್‌ನಲ್ಲಿ ಗಂಡಸರಿಲ್ವಾ...!?

ಕುಟುಂಬಸ್ಥರೇ ಮಂಡ್ಯಗೆ ಬರಬೇಕೆ? ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಜನರ ಅಭಿಪ್ರಾಯ ಕಾಂಗ್ರೆಸ್ ಪರವಾಗಿ ಇದೆ. ಐದು ವರ್ಷದ ಹಿಂದೆ ಪರಾಜಿತ ಅಭ್ಯರ್ಥಿ ನಿಖಿಲ್ ಎಲ್ಲಿ ಹೋಗಿದ್ದರು. ಜನ ಸೇವೆ ಮಾಡೋರು ನಿರಂತರವಾಗಿ ಇಲ್ಲಿ ಇದು ಮಾಡಬೇಕಿತ್ತು. ಚುನಾವಣೆ ಬಂದಾಗ ಬರೋಕೆ ಮಂಡ್ಯ ಜಿಲ್ಲೆ ಜನ ದಡ್ಡರಲ್ಲ ಎಂದು ಹೇಳಿದರು. ಕಳೆದ ಬಾರಿಯೇ ಮಂಡ್ಯ ಜನ ನಿಖಿಲ್‌ಗೆ ಸೂಕ್ತ ಫಲಿತಾಂಶ ನೀಡಿದ್ದಾರೆ. ಮತ್ತೊಮ್ಮೆ ಸ್ಪರ್ಧೆ ಮಾಡುವ ಬಯಕೆ ಇರುವವರು ಜನರ ನಡುವೆ ಇರಬೇಕಿತ್ತು. ಅದನ್ನು ಬಿಟ್ಟು ಐದು ವರ್ಷಕ್ಕೊಮ್ಮೆ ಜನರ ಬಳಿಗೆ ಬರುವುದಲ್ಲ. ಮಂಡ್ಯ ಜನರು ದಡ್ಡರಲ್ಲ. ಸೂಕ್ತ ಸಂದರ್ಭದಲ್ಲಿ ಸಮರ್ಪಕ ನಿರ್ಧಾರ ಕೈಗೊಳ್ಳುತ್ತಾರೆ. ಜನ ಹಣ ಇರುವ ವ್ಯಕ್ತಿಗೆ ಮಣೆ ಹಾಕುವುದಿಲ್ಲ. ಕ್ಷೇತ್ರದ ಅಭಿವೃದ್ಧಿಗೆ ಸ್ಪಂದಿಸುವವರಿಗೆ ಮತ ಕೊಡುತ್ತಾರೆ. ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವುದು ಖಚಿತ ಎಂದು ತಿಳಿಸಿದರು.

# ಮೋದಿ ಯೋಜನೆಗಳ ಮುಂದೆ ಸಿದ್ದರಾಮಯ್ಯ ಗ್ಯಾರಂಟಿ ಸರಿಸಮವಲ್ಲ

## ಮೈಸೂರು ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಉದ್ಘಾಟಿಸಿದ ನಂತರ ಯಡಿಯೂರಪ್ಪ ಪ್ರತಿಕ್ರಿಯೆ




ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಗುರುವಾರ ನಡೆದ ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಉದ್ಘಾಟಿಸಿದರು.

ಮೈಸೂರು, ಫೆ.8(ಬಿಎಲ್‌ಯು)– ಪ್ರಧಾನಮಂತ್ರಿ ನರೇಂದ್ರ ಮೋದಿ ಜಾರಿಗೊಳಿಸಿರುವ ಯೋಜನೆಗಳ ಮುಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜಾರಿ ಮಾಡಿರುವ ಯಾವ ಗ್ಯಾರಂಟಿ ಯೋಜನೆಗಳು ಸರಿಸಮವಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಇಂದು ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮೋದಿ ಜಾರಿಗೊಳಿಸಿರುವ ಭಾರತ್ ರೈಸ್ ಯೋಜನೆಯಲ್ಲಿ 29 ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ದೊರೆಯಲಿದೆ. ಇದು ಯಾವುದೇ ಒಂದು ವರ್ಗ, ಸಮುದಾಯಕ್ಕೆ ಮೀಸಲಾಗದೆ ಎಲ್ಲರಿಗೂ ದೊರೆಯಲಿದೆ. ಇದರಿಂದ ಜನಸಾಮಾನ್ಯರಿಗೆ ಬಹಳ ಅನುಕೂಲವಾಗಲಿದೆ ಎಂದರು.

ಇಂತಹ ಯೋಜನೆಗಳನ್ನು ನರೇಂದ್ರಮೋದಿ ಜಾರಿ ಮಾಡಿದ್ದಾರೆ. ಮೋದಿ ಯೋಜನೆಗಳ ಮುಂದೆ ಸಿದ್ದರಾಮಯ್ಯ ಅವರ ಯಾವ ಗ್ಯಾರಂಟಿ ಯೋಜನೆಗಳು ಸರಿಸಮವಲ್ಲ ಎಂದರು.

ಪಕ್ಷವನ್ನು ಬಲಗೊಳಿಸುವ ನಿಟ್ಟಿನಲ್ಲಿ ಮೈಸೂರು ಜಿಲ್ಲಾ ಬಿಜೆಪಿ ಕಾರ್ಯಕಾರಿಣಿಯಲ್ಲಿ ಉಪಯುಕ್ತ ಚರ್ಚೆಗಳಾಗಲಿ ಎಂದು ಇದೇ ವೇಳೆ ಯಡಿಯೂರಪ್ಪ ಅಭಿಪ್ರಾಯಪಟ್ಟರು.

ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ನಡೆಯುತ್ತಿರುವ ಕಾರ್ಯಕಾರಿಣಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.

### ಮೋದಿ ಇದ್ದರೆ ಎಲ್ಲವೂ ಸಾಧ್ಯ

ಇಂದು ನಡೆದ ಬಿಜೆಪಿ ಜಿಲ್ಲಾ ಕಾರ್ಯಕಾರಿಣಿಯಲ್ಲಿ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಪ್ರಮುಖ ಕಾರಣಕರ್ತರಾದ ನರೇಂದ್ರ ಮೋದಿ ಅವರಿಗೆ ಅಭಿನಂದನೆ ಸಲ್ಲಿಸುವ ಅಭಿನಂದನಾ ನಿರ್ಣಯ ಕೈಗೊಳ್ಳಲಾಯಿತು.

ಐದು ಶತಮಾನಗಳ ನಿರಂತರ ಹೋರಾಟದ ಫಲವಾಗಿ ಇಂದು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಿದ್ದು, ಇದಕ್ಕೆ ನರೇಂದ್ರ ಮೋದಿ ಕಾರಣಕರ್ತರಾಗಿದ್ದು, ಮೋದಿ ಇದ್ದರೆ ಎಲ್ಲವೂ ಸಾಧ್ಯ ಎಂಬ ನಂಬಿಕೆ ದೇಶದ ಜನರಲ್ಲಿದೆ ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯ ಕಾಂಗ್ರೆಸ್ ಸರ್ಕಾರ ದಲಿತರ ಶ್ರೇಯೋಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿರುವುದು ಸೇರಿದಂತೆ ಸರ್ಕಾರದ ದಲಿತ ವಿರೋಧಿ ನೀತಿ ಖಂಡಿಸಿ ಖಂಡನಾ ನಿರ್ಣಯ ಕೈಗೊಳ್ಳಲಾಯಿತು.

### ಕಾಂಗ್ರೆಸ್ ಎಂಬ ಪಾರ್ಥೇನಿಯಂ ಸಂಪೂರ್ಣ ನಾಶವಾಗಿದೆ

ದೇಶದಲ್ಲಿ ಕಾಂಗ್ರೆಸ್ ಎಂಬ ಪಾರ್ಥೇನಿಯಂ ಗಿಡ ಸಂಪೂರ್ಣವಾಗಿ ನಾಶವಾಗಿದೆ ಎಂದು ಬಿಜೆಪಿ ರಾಜ್ಯ ಹಿಂದುಳಿದ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಟೀಕಿಸಿದರು.

ಜಿಲ್ಲಾ ಬಿಜೆಪಿ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಅವರು, ಪಾರ್ಥೇನಿಯಂ ಗಿಡದಂತೆ ಕಾಂಗ್ರೆಸ್ ಎಲ್ಲೆಡೆ ಆವರಿಸಿಕೊಂಡಿತ್ತು. ಅಕ್ಕಪಕ್ಕದಲ್ಲಿ ಬೇರೆ ಗಿಡಗಳು ಬೆಳೆಯಲು ಬಿಡದೆ ಭೂಮಿಯ ಸತ್ವ ಹಾಳು ಮಾಡುವ ಕಾಂಗ್ರೆಸ್ ಎಂಬ ಪಾರ್ಥೇನಿಯಂ ಗಿಡವನ್ನು ಎಷ್ಟೇ ನಾಶ ಮಾಡಿದರೂ ಅದು ಎಗ್ಗಿಲ್ಲದೆ ಬೆಳೆಯುತ್ತಿತ್ತು. ಆದರೆ ಭಾರತದಾದ್ಯಂತ ಬಿಜೆಪಿ ಎಂಬ ವೃಕ್ಷ ಬೃಹತ್ತಾಗಿ ಆವರಿಸಿಕೊಂಡಿರುವ ಕಾರಣ ಕಾಂಗ್ರೆಸ್ ಎಂಬ ಪಾರ್ಥೇನಿಯಂ ಈಗ ಸಂಪೂರ್ಣವಾಗಿ ನಾಶವಾಗಿದೆ ಎಂದು ಹೇಳಿದರು.

ಮೊಹಮ್ಮದ್ ಘಜ್ನಿ, ಬಾಬರ್ ಸೇರಿದಂತೆ ಹಲವರು ಭಾರತದಲ್ಲಿನ ಹಿಂದೂ ದೇವಾಲಯಗಳನ್ನು ಧ್ವಂಸ ಮಾಡಿದರು. ಹಿಂದೂ ಧರ್ಮಕ್ಕೆ ಆಪತ್ತು ಬಂದಾಗಲೆಲ್ಲಾ ಓರ್ವ ಪುರುಷೋತ್ತಮ ಜನ್ಮ ತಾಳುತ್ತಾನೆ. ಅದರಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಜನ್ಮ ತಾಳಿ ಅಯೋಧ್ಯೆಯಲ್ಲಿ ಬಾಲರಾಮನ ಪ್ರತಿಷ್ಠಾಪನೆ ಮಾಡಿದ್ದಾರೆ. ಈ ಮೂಲಕ ಹಿಂದೂ ಧರ್ಮೀಯರು ನೂರಾರು ವರ್ಷಗಳ ಕನಸು ನನಸು ಮಾಡಿದ್ದಾರೆ ಎಂದು ರಘು ಕೌಟಿಲ್ಯ ಮೆಚ್ಚುಗೆ ವ್ಯಕ್ತಪಡಿಸಿದರು.

### ಮೋದಿ ಹೆಸರು, ಸಾಧನೆ ಬೂಸ್ಟರ್ ಡೋಸ್!

ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಮತ್ತು ಸಾಧನೆ ಬಿಜೆಪಿಗೆ ಬೂಸ್ಟರ್ ಡೋಸ್ ಇದ್ದಂತೆ ಎಂದು ಮಾಜಿ ಸಚಿವ ಎನ್.ಮಹೇಶ್ ಅಭಿಪ್ರಾಯಪಟ್ಟರು.

ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ನರೇಂದ್ರ ಮೋದಿ ಎಂಬ ಬೂಸ್ಟರ್ ಡೋಸ್ ಬಳಸಿಕೊಂಡು ನಾವು ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಬಿಜೆಪಿ ಸಂಸದರನ್ನು ಗೆಲ್ಲಿಸಬೇಕು ಎಂದು ಹೇಳಿದರು.

ಅನುದಾನ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ತಾರತಮ್ಯ ನೀತಿ ಅನುಸರಿಸುತ್ತಿದೆ ಎಂಬ ಕಾಂಗ್ರೆಸ್ ಆರೋಪ ಶುದ್ಧ ಸುಳ್ಳು. ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗ ಪ್ರತಿವರ್ಷ ಸರಾಸರಿ ಎಂಟು ಸಾವಿರ ಕೋಟಿ ರೂಪಾಯಿ ನೀಡಲಾಗುತ್ತಿತ್ತು. ಆದರೆ ಈಗ ನರೇಂದ್ರ ಮೋದಿ ಸರ್ಕಾರ 21 ಸಾವಿರ ಕೋಟಿ ರೂಪಾಯಿ ನೀಡುತ್ತಿದ್ದು, ಇದನ್ನು ಬಿಜೆಪಿ ಕಾರ್ಯಕರ್ತರು ಜನತೆಗೆ ಮನವರಿಕೆ ಮಾಡಿಕೊಡಬೇಕು ಎಂದು ಮಹೇಶ್ ಸಲಹೆ ನೀಡಿದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಜಿ ಸಚಿವರಾದ ಸಿ.ಹೆಚ್.ವಿಜಯಶಂಕರ್, ಎಂ.ಶಿವಣ್ಣ, ಮಾಜಿ ಶಾಸಕ ಹರ್ಷವರ್ಧನ್, ಸಿ.ರಮೇಶ್ ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಫೆ.13ರಿಂದ ವಿಧಾನಸೌಧ ಚಲೋ ಕಾರ್ಯಕ್ರಮ




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ವಿಧಾನಸೌಧ ಚಲೋ ಬಿತ್ತಿಪತ್ರ ಬಿಡುಗಡೆಗೊಳಿಸಲಾಯಿತು.

ಮೈಸೂರು, ಫೆ.8(ಜಿಎ)–ಆಶಾ ಕಾರ್ಯಕರ್ತೆಯರಿಗೆ ಮಾಸಿಕ ವೇತನ 15 ಸಾವಿರ ನಿಗದಿಪಡಿಸಬೇಕು ಎಂಬ ಬೇಡಿಕೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಫೆ.13 ಮತ್ತು 14 ರಂದು ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ವಿಧಾನಸೌಧ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಎಐಯುಟಿಯುಸಿ ಜಿಲ್ಲಾ ಸಲಹೆಗಾರರಾದ ಪಿ.ಎಸ್.ಸಂಧ್ಯಾ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿಯೂ ಬೃಹತ್ ಪ್ರತಿಭಟನೆ ನಡೆಸಲಾಗುವುದು ರಾಜ್ಯದ ಮೂಲೆ ಮೂಲೆಗಳಿಂದ ಸುಮಾರು 20 ಸಾವಿರಕ್ಕೂ ಅಧಿಕ ಆಶಾ ಕಾರ್ಯಕರ್ತೆಯರು ಪಾಲ್ಗೊಳ್ಳಲಿದ್ದಾರೆ ಎಂದರು.

ಆಶಾ ಕಾರ್ಯಕರ್ತೆಯರಿಂದ ಒತ್ತಾಯಪೂರಕವಾಗಿ ಮಾಡಿಸಿಕೊಳ್ಳುತ್ತಿರುವ ಮೊಬೈಲ್ ಕೆಲಸಗಳನ್ನು ಕೈಬಿಡಬೇಕು ಅಥವಾ ಮೊಬೈಲ್, ಡಾಟಾ ಒದಗಿಸಬೇಕು. ಮೊಬೈಲ್ ಕೆಲಸಗಳಿಗೆ ಪ್ರೋತ್ಸಾಹ ಧನ ನಿಗದಿ ನೀಡಬೇಕು. ಯಾರಿಗೆ ಮೊಬೈಲ್ ಕೆಲಸ ಮಾಡಲು ಆಗುವುದಿಲ್ಲವೋ ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿ ಈ ಪ್ರತಿಭಟನೆ ನಡೆಸಲಾಗುವುದು ಎಂದು ಅವರು ತಿಳಿಸಿದರು.

ಈಗಾಗಲೇ ಇಲಾಖಾ ಸಚಿವರು, ಉನ್ನತ ಅಧಿಕಾರಿಗಳ ಸಭೆಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆ ಕಳುಹಿಸಿರುವ, ಸರ್ಕಾರದಿಂದ ಆದೇಶಿಸಬೇಕಾದ ಬೇಡಿಕೆಗಳಾದ ನಗರ ಆಶಾ ಕಾರ್ಯಕರ್ತೆಯರ ಹೆಚ್ಚುವರಿ ಕೆಲಸ ಮತ್ತು ನಗರ ಜೀವನದ ದುಬಾರಿ ಖರ್ಚು ವೆಚ್ಚಗಳಿಗೆ ಅನುಗುಣವಾಗಿ ಕನಿಷ್ಠ ರೂ.2 ಸಾವಿರದಷ್ಟು ಗೌರವಧನವನ್ನು ಹೆಚ್ಚಿಗೆ ಮಾಡಬೇಕು. ಪಶ್ಚಿಮಬಂಗಾಳ ರಾಜ್ಯದಲ್ಲಿ ಇರುವಂತೆ 60 ವರ್ಷಕ್ಕೆ ಸೇವಾ ನಿವೃತ್ತಿ ಪಡೆಯುವ ಕಾರ್ಯಕರ್ತೆಯರಿಗೆ ನಿವೃತ್ತಿ ವೇತನ ಮೂರು ಲಕ್ಷ ರೂ.ಗೆ ಹೆಚ್ಚಿಸಬೇಕು ಎಂಬ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರದ ಗಮನ ಸೆಳೆಯುವುದಾಗಿ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳಮ್ಮ, ಹೇಮಾ, ಸುನೀತಾ, ಸುಮಾ ಉಪಸ್ಥಿತರಿದ್ದರು.

## ಫೆ.11 ದೃಷ್ಟಿ ದೋಷ ವಿಶೇಷಚೇತನ ಮಹಿಳೆಯರಿಗಾಗಿ 'ಹೆರಿಟೇಜ್ ಕಪ್' ಕ್ರಿಕೆಟ್ ಪಂದ್ಯಾವಳಿ




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೆರಿಟೇಜ್ ಕಪ್ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಫೆ.8(ಜಿಎ)–ನಿರಮಯ ಫೌಂಡೇಷನ್ ವತಿಯಿಂದ ಫೆ.11ರಂದು ಮಾನಸ ಗಂಗೋತ್ರಿ ಪೆವಿಲಿಯನ್ ಕ್ರಿಕೆಟ್ ಮೈದಾನದಲ್ಲಿ ದೃಷ್ಟಿದೋಷವುಳ್ಳ ವಿಶೇಷಚೇತನ ಮಹಿಳೆಯರಿಗಾಗಿ 'ಹೆರಿಟೇಜ್ ಕಪ್' ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಸಂಸ್ಥೆ ಸ್ಥಾಪಕರಾದ ಆರ್.ರಕ್ಷಿತ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9ಕ್ಕೆ ಭಾರತೀಯ ಅಂಧರ ಕ್ರಿಕೆಟ್ ತಂಡದ ಮಾಜಿ ಕ್ಯಾಪ್ಟನ್ ಶೇಖರ್ ನಾಯಕ್ ಪಂದ್ಯಾವಳಿ ಉದ್ಘಾಟಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ವಿದ್ಯಾ ವಿಕಾಸ್ ಸಂಸ್ಥೆಯ ಕವೀಶ್ ಗೌಡ, ಆದಿತ್ಯ ಆಸ್ಪತ್ರೆಯ ಡಾ.ಎನ್.ಚಂದ್ರಶೇಖರ್ ಮತ್ತು ಭಾಸ್ಕರ್ ಕಳಲೆ ಆಗಮಿಸಲಿದ್ದು, ಸಂಜೆ 4ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ ಎಂದರು.

ದೃಷ್ಟಿ ವಿಶೇಷಚೇತನರ ಬಗ್ಗೆ ಜನತೆ ಅನುಕಂಪ ತೋರುವ ಮೂಲಕ ಅವರನ್ನು ಮೂಲೆಗೆ ತಳ್ಳುವುದು ಬೇಡ, ಬದಲಾಗಿ ಸಮಾನ ಅವಕಾಶ ಕಲ್ಪಿಸಬೇಕಾದ ಅಗತ್ಯವಿದೆ. ಹೀಗಾಗಿ ಈ ಪಂದ್ಯಾವಳಿಯನ್ನು ಸ್ವಚ್ಛಂದ ಮತ್ತು ಸುರಕ್ಷಾ ಫೌಂಡೇಷನ್ ಸಹಯೋಗದಲ್ಲಿ ಆಯೋಜಿಸಲಾಗುತ್ತಿದ್ದು, ಮೈಸೂರಿನ ನಿರಮಯ ತಂಡ, ಬೆಂಗಳೂರಿನ ದೀಪಾ ಅಕಾಡೆಮಿ ತಂಡ, ಸ್ನೇಹ ದೀಪಾ ತಂಡಗಳು ಪಾಲ್ಗೊಳ್ಳಲಿವೆ. ದೃಷ್ಟಿ ವಿಶೇಷಚೇತನ ಮಹಿಳೆಯರು ತಮ್ಮ ಕ್ರೀಡಾ ಕೌಶಲ್ಯ ಪ್ರದರ್ಶಿಸಲು ವೇದಿಕೆ ಕಲ್ಪಿಸುವುದು, ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವುದು, ಇತರರಿಗೆ ಸ್ಫೂರ್ತಿ ನೀಡುವ ಉದ್ದೇಶ ಈ ವಿಶೇಷ ಪಂದ್ಯಾವಳಿ ಹೊಂದಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುಪ್ರೀತ್, ಪ್ರಶಾಂತ್, ನೂತನ್, ಕಮಲ್‌ತೇಜ್ ಉಪಸ್ಥಿತರಿದ್ದರು.

## ವಿಶ್ವಕರ್ಮ ಅಧ್ಯಯನ ಪೀಠ ಸ್ಥಾಪನೆಗೆ ಆಗ್ರಹ



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ವಿಶ್ವಕರ್ಮ ಮುಖಂಡರು

ಮೈಸೂರು, ಫೆ.8(ಜಿಎ)–ಪ್ರಸಕ್ತ ಸಾಲಿನ ರಾಜ್ಯ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರು ಮೈಸೂರು ವಿವಿಯಲ್ಲಿ ವಿಶ್ವಕರ್ಮ ಅಧ್ಯಯನ ಪೀಠ ಸ್ಥಾಪನೆ ಘೋಷಿಸಬೇಕೆಂದು ಮೈಸೂರು ಜಿಲ್ಲಾ ವಿಶ್ವಕರ್ಮ ಸಂಘ ಆಗ್ರಹಿಸಿದೆ.

ಈ ಕುರಿತು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ಅಧಿಕಾರಿ ಮಂಟೇಲಿಂಗಚಾರ್ ಮಾತನಾಡಿ, ವಿಶ್ವವಿದ್ಯಾಲಯದ ಮಟ್ಟದಲ್ಲಿ ವಿಶ್ವಕರ್ಮ ಸಮಾಜ ಮತ್ತು ಸಂಸ್ಕೃತಿ ಕುರಿತಾದ ಅಧ್ಯಯನಗಳು ತುಂಬಾ ಕಡಿಮೆ ಇವೆ. ಹೀಗಾಗಿ ಹೆಚ್ಚಿನ ಮಟ್ಟದಲ್ಲಿ ಅಧ್ಯಯನ ನಡೆಯಬೇಕಾಗಿದೆ. ಇದಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಸೂಕ್ತ ಸ್ಥಳವಾಗಿದ್ದು, ಇಲ್ಲಿ ಹೆಚ್ಚಿನ ಸವಲತ್ತುಗಳು ಸಿಗುತ್ತವೆ. ಆದ್ದರಿಂದ ಇಲ್ಲಿಯೇ ವಿಶ್ವಕರ್ಮ ಅಧ್ಯಯನ ಪೀಠವನ್ನು ಸ್ಥಾಪನೆ ಮಾಡಿದಲ್ಲಿ ರಾಜ್ಯದ ಎಲ್ಲಾ ಭಾಗಗಳಿಂದ ಸಮುದಾಯದವರು ಬಂದು ಹೋಗಲು ಅನುಕೂಲವಾಗುತ್ತದೆ ಎಂದರು.

ಈ ಬಾರಿಯ ಬಜೆಟ್‌ನಲ್ಲಿ ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡುವ ಮೂಲಕ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಹೆಚ್ಚಿನ ಉತ್ತೇಜನ ನೀಡಬೇಕು. ಪಂಚ ಕುಲ ಕಸುಬುಗಳಿಗೆ ಆರ್ಥಿಕ ಅನುಕೂಲ ಮಾಡಿಕೊಡಬೇಕು. ರಾಜ್ಯದಲ್ಲಿ ವಿಶ್ವಕರ್ಮ ಸಮುದಾಯದ ಸುಮಾರು 40 ಲಕ್ಷ ಜನಸಂಖ್ಯೆಯಿದ್ದು, ರಾಜಕೀಯವಾಗಿ ಹಿಂದುಳಿದಿರುವುದರಿಂದ ಪ್ರಸ್ತುತ ಈ ಸರ್ಕಾರದಲ್ಲಿ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಿಗೆ ನಿಗಮ ಮಂಡಳಿಗಳಲ್ಲಿ ಸ್ಥಾನಮಾನ ನೀಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ ಸಿದ್ದಚಾರ್, ರಿಷಿ ವಿಶ್ವಕರ್ಮ, ಎಂ.ಮೊಗಣ್ಣಾಚಾರ್, ಸಿ.ಟಿ.ಆಚಾರ್ಯ, ಜಯರಾಮಚಾರ್ ಉಪಸ್ಥಿತರಿದ್ದರು.

### ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಫೆ 8– ಮಾರೇಹಳ್ಳಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕೈಂಕರ್ಯ ಸಭೆ ವತಿಯಿಂದ 2022–23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಯಾವುದೇ ಅಂಗೀಕರಿಸಿದ ವಿಶ್ವವಿದ್ಯಾನಿಲಯದ ಪದವಿ, ಡಿಪ್ಲೋಮಾ, ವೈದ್ಯಕೀಯ, ತಾಂತ್ರಿಕ ಪದವಿಯಲ್ಲಿ ಅತ್ಯುನ್ನತ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ತೀರ್ಮಾನಿಸಲಾಗಿದೆ. ಅರ್ಹ ಶ್ರೀ ವೈಷ್ಣವ ವಿದ್ಯಾರ್ಥಿಗಳು ಅರ್ಜಿಯಲ್ಲಿ ತಮ್ಮ ಪೂರ್ಣ ವಿಳಾಸ, ದೂರವಾಣಿ ಸಂಖ್ಯೆ, ಭಾವಚಿತ್ರ ಸಮೇತ ಪೂರ್ಣ ವಿವರಗಳನ್ನು ಭರ್ತಿ ಮಾಡಿ ದೃಢೀಕರಿಸಿದ ಅಂಕಪಟ್ಟಿಯ ನಕಲನ್ನು ಫೆ. 15ರೊಳಗೆ ಸಿ. ರಮೇಶ್, ಗೌರವ ಕಾರ್ಯದರ್ಶಿಗಳು, ಮನೆ ನಂ. 2878, ಕೋರ್ಟ್ ಹಿಂಭಾಗ, ಸರಸ್ವತಿಪುರಂ ಇಲ್ಲಿಗೆ ತಲುಪಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448871127, 8660905677 ಸಂಪರ್ಕಿಸಬಹುದು.

## ಇಂದು 'ಜಸ್ಟ್ ಪಾಸ್' ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕೆ.ವಿ.ಶ್ರೀಧರ್ ಮಾತನಾಡಿದರು.

ಮೈಸೂರು, ಫೆ8(ಜಿಎ)–ರಾಯ್ಸ್ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ತಾವು ನಿರ್ಮಿಸಿರುವ 'ಜಸ್ಟ್ ಪಾಸ್' ಎಂಬ ಕುಟುಂಬ ಸಮೇತ ನೋಡಬಹುದಾದ ಚಲನಚಿತ್ರ ಫೆ.9ರಂದು ರಾಜ್ಯದ 85ಕ್ಕೂ ಅಧಿಕ ಚಿತ್ರಮಂದಿರದಲ್ಲಿ ಬಿಡುಗಡೆಯಾಗಲಿದೆ ಎಂದು ಪಾಲಿಕೆ ಮಾಜಿ ಸದಸ್ಯ, ಚಿತ್ರದ ಮತ್ತೊಬ್ಬ ನಿರ್ಮಾಪಕರೂ ಆದ ಕೆ.ವಿ.ಶ್ರೀಧರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಸ್ಟ್ ಪಾಸ್ ಆದವರು ಕುಟುಂಬದ ತಿರಸ್ಕಾರ, ಸ್ನೇಹಿತರ ಅವಹೇಳನಕ್ಕೆ ಒಳಗಾಗಬೇಕಾಗುತ್ತದೆ. ಆದರೂ ಸಹಾ ಇವರು ತಾವು ಯಾರಿಗಿಂತಲೂ ಏನೂ ಕಡಿಮೆಯಿಲ್ಲ ಎಂಬ ಛಲದಿಂದ ಏನಾದರೂ ಸಾಧನೆ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ಚಿತ್ರ ಪ್ರೇರಣೆ ನೀಡುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೋಡುವಂತಹ ಚಿತ್ರವಾಗಿದೆ ಎಂದರು.

ಚಿತ್ರದ ನಾಯಕ ಶ್ರೀ ಮಾತನಾಡಿ, ಬಹುತೇಕ ಚಿತ್ರೀಕರಣ ಮೈಸೂರಿನಲ್ಲಿಯೇ ನಡೆಸಿದ್ದು, 4 ಗೀತೆಗಳನ್ನು ಒಳಗೊಂಡಿದೆ. ದೊಡ್ಡಹಟ್ಟಿ ಬೋರೇಗೌಡ ಖ್ಯಾತಿ ಕೆ.ಎಂ. ರಘು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಖ್ಯಾತ ನಟ ರಂಗಾಯಣ ರಘು, ನಾಯಕಿ ನಟಿಯಾಗಿ ಪ್ರಣತಿ, ಗಗನ್, ಅರ್ಪಿತಾ, ಸಾರಿಕಾ ಸೇರಿದಂತೆ ಬಹು ತಾರಾಂಗಣ ಒಳಗೊಂಡಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಟಿ ಪ್ರಣತಿ, ಗಗನ್, ಅರ್ಪಿತಾ, ಸಾರಿಕಾ ಉಪಸ್ಥಿತರಿದ್ದರು.

### ನಾಳೆ ಉಚಿತ ಆಯುರ್ವೇದ ತಪಾಸಣಾ ಶಿಬಿರ

ಮೈಸೂರು, ಫೆ. 8– ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಎಸ್.ಎನ್. ಪಂಡಿತ್ ಹೆಲ್ತ್ ಕೇರ್ ಸರ್ವೀಸಸ್‌ನಲ್ಲಿ ಫೆ. 10 ರಂದು ಬೆಳಿಗ್ಗೆ 11 ಘಂಟೆಯಿಂದ ಮಧ್ಯಾಹ್ನ 2 ಘಂಟೆಯವರೆಗೆ ಹಾಗೂ ಸಂಜೆ 5.30 ರಿಂದ 8.30 ವರೆಗೂ ಮೂಳೆ ಮತ್ತು ನರ ಸಂಬಂಧ ರೋಗಗಳಿಗೆ ಉಚಿತ ತಪಾಸಣೆ ಹಾಗೂ ಸಲಹೆ ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗೆ ದೂ: 90363 05966 ಸಂಪರ್ಕಿಸಬಹುದು.

## ರಾಜ್ಯಗಳ ಮೇಲೆ ಭಾರತ ಒಕ್ಕೂಟ ಸರ್ಕಾರ ಹಸ್ತಕ್ಷೇಪ ಖಂಡಿಸಿ ಪ್ರತಿಭಟನೆ




ಮೈಸೂರಿನ ಗಾಂಧಿಚೌಕದ ಬಳಿ ಭಾರತ ಕಮ್ಯುನಿಸ್ಟ್ ಪಕ್ಷದಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಫೆ.8(ಜಿಎ)–ಭಾರತದ ಒಕ್ಕೂಟವಾದಿ ಸ್ವರೂಪ ಬಲಗೊಳಿಸಿ, ರಾಜ್ಯಗಳ ಮೇಲೆ ಹಸ್ತಕ್ಷೇಪ ನಿಲ್ಲಿಸುವಂತೆ ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷದಿಂದ (ಮಾರ್ಕ್ಸ್‌ವಾದ) ಗಾಂಧಿಚೌಕದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಭಾರತ ಸಂವಿಧಾನದಂತೆ ದೇಶದಾದ್ಯಂತ ಒಕ್ಕೂಟವಾದಿ ಸ್ವರೂಪ ಬಲಗೊಳಿಸಲು ಈಗ ಒಕ್ಕೂಟ ಸರಕಾರ ರಾಜ್ಯ ಸರಕಾರಗಳ ಮೇಲೆ ತನ್ನ ಅಧಿಕಾರ ದುರುಪಯೋಗ ಹಾಗೂ ಹಸ್ತಕ್ಷೇಪದ ಮೂಲಕ ಒಕ್ಕೂಟವಾದಿ ಸ್ವರೂಪಕ್ಕೆ ಭಂಗ ಉಂಟು ಮಾಡುವುದನ್ನು ಈ ಕೂಡಲೆ ನಿಲ್ಲಿಸಿ, ರಾಜ್ಯಗಳಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ರಾಜ್ಯಗಳು ತಮ್ಮ ತೆರಿಗೆ ಹಾಗೂ ಸಂಪನ್ಮೂಲಗಳ ಪಾಲು ಪಡೆಯುವಲ್ಲಿ ಒಕ್ಕೂಟ ಸರಕಾರ ಅಡ್ಡಿಯಾಗಬಾರದು. ಕರ್ನಾಟಕಕ್ಕೆ ಬರಗಾಲದ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕು. ಒಕ್ಕೂಟ ಸರಕಾರ ತನ್ನ ಮನಸ್ಸಿಗೆ ತೋಚಿದಂತೆ ರಾಜ್ಯ ಸರಕಾರಗಳು ಸಾಲ ಪಡೆಯುವಂತೆ ಮಾಡುವುದನ್ನು ನಿಲ್ಲಿಸಬೇಕು. ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲಿ ರಾಜ್ಯಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಒಕ್ಕೂಟ ಸರಕಾರ ಮಧ್ಯಪ್ರವೇಶ ಮಾಡಬಾರದು. ರಾಜ್ಯ ಸರ್ಕಾರಗಳನ್ನು ಗುರಿಯಾಗಿಸಿಕೊಂಡು ಒಕ್ಕೂಟ ಸರಕಾರ ಇಡಿ, ಸಿಬಿಐ ಹಾಗೂ ಆದಾಯ ತೆರಿಗೆ ಇಲಾಖೆಗಳನ್ನು ದುರ್ಬಳಕೆ ಮಾಡುವುದನ್ನು ನಿಲ್ಲಿಸಬೇಕು. ರಾಜ್ಯ ಸರಕಾರಗಳ ವಿಷಯದಲ್ಲಿ ರಾಜ್ಯಪಾಲರ ಹಸ್ತಕ್ಷೇಪ ಹಾಗೂ ಅವರ ಸಂವಿಧಾನಾತ್ಮಕ ಸ್ಥಾನದ ದುರುಪಯೋಗ ತಡೆಯಬೇಕು. ರಾಜ್ಯದ ವಿಶ್ವವಿದ್ಯಾಲಯಗಳ ವಿಷಯದಲ್ಲಿ ಕುಲಾಧಿಪತಿಗಳಾಗಿ ರಾಜ್ಯಪಾಲರು ಹಸ್ತಕ್ಷೇಪ ಮಾಡುವುದನ್ನು ತಡೆಯಬೇಕು. ರಾಜ್ಯ ಶಾಸಕಾಂಗ ಅಂಗೀಕರಿಸಿದ ಶಾಸನಗಳನ್ನು ರಾಜ್ಯಪಾಲರು ತಡೆಹಿಡಿಯಬಾರದು. ವಿಳಂಬ ಮಾಡದೆ ಸಹಿ ಮಾಡುವಂತೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಲ.ಜಗನ್ನಾಥ್, ಎನ್.ವಿಜಯ್ ಕುಮಾರ್.ಜಿ ಜಯರಾಮ್ ಸ್ಥಳೀಯ ಸಮಿತಿ ಕಾರ್ಯದರ್ಶಿ ಜಿ.ರಾಜೇಂದ್ರ, ಸದಸ್ಯರಾದ ಬಸವಯ್ಯ, ಅಣ್ಣಪ್ಪ, ಬಾಲಾಜಿರಾವ್, ಬಲರಾಮ್, ಪುಟ್ಟಮಲ್ಲಯ್ಯ, ವರುಣ, ನಾಗರಾಜ್, ಚಂದ್ರಶೇಖರ್, ಅನಂತರಾಂ, ಮಹದೇವಯ್ಯ, ವಿಜಯ್‌ಕುಮಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಉತ್ತರ ಕರ್ನಾಟಕದ ರಗಡ್ ಲವ್‌ಸ್ಟೋರಿ



ಧರ್ಮ ಕೀರ್ತಿರಾಜ್ ನಟಿಸುತ್ತಿರುವ, ಉತ್ತರ ಕರ್ನಾಟಕ ಭಾಗದಲ್ಲಿ ನಡೆಯೋ 'ರಗಡ್ ಪ್ರೇಮಕಥೆ'ವುಳ್ಳ 'ಯುಕೆ ಲವ್ ಸ್ಟೋರಿ' ಚಿತ್ರದ ಮುಹೂರ್ತ ಇತ್ತೀಚೆಗೆ ನೆರವೇರಿತು. ನಟ ಅಜಯ್‌ರಾವ್ ಪ್ರಥಮ ದೃಶ್ಯಕ್ಕೆ ಕ್ಲಾಪ್‌ಮಾಡಿ ಶುಭ ಹಾರೈಸಿದರು. ರೋಮನಾಸ್ ಕ್ರಿಯೇಶನ್ಸ್ ಅಡಿಯಲ್ಲಿ ಎಸ್.ಜಿ.ಸುರೇಶ್ ಆರೋಕ್ಯರಾಜ್ ಚಿತ್ರ ನಿರ್ಮಾಣದ ಜತೆಗೆ ಪ್ರಮುಖ ಪಾತ್ರಕ್ಕೆ ಬಣ್ಣ ಹಚ್ಚುತ್ತಿದ್ದಾರೆ.

ಇದು ವಿಜಯ್ ಅವರ ಸಾರಥ್ಯದ ಎರಡನೇ ಚಿತ್ರ ಯುಕೆ ಅಂದರೆ ಉತ್ತರ ಕರ್ನಾಟಕ. ಆ ಭಾಗದಲ್ಲಿ ನಡೆಯೋ ರಗಡ್ ಪ್ರೀತಿಯ ಕಥೆಯೊಂದನ್ನು ಈ ಮೂಲಕ ನಿರ್ದೇಶಕರು ಹೇಳಹೊರಟಿದ್ದಾರೆ. ಗುಲ್ಬರ್ಗ ಜಿಲ್ಲೆಯ ಸಣ್ಣ ಹಳ್ಳಿಗೆ ತೆರಳಿ, ಆರು ತಿಂಗಳವರೆಗೆ ಅಲ್ಲಿನ ಜನರೊಂದಿಗಿದ್ದು, ಅವರ ನಡೆ-ನುಡಿಯು ಬಗ್ಗೆ ತಿಳಿದುಕೊಂಡು ನಿರ್ದೇಶಕ ವಿಜಯ್ ಅವರು ಚಿತ್ರಕಥೆ ರೆಡಿಮಾಡಿಕೊಂಡಿದ್ದಾರೆ.

ಆ ಜನರಲ್ಲಿ ಪ್ರೀತಿಯ ಬಗ್ಗೆ ಯಾವ ಭಾವನೆ, ಅಭಿಪ್ರಾಯಗಳಿವೆ ಎಂಬುದನ್ನು ಅಧ್ಯಯನ ಮಾಡಿ ಅದನ್ನು ಚಿತ್ರಕಥೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಇದೊಂದು ರಗಡ್ ಲವ್‌ಸ್ಟೋರಿ ಎಂದಷ್ಟೇ ಹೇಳಿದ ನಿರ್ದೇಶಕರು, ಚಿತ್ರದ ಕಾನ್ಸೆಪ್ಟ್ ಬಗ್ಗೆ ಯಾವುದೇ ಮಾಹಿತಿ ಬಿಟ್ಟುಕೊಡಲಿಲ್ಲ. ಯುಕೆ ಎಂಬುದನ್ನು ನೋಡುಗರು ಯಾವ ರೀತಿ ಬೇಕಾದರೂ ಅಂದುಕೊಳ್ಳಬಹುದು ಎಂದೂ ಅವರು ಹೇಳಿದ್ದಾರೆ.

ಹಳ್ಳಿ ಯುವಕನಾಗಿ ಧರ್ಮ ಕೀರ್ತಿರಾಜ್ ನಟಿಸುತ್ತಿದ್ದು, ಅವರ ಲುಕ್ಕೇ ವಿಭಿನ್ನವಾಗಿರುತ್ತದೆ. ಹನ್ನೊಂದು ಅಣ್ಣಂದಿರ ಮುದ್ದಿನ ತಂಗಿಯಾಗಿ ನಾಯಕಿ ಕಾವ್ಯ ಭಗವಂತ ನಟಿಸುತ್ತಿದ್ದಾರೆ. ಅವರು ಹಳ್ಳಿಯ ಮುಗ್ಧ ಯುವತಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಉಳಿದಂತೆ ಸಾಧು ಕೋಕಿಲಾ, ಬಲ ರಾಜವಾಡಿ, ಗೋವಿಂದೇಗೌಡ, ರವಿರೆಡ್ಡಿ, ಮಂಡ್ಯ ಸಿದ್ದು, ಮೂರ್ತಿ ಗಿರಿನಗರ, ಮಂಜು ಹೊನ್ನವಳ್ಳಿ ಇತರರು ಚಿತ್ರದಲ್ಲಿದ್ದಾರೆ. ನಾಲ್ಕು ಹಾಡುಗಳಿಗೆ ಡಾ.ಕಿರಣ್ ತೋಟಂಬೈಲ್ ಅವರ ಸಂಗೀತ ಸಂಯೋಜನೆ, ಪಳನಿವೇಲು ಅವರ ಛಾಯಾಗ್ರಹಣವಿದೆ. ಹುಬ್ಬಳ್ಳಿ, ಬೆಳಗಾವಿ, ಯಾದಗಿರಿ, ಕಲಬುರ್ಗಿ ಅಲ್ಲದೆ ಕೊಳ್ಳೆಗಾಲ ಸುತ್ತಮುತ್ತ ಹಾಗೂ ಅದ್ದೂರಿ ವೆಚ್ಚದ ಸೆಟ್‌ಗಳಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

# 'ಸಂಜು'

## ಬಸ್ ನಿಲ್ದಾಣದಲ್ಲಿ ಹುಟ್ಟಿದ ಪ್ರೇಮಕಥೆ...



ಪತ್ರಕರ್ತ ಯತಿರಾಜ್ ಚಿತ್ರರಂಗದಲ್ಲಿ ನಟ, ನಿರ್ದೇಶಕನಾಗಿ ಜನಪ್ರಿಯರು. ಇತ್ತೀಚೆಗೆ ಅವರ ನಿರ್ದೇಶನದ ಸಂಜು ಚಿತ್ರದ ಆಡಿಯೋ ಬಿಡುಗಡೆಯಾಯಿತು. ಈ ಚಿತ್ರದಲ್ಲಿ ಮನ್ವಿತ್, ಶ್ರಾವ್ಯರಾವ್ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಯೋಗರಾಜ್‌ಭಟ್, ಮಠ ಗುರುಪ್ರಸಾದ್, ಗುರು ದೇಶಪಾಂಡೆ, ರವಿ.ಆರ್.ಗರಣಿ, ಪಿ.ಮೂರ್ತಿ, ಚೇಂಬರ್ ಅಧ್ಯಕ್ಷ ಎನ್.ಎಂ.ಸುರೇಶ್, ಉಮೇಶ್ ಬಣಕಾರ್ ಸೇರಿದಂತೆ ಚಿತ್ರರಂಗದ ಅನೇಕ ಗಣ್ಯರು ಈ ಸಮಾರಂಭಕ್ಕೆ ಸಾಕ್ಷಿಯಾಗಿದ್ದರು. ವಿಜಯ್ ಹರಿತ್ಸ ಅವರ ಸಂಗೀತ ನಿರ್ದೇಶನ ಈ ಚಿತ್ರದ ಹಾಡುಗಳಿಗಿದೆ.

ನಿರ್ದೇಶಕ ಯತಿರಾಜ್ ಮಾತನಾಡುತ್ತ ಬಸ್ ನಿಲ್ದಾಣವೊಂದರಲ್ಲಿ ನಡೆಯೋ ಪ್ರೇಮಕಥೆಯಿದು. ಇಲ್ಲಿ ನಾಯಕ ಒಬ್ಬ ಸಾಮಾನ್ಯ ಮನುಷ್ಯ, ಆತನ ಬದುಕಿನಲ್ಲೂ ಸಾಕಷ್ಟು ಏರಿಳಿತಗಳಿರುತ್ತವೆ. ನಾಯಕಿ ಸರಸ್ವತಿಯ ಬದುಕೂ ಇದಕ್ಕೆ ಹೊರತಾಗಿರಲ್ಲ. ತತ್‌ಕ್ಷಣದ ನಿರ್ಧಾರಗಳು ನಮ್ಮ ಬದುಕಿನಲ್ಲಿ ಏನೇನೆಲ್ಲಾ ಪರಿಣಾಮ ಬೀರುತ್ತದೆ ಎಂದು ಚಿತ್ರದಲ್ಲಿ ತೋರಿಸಿದ್ದೇನೆ. ಮಡಿಕೇರಿಯಲ್ಲೇ ಹೆಚ್ಚಿನ ಭಾಗದ ಶೂಟಿಂಗ್ ಮಾಡಿದ್ದೇವೆ. ಯಾವುದೇ ಕೊರತೆಯಾಗದಂತೆ ನಿರ್ಮಾಪಕ ಸಂತೋಷ್ ಧಾರಾಳವಾಗಿ ಖರ್ಚು ಮಾಡಿದ್ದಾರೆ ಎಂದು ಹೇಳಿದರು. ನಾಯಕ ಮನ್ವಿತ್ ಮಾತನಾಡುತ್ತಾ, ನಾನೊಬ್ಬ ಸಾಮಾನ್ಯ ರೈತನ ಮಗ. ನನ್ನಂಥ ಹೊಸಬನ ಮೇಲೆ ದೊಡ್ಡಮೊತ್ತದ ಬಂಡವಾಳ ಹಾಕಿರುವ ನಿರ್ಮಾಪಕರಿಗೆ ಧನ್ಯವಾದ, ನಿರ್ದೇಶಕ ಯತಿರಾಜ್ ಹೇಳಿದ ಕಥೆ ಇಷ್ಟವಾಗಿ, ನಿರ್ಮಾಪಕರನ್ನು ಒಪ್ಪಿಸಿ ಸಿನಿಮಾ ಆರಂಭಿಸಿದ್ದೆವು ಎಂದು ಹೇಳಿದರು. ನಾಯಕಿ ಶ್ರಾವ್ಯರಾವ್ ಮಾತನಾಡಿ, ಚಿತ್ರದಲ್ಲಿ ಸರಸ್ವತಿ(ಸರಸು) ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮೊದಲ ಹದಿನೈದು ದೃಶ್ಯಗಳಲ್ಲಿ ನನಗೆ ಯಾವುದೇ ಮಾತುಗಳಿರಲ್ಲ. ಕೇವಲ ಭಾವನೆಗಳನ್ನು ಮಾತ್ರ ವ್ಯಕ್ತಪಡಿಸಬೇಕಾಗಿದ್ದು, ನಿಜಕ್ಕೂ ಚಾಲೆಂಜಿಂಗ್ ಆಗಿತ್ತು ಎಂದು ತಮ್ಮ ಪಾತ್ರದ ಬಗ್ಗೆ ಹೇಳಿಕೊಂಡರು.

ನಿರ್ಮಾಪಕ ಸಂತೋಷ್ ಡಿ.ಎಂ. ಮಾತನಾಡುತ್ತ, ಯತಿರಾಜ್ ಅವರು ಮೊದಲು ಏನು ಹೇಳಿದರೋ ಹಾಗೇ ಚಿತ್ರವನ್ನು ಮಾಡಿಕೊಟ್ಟಿದ್ದಾರೆ. ತುಂಬಾ ಚೆನ್ನಾಗಿ ಮೂಡಿಬಂದಿದೆ. ಸದ್ಯದಲ್ಲೇ ತೆರೆಗೆ ತರುವುದಾಗಿ ಹೇಳಿದರು. ಚಿತ್ರದಲ್ಲಿ ಎರಡು ಹಾಡುಗಳಿದ್ದು, ವಾಸುಕಿ ವೈಭವ್, ಐಶ್ವರ್ಯ ರಂಗರಾಜನ್ ಹಾಗೂ ನವೀನ್ ಸಜ್ಜು ದನಿಯಾಗಿದ್ದಾರೆ. ಛಾಯಾಗ್ರಾಹಕ ವಿದ್ಯಾನಾಗೇಶ್, ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ಹಾಗೂ ಕಲಾವಿದರಾದ ಮಹಂತೇಶ್, ಸಂಗೀತಾ ಚಿತ್ರದ ಕುರಿತು ಮಾತನಾಡಿದರು.

### ವಿನೋದ್ ಪ್ರಭಾಕರ್ 25ನೇ ಚಿತ್ರ

# ಬಲರಾಮನ ಭೂಗತಲೋಕದ ದಿನಗಳು...



ವಿನೋದ್ ಪ್ರಭಾಕರ್ ನಟಿಸುತ್ತಿರುವ 25ನೇ ಚಿತ್ರ 'ಬಲರಾಮನ ಭೂಗತಲೋಕದ ದಿನಗಳು.....' ಈ ಚಿತ್ರದ ಶೀರ್ಷಿಕೆಯನ್ನು ಗೃಹಸಚಿವ ಡಾ||ಜಿ.ಪರಮೇಶ್ವರ್ ಅವರು ಅನಾವರಣಗೊಳಿಸಿ ಶುಭ ಹಾರೈಸಿದರು. ಪದ್ಮಾವತಿ ಫಿಲಂಸ್ ಮೂಲಕ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಅವರು ಈ ಚಿತ್ರವನ್ನು ಅದ್ದೂರಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿದ್ದಾರೆ. ಆ ದಿನಗಳು ಖ್ಯಾತಿಯ ಕೆ.ಎಂ.ಚೈತನ್ಯ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ನಿರ್ಮಾಪಕ ಶ್ರೇಯಸ್ ಮಾತನಾಡುತ್ತ ಒಂದು ಚಿತ್ರ ಮಾಡಬೇಕೆಂಬುದು ನನ್ನ ಬಹುದಿನಗಳ ಕನಸು. ಆ ಕನಸಿಗೆ ನನ್ನ ತಂದೆ, ತಾಯಿ ಮತ್ತು ಸಹೋದರ ಶಕ್ತಿ ತುಂಬುತ್ತಿದ್ದಾರೆ. ವಿನೋದ್ ಪ್ರಭಾಕರ್ ಅವರು ನನ್ನ ಗುರುಗಳು. ಅವರ ಸಹಕಾರದಿಂದ ಪದ್ಮಾವತಿ ಫಿಲಂಸ್ ಸಂಸ್ಥೆಯನ್ನು ಹುಟ್ಟುಹಾಕಿ ಆ ಮೂಲಕ ಈ ಚಿತ್ರ ನಿರ್ಮಿಸುತ್ತಿದ್ದೇನೆ ಎಂದರು. ವಿನೋದ್ ಪ್ರಭಾಕರ್ ಮಾತನಾಡಿ ಆ ದಿನಗಳು ಚಿತ್ರ ನೋಡಿದಾಗಿನಿಂದ ನಾನು ಚೈತನ್ಯ ಅವರ ಅಭಿಮಾನಿ. ಅವರ ಜೊತೆಗೆ ಕೆಲಸ ಮಾಡಬೇಕು ಎಂಬ ಆಸೆ ಈಗ ನೆರವೇರಿದೆ. ಅವರ ಕಲ್ಪನೆಯ ಬಲರಾಮನ ಪಾತ್ರಕ್ಕೆ ನನ್ನ ಬೆವರು-ರಕ್ತ ಹರಿಸಿ ನ್ಯಾಯ ಸಲ್ಲಿಸುತ್ತೇನೆ ಎಂದು ಹೇಳಿದರು.

ನಿರ್ದೇಶಕ ಕೆ.ಎಂ.ಚೈತನ್ಯ ಮಾತನಾಡುತ್ತ ನನ್ನ ನಿರ್ದೇಶನದ ಚಿತ್ರಗಳಲ್ಲಿ ಪ್ರತ್ಯಕ್ಷವಾಗಿ ಅಲ್ಲದಿದ್ದರೂ, ಪರೋಕ್ಷವಾಗಿ ಸಂದೇಶ ಹೇಳಿದ್ದೇನೆ. ಇದರಲ್ಲೂ ಅದು ಮುಂದುವರೆಯುತ್ತದೆ. ಭೂಗತಲೋಕದ ಬಗ್ಗೆ ಸಾಕಷ್ಟು ಕಥೆಗಳನ್ನು ರೆಡಿ ಮಾಡಿದ್ದೆ. ಅದರಲ್ಲಿ ಈ ಕಥೆಯನ್ನು ಶ್ರೇಯಸ್ ಅವರೇ ಆಯ್ಕೆ ಮಾಡಿದರು. ಬಹಳ ವರ್ಷಗಳಿಂದ ವಿನೋದ್ ಪ್ರಭಾಕರ್ ಜೊತೆ ಸಿನಿಮಾ ಮಾಡುವ ಆಸೆ ಇತ್ತು. ಅದಕ್ಕೆ ಪೂರಕವಾಗಿ ಈ ಕಥೆ ಸಿಕ್ಕಿದೆ. ಚಿತ್ರದಲ್ಲಿ ಭೂಗತಲೋಕದ ಜೊತೆ ಸಮಾಜ, ರಾಜಕೀಯ ಹೀಗೆ ಎಲ್ಲಾ ಆಯಾಮಗಳೂ ಇರುತ್ತವೆ. ಚಿತ್ರದ ಬಗ್ಗೆ ಈಗಲೇ ಹೆಚ್ಚು ಹೇಳುವುದು ಕಷ್ಟ, ನಿಜಜೀವನದ ಘಟನೆ ಆಧರಿಸಿದ ಕಾಲ್ಪನಿಕ ಚಿತ್ರವಿದು. ಯಾವುದೇ ವ್ಯಕ್ತಿಯ ಕುರಿತಾದ ಚಿತ್ರಣವಲ್ಲ ಎಂದರು.


# 'ಇ-ಮೇಲ್'ನಲ್ಲಿ ಆನ್‌ಲೈನ್ ಗೇಮ್ ಎಫೆಕ್ಟ್




ಇ-ಮೇಲ್ ಮಹಿಳಾ ಪ್ರಧಾನ ಕಥಾಹಂದರ ಹೊಂದಿರುವ ಚಿತ್ರವಾಗಿದ್ದು, ಇದರಲ್ಲಿ ನಟಿ ರಾಗಿಣಿ ದ್ವಿವೇದಿ ಪ್ರಮುಖ ಪಾತ್ರದಲ್ಲಿದ್ದಾರೆ. ಕನ್ನಡ, ತಮಿಳು ಸೇರಿ ಏಕಕಾಲಕ್ಕೆ 2 ಭಾಷೆಗಳಲ್ಲಿ ನಿರ್ಮಾಣವಾಗಿರುವ ಈ ಚಿತ್ರದ ಟ್ರೇಲರ್-ಆಡಿಯೊ ಇತ್ತೀಚೆಗೆ ಬಿಡುಗಡೆಯಾಯಿತು. ಎಸಿಪಿ ಶಂಕರ್, ಪ್ರಕೃತಿಪ್ರಸನ್ನ, ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಸೇರಿದಂತೆ ಹಲವು ಗಣ್ಯರು ಈ ಸಮಾರಂಭದಲ್ಲಿ ಹಾಜರಿದ್ದರು. ಆನ್‌ಲೈನ್ ಗೇಮ್‌ಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಇ-ಮೇಲ್ ಚಿತ್ರದಲ್ಲಿ ಅರಿವು ಮೂಡಿಸಲಾಗಿದೆ. ಎಸ್.ಆರ್.ರಾಜನ್ ಅವರ ನಿರ್ಮಾಣ ಹಾಗೂ ನಿರ್ದೇಶನವಿರುವ ಈ ಚಿತ್ರ ಸದ್ಯದಲ್ಲೇ ಬಿಡುಗಡೆಯಾಗಲಿದೆ.

ಚಿತ್ರದ ನಿರ್ದೇಶಕ ಎಸ್.ಆರ್.ರಾಜನ್ ಮಾತನಾಡುತ್ತ, ತಮಿಳಿನಲ್ಲಿ ನಾನು ಸಾಕಷ್ಟು ಚಿತ್ರಗಳನ್ನು ನಿರ್ಮಿಸಿದ್ದರೂ, ಇ-ಮೇಲ್ ಮೂಲಕ ನಿರ್ದೇಶಕನಾಗಿ ಕನ್ನಡ ಸಿನಿಮಾದ ಮೂಲಕವೇ ಮೊದಲ ಹೆಜ್ಜೆ ಇಟ್ಟಿದ್ದೇನೆ. ಚಿತ್ರದ ಕಥೆ ವಿಭಿನ್ನವಾಗಿದ್ದು ಆನ್‌ಲೈನ್ ಗೇಮ್ ಹಾಗೂ ಅದರ ದುಷ್ಪರಿಣಾಮಗಳ ಬಗ್ಗೆ ಚಿತ್ರದಲ್ಲಿ ಹೇಳಿದ್ದೇವೆ ಎಂದರು. ನಾಯಕ ಮುರುಗ ಅಶೋಕ್ ಮಾತನಾಡುತ್ತ, ತಮಿಳಿನ ಸಾಕಷ್ಟು ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಕನ್ನಡದಲ್ಲಿ ನನ್ನ ಮೊದಲ ಚಿತ್ರವಿದು ಎಂದು ಕನ್ನಡದಲ್ಲೇ ತಮ್ಮ ಪಾತ್ರದ ಬಗ್ಗೆ ವಿವರಿಸಿದರು. ಛಾಯಾಗ್ರಾಹಕ ಸೆಲ್ವಂ ಸೇರಿದಂತೆ ಅನೇಕ ತಂತ್ರಜ್ಞರು ಚಿತ್ರದ ಕುರಿತಂತೆ ಮಾತನಾಡಿದರು. ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಇ-ಮೇಲ್ ಚಿತ್ರತಂಡಕ್ಕೆ ಶುಭ ಕೋರಿದರು. ನಟಿ ರಾಗಿಣಿ ದ್ವಿವೇದಿ, ಮುರುಗ ಅಶೋಕ್, ಮನೋಬಲ, ಜೈಲರ್ ಖ್ಯಾತಿಯ ಬಿಲ್ಲಿ, ಮನೋಹರ್, ಅಕ್ಷಯ್‌ರಾಜ್, ಅರತಿಶ್ರೀ, ಆದವ ಬಾಲಾಜಿ, ಮಂಜು ನಂಜನಗೂಡು, ರಾಮ್ ಸನ್ನಿ, ಅಜಿತ್‌ಕುಮಾರ್, ಕುಮಾರಿ ಸಿಂಚನ, ಕುಮಾರಿ ಅನನ್ಯ ಹಾಗೂ ಇತರರು ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದು, ಬಹುತೇಕ ಕನ್ನಡ ಕಲಾವಿದರೇ ಅಭಿನಯಿಸಿರುವುದು ಈ ಚಿತ್ರದ ವಿಶೇಷ. ಹಾಡುಗಳಿಗೆ ಜುಬಿನ್‌ಪೌಲ್ ಹಾಗೂ ಐಲವ್‌ಯು ಖ್ಯಾತಿಯ ಕಿರಣ್ ತೊಟಂಬೈಲ್(ಕನ್ನಡ) ಅವರುಗಳು ಸಂಗೀತ ಸಂಯೋಜಿಸಿದ್ದಾರೆ. ಕನ್ನಡದಲ್ಲಿ ಸಂತೋಷ್ ನಾಯಕ್ ಸಾಹಿತ್ಯ ಬರೆದಿದ್ದಾರೆ.

# ಸಿನಿಪದಬಂಧ-512



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______



ವಿಜೇತರು: ಕೆ.ದೇವರಾಜು, ಕಂಚಿನಕೆರೆ, ಕೆ.ಆರ್.ನಗರ ತಾಲೂಕು

### ಎಡದಿಂದ ಬಲಕ್ಕೆ

| | |
|---|---|
| 1.ವಿಷ್ಣು-ಸುಹಾಸಿನಿ ಮಣಿಗಳ ಸರ ಪೋಣಿಸಿ ದೇಶಭಕ್ತಿ ಮೆರೆಸಿದ್ದಾರೆ | 5 |
| 6. ಸಾಹಸ ಸಿಂಹನ ಜೊತೆ ಅಕ್ಷಯ್ ಕುಮಾರ್ ಗೆಲುವು ಕಂಡಿದ್ದಾನೆ | 5 |
| 7. ಕನ್ನಡದ ವಿಲನ್ | 5 |
| 9. ರಾಮ್ ಕುಮಾರ್-ಶ್ವೇತಾ ಅಭಿನಯದಲ್ಲಿ ಕೇಳಿ ಬಂದ ನೂಪುರ ಸದ್ದು! | 4 |
| 10.ಯಶ್-ಓವಿಯಾ ಅಭಿನಯದಿ ಬಂದ "ಬೇಡ" | 4 |
| 14. ಅಣ್ಣಾವ್ರ ಮಕ್ಕಳಲ್ಲೊಬ್ಬ ಉರಿಸಿದ ಹಣತೆ | 5 |
| 15. ಅಪ್ಪುವಿನ ಡಾಕ್ಯುಮೆಂಟರಿ ರಮ್ಯ ಮನೋಹರವಾಗಿತ್ತು | 5 |
| 16.ದೃಷ್ಟಿ ಬೀಳಬಾರದೆಂದು ಶಂಕರ್‌ನಾಗ್ ನೇತು ಹಾಕಿದ್ದಾನೆ ಎಚ್ಚರವಿರಲಿ! | 5 |



## ಉಮ್ಮತ್ತೂರು ಇಂದುಶೇಖರ್

ಮೊ.9880820462

### ಸಿನಿ ಪದಬಂಧ 511ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಜೇ | ನು | ಗೂ | ಡು | | ಸು | ಪ್ರ | ಭಾ | ತ | | ವಿ |
| ನಿ | | ಳಿ | | | | ಕಾ | | | | ರ |
| ನ | | | ಜ್ಯೋ | | ಕೆ | ರ | ಳಿ | ದ | ಸಿಂ | ಹ |
| ಹೊ | ಸ | ಇ | ತಿ | ಹಾ | ಸ | | | ಶ | | |
| ಳೆ | | | ಕಾ | | ರಿ | | ನ | ರ | ಸಿಂ | ಹ |
| | | ಪ್ರೇ | | | ನ | | | ಥ | | |
| ಪ್ರೇ | ಮ | ಮ | ಯಿ | | ಕ | | ಮ | | | ಜ |
| | | ಜಾ | | | ಮ | ಧು | ರ | ಮಿ | ಲ | ನ |
| ಜ | ಲ | ಲ | ಜ | ಲ | ಲ | | ಣ | | | ನಾ |
| ಯಂ | | | | ಕ್ಷ್ಮಿ | | | | ಬಿಂ | | ಯ |
| ತಿ | | ಪ | ರಿ | ಣ | ಯ | | ಆ | ಕ | ಸ್ಮಿ | ಕ |

### ಮೇಲಿನಿಂದ ಕೆಳಕ್ಕೆ

| | |
|---|---|
| 1. ಕೆ.ಬಾಲಚಂದರ್ ಗಗನದಿ ಅರಳಿದ ಪುಷ್ಪ! | 6 |
| 2. ಮನ್ಮಥನ ಪ್ರಿಯೆ ಓದಿದ ಪುಸ್ತಕ | 5 |
| 3. ಅಂಬರೀಶ್ ಗೆಲುವಿನ ಕತ್ತಿ ಹಿಡಿದು ಝಳಪಿಸಿದ್ದಾನೆ | 5 |
| 4. ರವಿಯ ಪ್ರೀತಿಯ ಜಗತ್ತು | 4 |
| 5. ವೇದ ಚಿತ್ರದ ಅರಳದ ಮಲ್ಲಿಗೆ ಗೀತೆಯ ಗಾಯಕಿ | 6 |
| 8. ಶಶಿಕುಮಾರ್ ಯಾರೂ ದಿಕ್ಕಿಲದವನನ್ನು ಕಾಪಾಡಿದ್ದಾನೆ | 6 |
| 11. ರಮೇಶ್-ಪ್ರೇಮ ಅಭಿನಯದ ಪುತ್ಥಳಿಗೆ ಎಸ್. ಮಹೇಂದರ್ ನಿರ್ದೇಶಕ | 6 |
| 12. ಕದನ ಚಿತ್ರದ ನಾಯಕಿ ಉತ್ತರಾರ್ಧ ಕ್ರಿಕೆಟಿಗನನ್ನು ಇರಿಸಿಕೊಂಡಿದ್ದಾಳೆ | 5 |
| 13. ಜಯಲಲಿತಾ ಬಂಗಾರದ ಪುತ್ಥಳಿ | 5 |
| 14. ನಟಿ ಜಾನಕಿಯ ಆರಂಭದಲ್ಲಿರುವ ಶ್ರೀಮಂತ | 4 |

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

## ಮತ್ತೆ ನಗಿಸಲು ಬರ್ತಿದ್ದಾರೆ ಕೋಮಲ್



ನಟ ಕೋಮಲ್‌ಕುಮಾರ್ ಬಹಳ ದಿನಗಳ ನಂತರ ಇದೀಗ ಕಿರುತೆರೆಗೆ ಬಂದಿದ್ದಾರೆ, ಕಲರ್ಸ್ ವಾಹಿನಿಯ ಯಶಸ್ವೀ ಹಾಸ್ಯ ಕಾರ್ಯಕ್ರಮ ಗಿಚ್ಚಿಗಿಲಿಗಿಲಿಯ 3ನೇ ಸೀಸನ್ ಕಳೆದ ಶನಿವಾರದಿಂದ ಪ್ರಾರಂಭವಾಗಿದ್ದು, ಇದರಲ್ಲಿ ಹಿರಿಯನಟಿ ಶ್ರುತಿ ಹಾಗೂ ಹಾಸ್ಯನಟ ಸಾಧುಕೋಕಿಲಾ ಜೊತೆಗೆ ಮತ್ತೊಬ್ಬ ತೀರ್ಪುಗಾರರಾಗಿ ನಟ ಕೋಮಲ್‌ಕುಮಾರ್ ಅವರು ಜತೆಗೂಡಿರುವುದು ವಿಶೇಷ. ಈ ಸೀಸನ್‌ನಲ್ಲಿ ಹತ್ತು ಜೋಡಿಗಳು ಭಾಗವಹಿಸಲಿವೆ. ಈ ಕುರಿತಂತೆ ಮಾಹಿತಿ ನೀಡಲು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ನಟಿ ಶೃತಿ, ಸಾಧುಕೋಕಿಲ, ಕೋಮಲ್, ಶೋ ನಿರ್ದೇಶಕ ಪ್ರಕಾಶ್, ನಿರ್ಮಾಪಕರಾದ ಶಿವಧ್ವಜ್, ಪ್ರಶಾಂತ್ ರೈ ಹಾಗೂ ನಿರೂಪಕ ನಿರಂಜನ್ ದೇಶಪಾಂಡೆ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ನಟ ಕೋಮಲ್ ಮಾತನಾಡಿ, ನಾನು ಈ ಹಿಂದೆ ಕಾಮಿಡಿ ಶೋವೊಂದನ್ನು ನಿರ್ಮಿಸಿದ್ದೆ, ಕಾರ್ಯಕ್ರಮವೊಂದರಲ್ಲಿ ಸಿಕ್ಕಿದ್ದ ನಿರ್ಮಾಪಕರು ಗಿಚ್ಚಿಗಿಲಿಗಿಲಿ ಬಗ್ಗೆ ಹೇಳಿದರು. ನಾನೂ ನೋಡಿ, ಎಂಜಾಯ್ ಮಾಡಿದ್ದೆ. ಈಗ ಅದರಲ್ಲಿ ಭಾಗಿಯಾಗಿರುವುದಕ್ಕೆ ಖುಷಿಯಾಗಿದೆ ಎಂದರು.

# ವಿಜೃಂಭಣೆಯ ಶಿವರಾತ್ರೀಶ್ವರ ಶಿವಯೋಗಿಗಳ ರಥೋತ್ಸವ



## ಹರಿದು ಬಂದ ಭಕ್ತ ಸಾಗರ, ರಥೋತ್ಸವದ ಸೊಬಗು ಕಂಡು ಪುಳಕಿತರಾದ ಭಕ್ತ ಸಮೂಹ

ನಂಜನಗೂಡು, ಫೆ.8– ಸುತ್ತೂರು ಜಾತ್ರೆ ಹಿನ್ನೆಲೆಯಲ್ಲಿ ಗುರುವಾರ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರ ರಥೋತ್ಸವ ಲಕ್ಷಾಂತರ ಭಕ್ತರ ಹರ್ಷೋದ್ಗಾರಗಳ ನಡುವೆ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವ ಅಂಗವಾಗಿ ಕರ್ತೃ ಗದ್ದುಗೆಯಲ್ಲಿ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವ ಮೂರ್ತಿಗೆ ರುದ್ರಾಭಿಷೇಕ ಮತ್ತು ವಿವಿಧ ಧಾರ್ಮಿಕ ಕೈಂಕರ್ಯ ನೆರವೇರಿಸಿದ ಬಳಿಕ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ನಂತರ 21 ಕುಶಾಲತೋಪು ಹಾರಿಸುವ ಮೂಲಕ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಮತ್ತು ನಾಡಿನ ವಿವಿಧ ಮಠಾಧೀಶರು ಹಾಗೂ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಬೆಳಗ್ಗೆ 11ಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಗೋವಾ ರಾಜ್ಯಪಾಲ ಶ್ರೀಧರ್‌ಪಿಳ್ಳೈ, ಮಾಜಿ ಸಚಿವ ಮಾಧುಸ್ವಾಮಿ ರಥದ ಹಗ್ಗ ಹಿಡಿದು ಎಳೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಶ್ರೀಕರ್ತೃ ಗದ್ದುಗೆ ಮುಂಭಾಗದಿಂದ ಹೊರಟ ರಥೋತ್ಸವ ಸುತ್ತೂರಿನ ರಾಜಬೀದಿಗಳಲ್ಲಿ ಸಾಗಿ ದೊಡ್ಡಮ್ಮತಾಯಿ ದೇವಸ್ಥಾನದ ವೃತ್ತ ತಲುಪಿ ನಂತರ ಸ್ವಸ್ಥಾನಕ್ಕೆ ತಲುಪಿತು.

ದೊಡ್ಡ ರಥ ಮತ್ತು ಚಿಕ್ಕ ರಥಗಳಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ರಥಗಳಿಗೆ ಕಳಶಾರೋಹಣ ಫಲಪುಷ್ಪ ಅಲಂಕಾರ ಹಾಗೂ ವರ್ಣಾಲಂಕಾರ ಮಾಡಿ ಬಟ್ಟೆಗಳಿಂದ ರಥವನ್ನು ಸಿಂಗರಿಸಲಾಗಿತ್ತು. ಚಿಕ್ಕರಥ ಮತ್ತು ದೊಡ್ಡರಥವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದಾಗ ರಸ್ತೆಯ ಎರಡೂ ಬದಿಗಳಲ್ಲಿ ಭಕ್ತರು ನಿಂತು ಹಣ್ಣು ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು.

ಶ್ರೀಮಠದ ಸಕಲ ಬಿರುದಾವಳಿಗಳ ಸಮೇತ ನಂದಿ ಧ್ವಜ, ಛತ್ರಿ ಚಾಮರ, ಸೂರಿಪಾನಿ, ಲಿಂಗಾಧೀರರು, ನಾದಸ್ವರ, ಸ್ಯಾಕ್ಸೋಫೋನ್, ವೀರಗಾಸೆ, ಪೂಜಾ ಕುಣಿತ, ಗಾರುಡಿ ಗೊಂಬೆ, ತಮಟೆ ಮತ್ತು ನಗಾರಿ, ಡೊಳ್ಳು ಕುಣಿತ, ಜಾಂಜ್ ಮೇಳ, ಮರಗಾಲು ನೃತ್ಯ, ಕಂಸಾಳೆ, ಪಟ್ಟದ ಕುಣಿತ, ಹುಲಿವೇಷಧಾರಿಗಳು, ದಾನಪಟ್ಟಿ, ದೊಣ್ಣೆವರಸೆ, ವೀರಮಕ್ಕಳ ಕುಣಿತ, ಜಾನಪಥಕ್, ಕೋಲಾಟಂ, ಕರಗಟ್ಟಂ ಮತ್ತು ಕಾವಡಿಯಾಟಂ, ಗೊರವರ ಕುಣಿತ, ಕೋಲಾಟ ಸೇರಿದಂತೆ 35ಕ್ಕೂ ಹೆಚ್ಚು ಕಲಾ ತಂಡಗಳು ರಥೋತ್ಸವಕ್ಕೆ ಮೆರಗು ತಂದವು. ಭಕ್ತರ ಉತ್ಸಾಹ ಮತ್ತು ಭಾವವೇಶ ಉತ್ತುಂಗಕ್ಕೇರಿ ಜಯ ಶಿವರಾತ್ರೀಶ್ವರ ಎಂಬ ಘೋಷಣೆ ಗಳು ಮುಗಿಲು ಮುಟ್ಟಿದವು.

ರಾಜ್ಯದ ವಿವಿಧ ಮೂಲೆಗಳಿಂದ ಬಂದಿದ್ದ ಲಕ್ಷಾಂತರ ಭಕ್ತರು ರಥೋತ್ಸವದಲ್ಲಿ ಭಾಗಿಯಾಗಿ ಜಾತ್ರೆ ಸೊಬಗನ್ನು ಕಣ್ತುಂಬಿಕೊಂಡರು. ರಥೋತ್ಸವ ವೀಕ್ಷಿಸಲು ಸಾಗರೋಪಾದಿಯಲ್ಲಿ ಭಕ್ತರು ಆಗಮಿಸಿದ ಹಿನ್ನೆಲೆಯಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.



ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಕಲಾತಂಡಗಳು.

# ರಾಜ್ಯ ಸರ್ಕಾರ ಮತ್ತೆ ಕಿಸಾನ್ ಸಮ್ಮಾನ್ ಯೋಜನೆ ಜಾರಿಗೊಳಿಸಲಿ

## ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಒತ್ತಾಯ

ನಂಜನಗೂಡು, ಫೆ.8– ಕಿಸಾನ್ ಸಮ್ಮಾನ್ ಯೋಜನೆಯಡಿ ಕೇಂದ್ರ ಸರ್ಕಾರ 6 ಸಾವಿರ ಕೊಟ್ಟರೆ, ನಾನು ಮುಖ್ಯಮಂತ್ರಿಯಾಗಿದ್ದ ವೇಳೆ ಅದಕ್ಕೆ 4 ಸಾವಿರ ಸೇರಿಸಿ ಒಟ್ಟು 10 ಸಾವಿರ ರೂ.ಗಳನ್ನು ರೈತರ ಖಾತೆಗೆ ಜಮಾ ಮಾಡುತ್ತಿದ್ದೇವು. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಈ ಯೋಜನೆ ಸ್ಥಗಿತಗೊಳಿಸಿರುವುದು ಖಂಡನೀಯ. ಬರಗಾಲದ ಈ ಸಂದರ್ಭ ಮತ್ತೆ ಈ ಯೋಜನೆಯನ್ನು ಆರಂಭಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಒತ್ತಾಯಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುತ್ತಿರುವ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ರಥೋತ್ಸವ ಮತ್ತು ಧಾರ್ಮಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗಿದೆ. ಈಗಾಗಲೇ ಬಿಸಿಲಿನ ಧಗೆ ಹೆಚ್ಚಾಗಿದ್ದು, ಮುಂಬರುವ ದಿನಗಳಲ್ಲಿ ಕೆಆರ್‌ಎಸ್ ಅಣೆಕಟ್ಟೆ ಸೇರಿದಂತೆ ಕೆರೆಕಟ್ಟೆ ಖಾಲಿಯಾಗಿ ನೀರಿಗೆ ಹಾಹಾಕಾರ ಉಂಟಾಗಬಹುದು. ಬರಗಾಲ ಹಿನ್ನೆಲೆಯಲ್ಲಿ ರೈತರು ಶೇ.25 ರಷ್ಟು ಬೆಳೆ ಬೆಳೆದಿಲ್ಲ. ಹೀಗಾಗಿ ಭವಿಷ್ಯದ ಬಗ್ಗೆ ಯೋಚಿಸುವ ಮೂಲಕ ನಾವೆಲ್ಲರೂ ಒಟ್ಟಾಗಿ ಬರುವ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಬೇಕಿದೆ. ಈ ನಿಟ್ಟಿನಲ್ಲಿ ನನಗೆ 81 ವರ್ಷ ತುಂಬಿದರೂ ರಾಜ್ಯಾದ್ಯಂತ ಪ್ರವಾಸ ಮಾಡಿ ನಿಮ್ಮ ಜೊತೆ ನಿಲ್ಲುತ್ತೇನೆ ಎಂದ ಅವರು, ನಾನು ಸಿಎಂ ಆಗಿದ್ದ ವೇಳೆ ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಭಾಗ್ಯಲಕ್ಷ್ಮಿ ಯೋಜನೆ ಜಾರಿಗೆ ತಂದೆ. ಇದರಿಂದ 25 ಲಕ್ಷ ಬಡ ಹೆಣ್ಣು ಮಕ್ಕಳು ಈ ಯೋಜನೆ ಲಾಭ ಪಡೆದಿದ್ದಾರೆ ಎಂದರು.




ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ರಥೋತ್ಸವ ಮತ್ತು ಧಾರ್ಮಿಕ ಸಭೆ ಉದ್ಘಾಟಿಸಿ ಮಾತನಾಡುತ್ತಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ

ಮಠಮಾನ್ಯಗಳ ಅನ್ನ, ಆರೋಗ್ಯ, ಅಕ್ಷರ ದಾಸೋಹದಿಂದಾಗಿ ಸರ್ಕಾರದ ಮೇಲಿನ ಹೊರೆ ಕಡಿಮೆಯಾಗಿದೆ. ಹೀಗಾಗಿ ನಾನು ಸಿಎಂ ಆಗಿದ್ದ ವೇಳೆ ಎಷ್ಟೇ ಟೀಕೆಗಳು ಎದುರಾದರೂ ಮಠಗಳು ಸೇರಿದಂತೆ ಎಲ್ಲಾ ಧರ್ಮಗಳ ಪೂಜ್ಯನೀಯ ಸ್ಥಳಗಳ ಅಭಿವೃದ್ಧಿಗೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂದು ಭೇದಭಾವ ಮಾಡದೇ ಅನುದಾನ ನೀಡಿದ್ದೇನೆ. ಆಡಳಿತ ನಡೆಸುವವರು ರಾಜ್ಯದ ಎಲ್ಲಾ ವರ್ಗಗಳಿಗೂ ಅನುಕೂಲವಾಗುವ ಯೋಜನೆ ಜಾರಿಗೊಳಿಸಬೇಕು ಎಂದರು.

ಸುತ್ತೂರು ಜಾತ್ರೆಯನ್ನು ಯಾವುದೇ ಜಾತಿ ಭೇದವಿಲ್ಲದೆ ಸುತ್ತಮುತ್ತಲ ಗ್ರಾಮದ ಜನರು ಹಬ್ಬದಂತೆ ಆಚರಿಸುವುದನ್ನು ನೋಡಲು ಬಹಳ ಸಂತೋಷವಾಗುತ್ತದೆ. ಈ ಜಾತ್ರಾ ಮಹೋತ್ಸವ ಕೇವಲ ಧಾರ್ಮಿಕ ಉತ್ಸವವಾಗಿರದೆ, ಜನಸಾಮಾನ್ಯರಿಗೆ ಉಪಯೋಗವಾಗುವ ಅನೇಕ ವಿಚಾರಗಳ ಬಗ್ಗೆ, ಪ್ರಾತ್ಯಕ್ಷಿಕೆ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಅಲ್ಲದೇ ಗ್ರಾಮೀಣ ಕ್ರೀಡೆಗಳಿಗೂ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಮಾಜಿ ಸಚಿವ ಮುರುಗೇಶ್ ನಿರಾಣಿ ಮಾತನಾಡಿ, 2008ರಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಸುತ್ತೂರು ಶ್ರೀಕ್ಷೇತ್ರದಲ್ಲಿ ಮಂತ್ರಿ ಮಂಡಲಕ್ಕೆ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿತ್ತು ಎಂದು ಸ್ಮರಿಸಿದ ಮಾಜಿ ಸಚಿವರು, ಪ್ರವಾಹ ಸಂದರ್ಭ ಉತ್ತರ ಕರ್ನಾಟಕದ ವಿಜಯಪುರ ಜಿಲ್ಲೆಯ ಕೊಟಾಳು ಗ್ರಾಮದಲ್ಲಿ 330 ಮನೆಗಳನ್ನು ನಿರ್ಮಿಸಿಕೊಟ್ಟ ಕೀರ್ತಿ ಸುತ್ತೂರು ಶ್ರೀಗಳಿಗೆ ಸಲ್ಲುತ್ತದೆ ಎಂದರು. ಮಾಜಿ ಸಚಿವ ಮಾಧುಸ್ವಾಮಿ ಮಾತನಾಡಿ, ಮಠಗಳು ಶೈಕ್ಷಣಿಕವಾಗಿ ಶಕ್ತಿ ನೀಡಿರುವುದನ್ನು ಮರೆಯುವಂತಿಲ್ಲ. ಬಡ, ಶೋಷಿತ ವರ್ಗದ ಜನರಿಗೆ ಅನ್ನ ನೀಡಿ ಶಿಕ್ಷಣ ನೀಡಿರುವ ಮಠಗಳಿಗೆ ಎಂದಿಗೂ ಶರಣಾಗಬೇಕು ಎಂದರು.

> ದೇಶದಲ್ಲಿ ಬೆಲೆ ಏರಿಕೆಯಿಂದಾಗಿ ಬಡ ಜನರು ಸಂಕಷ್ಟದಲ್ಲಿದ್ದಾರೆ. ಭಾರತ್ ಬ್ರಾಂಡ್ ಯೋಜನೆಯಡಿ 29 ರೂ.ಗೆ ಅಕ್ಕಿ, 60 ರೂ.ಗೆ ಕಡ್ಲೆಬೇಳೆ, 27.5 ರೂ.ಗೆ ಗೋಧಿ ಹಿಟ್ಟು ಹಾಗೂ 93 ರೂ.ಗೆ ಬೇಳೆ ಕೊಡುವ ಐತಿಹಾಸಿಕ ತೀರ್ಮಾನವನ್ನು ಪ್ರಧಾನಿ ಮೋದಿ ಮಾಡಿದ್ದಾರೆ. ಹೀಗಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.
> – ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ.

ಗೋವಾ ರಾಜ್ಯಪಾಲ ಶ್ರೀಧರನ್ ಪಿಳ್ಳೈ ಮಾತನಾಡಿ, 12ನೇ ಶತಮಾನದಲ್ಲೇ ಬಸವಣ್ಣನವರು ಮೊದಲ ಸಂಸತ್ತು ಸ್ಥಾಪಿಸಿರುವುದು ಹೆಮ್ಮೆಯ ವಿಚಾರ. ವಿವೇಕಾನಂದರ ಮಾತುಗಳು ಅನೇಕ ದೇಶಭಕ್ತರು, ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರೇರಣೆಯನ್ನುಂಟು ಮಾಡಿತ್ತು ಎಂದರು. ಸಮಾರಂಭದಲ್ಲಿ ಸುತ್ತೂರು ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ, ಶ್ರವಣಬೆಳಗೊಳದ ಜೈನಮಠದ ಪಂಡಿತಾಚಾರ್ಯವರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಶಾಸಕರಾದ ಟಿ.ಎಸ್.ಶ್ರೀವತ್ಸ, ಎ.ಮಂಜು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಸೋಮಶೇಖರ್, ಮಾಜಿ ಶಾಸಕ ನಿರಂಜನ್ ಕುಮಾರ್, ನಾಗೇಂದ್ರ ವಿಜಯ ಕರ್ನಾಟಕ ಪತ್ರಿಕೆ ಕಾರ್ಯ ನಿರ್ವಹಣಾಧಿಕಾರಿ ದೀಪಕ್ ಸಲೂಜ, ಬೆಟಸೂರು ಮಠ್ ಇದ್ದರು.



# ಸುತ್ತೂರು ಜಾತ್ರೆಯಲ್ಲಿ ದೇಸಿ ಆಟಗಳ ಕಲರವ

ನಂಜನಗೂಡು, ಫೆ.8– ಮನುಷ್ಯನ ಒತ್ತಡದ ಬದುಕಿನಲ್ಲಿ ಮೊಬೈಲ್, ಟಿವಿಗಳಿಂದಾಗಿ ಕಣ್ಮರೆಯಾಗುತ್ತಿರುವ ದೇಸಿ ಆಟಗಳನ್ನು ಉತ್ತೇಜಿಸುವ ಜೊತೆಗೆ, ಯುವಜನರಿಗೆ ದೇಸಿ ಆಟಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದೇಸಿ ಆಟಗಳ ಕ್ರೀಡಾಕೂಟ ಆಯೋಜಿಸಲಾಗಿದೆ.

ಜಾತ್ರಾ ಮಹೋತ್ಸವದಲ್ಲಿ ಗ್ರಾಮೀಣ ಸೊಗಡು ಸಾರುವ ಗೋಲಿ, ಬುಗರಿ, ಚೌಕಾಬಾರ, ಹಾವು–ಏಣಿ ಆಟ, ಪಗ್ಗದ ಆಟ(ತಾಬ್ಲ) ಪಂಜಿ, ಹಗ್ಗ–ಜಗ್ಗಾಟ, ಕೆಸರು ಗದ್ದೆ ಓಟ, ಕೆಸರುಗದ್ದೆಯಲ್ಲಿ ಹಗ್ಗ–ಜಗ್ಗಾಟ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಡಿಕೆ ಹೊಡೆಯುವುದು, ಅಳಿಗುಳಿ ಮನೆ, ಆಣೆಕಲ್ಲು, ತುಂಬಿದ ಬಿಂದಿಗೆ ತಲೆ ಮೇಲೆ ಹೊತ್ತು ಓಡುವುದು, ಪುರುಷರ ವಿಭಾಗದಲ್ಲಿ ಕಲ್ಲುಗುಂಡು ಎತ್ತುವುದು, 50 ಕೆಜಿ ತುಂಬಿದ ಚೀಲ ಹೊತ್ತು ಓಡುವುದು ಸೇರಿದಂತೆ ಇನ್ನಿತರ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.



**ಗುಂಡು ಎತ್ತಿದರು, ಎದ್ದು–ಬಿದ್ದು ಓಡಿದರು:** ಗುಂಡು ಎತ್ತುವ ಸ್ಪರ್ಧೆಯಲ್ಲಿ ಯುವಕರು ನಾ ಮುಂದು, ತಾ ಮುಂದು ಎಂದು ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ತಮ್ಮ ಶಕ್ತಿ ಪ್ರದರ್ಶನ ತೋರಿದರು. ಅಲ್ಲದೇ 50 ಕೆಜಿ ಚೀಲ ಹೊತ್ತು ಓಡುವ ಸ್ಪರ್ಧೆಯಲ್ಲಿ ಎದ್ದು ಬಿದ್ದು ಓಡುವ ಮೂಲಕ ಗುರಿ ಮುಟ್ಟಲು ಪೈಪೋಟಿ ನಡೆಸಿದರು. ಈ ವೇಳೆ ನೆರೆದಿದ್ದ ಪ್ರೇಕ್ಷಕರು ಶಿಳ್ಳೆ, ಚಪ್ಪಾಳೆ ಹೊಡೆಯುವ ಮೂಲಕ ಸ್ಪರ್ಧಿಗಳನ್ನು ಉರಿದುಂಬಿಸಿದರು. ಕೆಸರು ಗದ್ದೆ ಓಟದಲ್ಲಿ ಕೆಸರಿನಲ್ಲಿ ಬೀಳುವುದನ್ನು ಲೆಕ್ಕಿಸದೆ ಗುರಿ ಮುಟ್ಟಲು ಪೈಪೋಟಿ ನಡೆಸಿ ಸಂಭ್ರಮಪಟ್ಟರು.

ಮಹಿಳೆಯರಿಗಾಗಿ ಆಣೆಕಲ್ಲು, ಅಳಿಗುಳಿ ಮನೆ ಆಟ ಸೇರಿದಂತೆ ಇನ್ನಿತರ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕ್ರೀಡಾಕೂಟದಲ್ಲಿ 13 ಪ್ರಾಥಮಿಕ ಶಾಲೆಯ 150 ಬಾಲಕರು, 125 ಬಾಲಕಿಯರು ಸೇರಿದಂತೆ 275 ವಿದ್ಯಾರ್ಥಿಗಳು, 53 ಪ್ರೌಢಶಾಲೆಗಳಿಂದ 858 ಬಾಲಕರು, 565 ಬಾಲಕಿಯರು ಸೇರಿದಂತೆ 1423 ವಿದ್ಯಾರ್ಥಿಗಳು, 8 ಪಬ್ಲಿಕ್ ಶಾಲೆಗಳಿಂದ 209 ಬಾಲಕರು, 156 ಬಾಲಕಿಯರು ಸೇರಿದಂತೆ 365 ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಪ್ರಸ್ತುತ ಅಂಕ ಗಳಿಸಲು ಪೈಪೋಟಿ: ಮಾನವೀಯ ಮೌಲ್ಯ ಕುಸಿತ

**ಶಾಸಕ ತನ್ವೀರ್ ಸೇಠ್ ವಿಷಾದ**

ನಂಜನಗೂಡು, ಫೆ.8– ಇಂದಿನ ಶಿಕ್ಷಣ ಪದ್ಧತಿ ಕೇವಲ ಅಂಕ ಗಳಿಸಲು ಪೈಪೋಟಿಯಾಗಿರುವ ಕಾರಣ ಸಂಸ್ಕೃತಿ, ಮಾನವೀಯ ಮೌಲ್ಯಗಳು ಕುಸಿಯುತ್ತಿವೆ ಎಂದು ಶಾಸಕ ತನ್ವೀರ್ ಸೇಠ್ ವಿಷಾದಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುತ್ತಿರುವ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ 53ನೇ ದನಗಳ ಜಾತ್ರೆ, ಚಿತ್ರಕಲಾ ಸ್ಪರ್ಧೆ ಮತ್ತು ಗಾಳಿಪಟ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಸಂಸ್ಕೃತಿ, ಪರಂಪರೆ, ಉಳಿಸಿ ಬೆಳೆಸಲು ವಿದ್ಯಾರ್ಥಿಗಳಿಗೆ ಮೌಲ್ಯಯುತ ಸಂಸ್ಕೃತಿ, ಸಂಸ್ಕಾರಯುತ ಶಿಕ್ಷಣ ನೀಡಬೇಕು. ಕೇವಲ ಪುಸ್ತಕದಲ್ಲಿರುವ ಶಿಕ್ಷಣ ದೊರಕಿದರೆ ಸಮಾಜಕ್ಕೆ ಒಳಿತಾಗುವುದಕ್ಕಿಂತ ಹಾನಿಯಾಗುವುದೇ ಹೆಚ್ಚು ಎಂದರು.

ಇಂದಿನ ಸ್ಪರ್ಧಾ ಜಗತ್ತಿನಲ್ಲಿ ದನಕರುಗಳನ್ನು ಸಾಕುವುದು ಕಷ್ಟಕರ. ಆದರೂ ಗ್ರಾಮೀಣ ಜನರು ತಮ್ಮ ಬದುಕಿನ ಭಾಗವಾಗಿ ಪ್ರೀತಿಯಿಂದ ಸಾಕುತ್ತಾರೆ. ಸಂಸ್ಕೃತಿ, ಪರಂಪರೆ ನಶಿಸುತ್ತಿರುವ ಕಾಲಘಟ್ಟದಲ್ಲಿ ಸುತ್ತೂರು ಜಾತ್ರೆ ಮಹೋತ್ಸವದಲ್ಲಿ ಗ್ರಾಮೀಣ ಬದುಕು ಅನಾವರಣಗೊಳ್ಳುತ್ತಿದೆ ಎಂದರು.

ಸುತ್ತೂರು ಶ್ರೀಮಠದೊಂದಿಗಿನ ನಮ್ಮ ಸಂಬಂಧ ಮುತ್ತಾತನ ಕಾಲದ್ದು. ಕುದುರೆ ಸವಾರಿಯಲ್ಲಿ ಶ್ರೀಮಠಕ್ಕೆ ಅವರು ಬರುತ್ತಿದ್ದರು. ಈಗಲೂ ಸಹ ಶ್ರೀ ಮಠದೊಂದಿಗೆ ನಮ್ಮ ಕುಟುಂಬದ ಸಂಬಂಧ ಮುಂದುವರೆದಿದೆ. ಕ್ಷೇತ್ರದ ಮನೆ ಮಗನಾಗಿ ಭಕ್ತಿಪೂರ್ವಕವಾಗಿ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗಿಯಾಗುತ್ತೇನೆ ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ರೈತರಿಗೆ, ವಿದ್ಯಾರ್ಥಿಗಳಿಗೆ, ಗ್ರಾಮೀಣ ಜನರಿಗೆ ಬೇಕಾಗಿರುವ ಅರಿವು ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದೊರೆಯುತ್ತಿದೆ. ಶ್ರೀಕ್ಷೇತ್ರದಲ್ಲಿ ಕೃಷಿ ತರಬೇತಿ ಪಡೆದ ರೈತರು ಪ್ರಗತಿಪರ ರೈತರಾಗಿ ಹೊರಹೊಮ್ಮಿದ್ದಾರೆ. ಜೊತೆಗೆ ಸುತ್ತೂರು ಶ್ರೀಕ್ಷೇತ್ರದ ಶೈಕ್ಷಣಿಕ ಸಂಸ್ಥೆಗಳಿಂದ ರೈತರ ಮಕ್ಕಳು ಶಿಕ್ಷಿತರಾಗಿ ಉದ್ಯೋಗಸ್ಥರಾಗಲು ಕಾರಣವಾಗಿದೆ. ಅಲ್ಲದೆ ಜನರಿಗೆ ಧಾರ್ಮಿಕತೆ ಜೊತೆಗೆ ಸಂಸ್ಕಾರ ಮೂಡಿಸುವ ಕೆಲಸವನ್ನು ಸುತ್ತೂರು ಮಠ ಮಾಡುತ್ತಿದೆ ಎಂದರು.

ಈ ಭಾಗದಲ್ಲಿ ಕೆರೆ ಕಟ್ಟೆ ತುಂಬಲು ಸುತ್ತೂರುಶ್ರೀಗಳೇ ಕಾರಣ. ನಾನು 1 ಮತಗಳ ಅಂತರದಿಂದ ಸೋತ ನಂತರ 19 ವರ್ಷಗಳ ರಾಜಕೀಯ ವನವಾಸ ಮುಗಿಸಿ 3ನೇ ಬಾರಿಗೆ ಶಾಸಕನಾಗಲು ಶ್ರೀಗಳೇ ಕಾರಣ. ಚುನಾವಣೆಗಿಂತ ಮುಂಚೆ ಶ್ರೀಕ್ಷೇತ್ರಕ್ಕೆ ಬಂದು ದರ್ಶನ ಪಡೆದು ಪೂಜೆ ಸಲ್ಲಿಸಿದ ನಂತರ ನಾನು 3ನೇ ಅವಧಿಗೆ ಶಾಸಕನಾಗಿದ್ದೇನೆ ಎಂದರು.

ಬೆಳಗಾವಿ ಜಿಲ್ಲೆ ಪಿ.ಜಿ.ಹುಣಶ್ಯಾಳ ಸಿದ್ದಲಿಂಗ ಕೈವಲ್ಯಾಶ್ರಮದ ನಿಜಗುಣದೇವರು ಮಾತನಾಡಿ, ಸುತ್ತೂರು ಮಠ ಜಾತಿ, ಧರ್ಮದ ಎಲ್ಲೆ ಮೀರಿ ಎಲ್ಲರನ್ನೂ ಪ್ರೀತಿಯಿಂದ ಪೋಷಿಸುವ ಮೂಲಕ 12ನೇ ಶತಮಾನದಲ್ಲಿ ಬಸವಣ್ಣನವರು ನುಡಿದಂತೆ ನಡೆದ ಮಠ ಎನಿಸಿದೆ. ಗ್ರಾಮೀಣ ಜನರಿಗೆ ಧಾರ್ಮಿಕತೆ ಜೊತೆಗೆ ಮನಸ್ಸಿಗೆ ಸಂತೋಷ ನೀಡುವಂತಹ ವಾತಾವರಣ ಕಲ್ಪಿಸಿದೆ ಎಂದರು.

ಇದೇ ವೇಳೆ ಚಿತ್ರಕಲಾ ಸ್ಪರ್ಧೆಯನ್ನು ಕು.ಪ್ರತೀಕ್ಷಾ ಕಾವ್ಯ ಕುಂಚದ ಚಿತ್ರ ಬಿಡಿಸುವ ಮೂಲಕ ಹಾಗೂ ಗಾಳಿಪಟ ಸ್ಪರ್ಧೆಯನ್ನು ಗಾಳಿಪಟ ಪ್ರದರ್ಶನ ಮಾಡುವ ಮೂಲಕ ಉದ್ಘಾಟಿಸಲಾಯಿತು.

ಸಮಾರಂಭದಲ್ಲಿ ಸುತ್ತೂರು ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ, ಅಭಿನವ ಸಿದ್ದರೂಢ ಸ್ವಾಮೀಜಿ, ನಿವೃತ್ತ ಜಿಲ್ಲಾಧಿಕಾರಿ ಜಿ.ಎನ್.ಶಿವಮೂರ್ತಿ, ಕರ್ನಾಟಕ ಮಾಹಿತಿ ಆಯೋಗದ ಆಯುಕ್ತ ಎಸ್.ಬಿ.ಬೊಮ್ಮನಹಳ್ಳಿ, ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್, ಪ್ರೊ.ಸುಬ್ಬಪ್ಪ ಉಪಸ್ಥಿತರಿದ್ದರು.



ಜಾತ್ರಾ ಮಹೋತ್ಸವದಲ್ಲಿ 53ನೇ ದನಗಳ ಜಾತ್ರೆ, ಚಿತ್ರಕಲಾ ಸ್ಪರ್ಧೆ ಮತ್ತು ಗಾಳಿಪಟ ಸ್ಪರ್ಧೆಯನ್ನು ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದರು.



# ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಈಗಲ್ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಕಾಟೇರ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಜಸ್ಟ್ ಪಾಸ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಒಂದು ಸರಳ ಪ್ರೇಮಕಥೆ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಲಾಲ್ ಸಲಾಂ (ತ) | 4 ಪ್ರದರ್ಶನಗಳು |
| **ಸಂಗಂ** | |
| ಉಪಾಧ್ಯಕ್ಷ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಅಲೆಕ್ಸ್ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಈಗಲ್ (ತೆ) | 4 ಪ್ರದರ್ಶನಗಳು |
| **ಪ್ರಭಾ** | |
| ಪ್ರಣಯಂ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಉಪಾಧ್ಯಕ್ಷ (ಕ): ಬೆ.10.10ಕ್ಕೆ, ಮ.1.10ಕ್ಕೆ, ಈಗಲ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ. |
| ಸ್ಕ್ರೀನ್ 2 | ಪ್ರಣಯಂ (ಕ): ಬೆ.10.30ಕ್ಕೆ, ಜಸ್ಟ್ ಪಾಸ್ (ಕ): ಮ.1.20ಕ್ಕೆ, ಫೈಟರ್ (ಹಿಂ): ಸಂ.4ಕ್ಕೆ, ಪ್ರೇಮಲು (ಮ): ರಾ.7.15ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.10.15ಕ್ಕೆ. |
| ಸ್ಕ್ರೀನ್ 3 | ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.10.40ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ, ಲವ್ವರ್ (ತ): ಮ.1.20ಕ್ಕೆ, ಉಪಾಧ್ಯಕ್ಷ (ಕ): ಸಂ.4.10ಕ್ಕೆ. |
| ಸ್ಕ್ರೀನ್ 4 | ಒಂದು ಸರಳ ಪ್ರೇಮಕಥೆ (ಕ): ಬೆ.10.10ಕ್ಕೆ, ರಾ.7.10ಕ್ಕೆ, ಲಾಲ್ ಸಲಾಂ (ತ): ಮ.1.10ಕ್ಕೆ, ಸಂ.4.10ಕ್ಕೆ, ಯಾತ್ರಾ 2 (ತೆ): ರಾ.10ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಲಾಲ್ ಸಲಾಂ (ತ): ಬೆ.9.40ಕ್ಕೆ, ಸಂ.4.05ಕ್ಕೆ, ಉಪಾಧ್ಯಕ್ಷ (ಕ): ಮ.12.50ಕ್ಕೆ, ರಾ.7.15ಕ್ಕೆ, ಈಗಲ್ (ತೆ): ರಾ.10.30ಕ್ಕೆ. |
| ಸ್ಕ್ರೀನ್ 3 | ಒಂದು ಸರಳ ಪ್ರೇಮಕಥೆ (ಕ): ಬೆ.11.15ಕ್ಕೆ, ಈಗಲ್ (ತೆ): ಮ.2.25ಕ್ಕೆ, ಲವ್ವರ್ (ತ): ಸಂ.6.25ಕ್ಕೆ, ಲಾಲ್ ಸಲಾಂ (ತ): ರಾ.9.30ಕ್ಕೆ. |
| ಸ್ಕ್ರೀನ್ 4 | ಫೈಟರ್ (ಹಿಂ): ಮ.12.05ಕ್ಕೆ, ಉಪಾಧ್ಯಕ್ಷ (ಕ): ಮ.3.35ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.50ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.10ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ |
| ಸ್ಕ್ರೀನ್ 2 | ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ. |
| ಸ್ಕ್ರೀನ್ 3 | ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ |
| ಸ್ಕ್ರೀನ್ 4 | ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ. |

### ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ & 3ಡಿ)(ಹಿಂ): ಬೆ.11.15ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ಬೆ.11.50ಕ್ಕೆ, ಮ.3ಕ್ಕೆ, ಸಂ.6.20ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.9.30ಕ್ಕೆ, ಜಸ್ಟ್ ಪಾಸ್ (ಕ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.2.55ಕ್ಕೆ, ರಾ.10.25ಕ್ಕೆ, ಲವ್ವರ್ (ತ): ಮ.12.15ಕ್ಕೆ, ಸಂ.6.40ಕ್ಕೆ, ಈಗಲ್ (ತೆ): ಮ.3.20ಕ್ಕೆ, ರಾ.9.45ಕ್ಕೆ, ಲಾಲ್ ಸಲಾಂ (ತ): ಬೆ.11.40ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಮೈಸೂರು ಚಳಿಗಾಲದ ರೇಸುಗಳು

12ನೇ ದಿನ, ಶುಕ್ರವಾರ 9–2–2024

## ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಮಂಗಳೂರು ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಗೋಲ್ಡನ್ ಬರ್ಡ್ 2. ರೈಜ್ ಎ ಬಕ್ 3. ಹಿಯರ್ ಐ ಕಮ್

II. ಹಂಪಿ ಪ್ಲೇಟ್ ಡಿII—1400 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ರೈಸಿಂಗ್ ಸನ್ 2. ಬ್ರೇಕ್ ಅವೇ 3. ಸೂಪರ್ ಸೆಕ್ಸಿ

III. ಬಾಬಾಬುಡನ್ ಗಿರಿ ಪ್ಲೇಟ್ ಡಿII—1100 ಮೀ. ರೇಟೆಡ್ 40 ರಿಂದ 65. ಮ.2.30ಕ್ಕೆ
1 ಟ್ವಿಲೈಟ್ ಫೇಮ್ 2. ಔರೆಲಿ 3 ಇನ್‌ಎಫೆಬಲ್

IV. ಹಂಪಿ ಪ್ಲೇಟ್ ಡಿI—1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಕೋಡ್ ಆಫ್ ಹಾನರ್ 2. ಜಿನ್ ಟೋಕಿ 3. ಗೈಡಿಂಗ್ ಫೋರ್ಸ್

V. ಆಂದೋಲನ ಟ್ರೋಫಿ–1200 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1 ಸ್ಪಾರ್ಕ್‌ಲಿಂಗ್ ನೈಟ್ 2. ಆಲ್‌ಗೋಜ್ 3. ಮೆ ಬರಿ

VI. ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ–1400 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1 ಅಬೂಷನ್ 2. ಭಾರತ್ 3. ರೋಡ್ ರನ್ನರ್

VII. ಬಾಬಾಬುಡನ್ ಗಿರಿ ಪ್ಲೇಟ್ ಡಿI—1100 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1 ಟ್ರೆಸರ್ ಬುಲೆಟ್ 2. ಬ್ಲೂ ಒರಿಜನ್ 3. ಮಾರ್ಚ್ ಟು ವಿಕ್ಟರಿ

VIII. ಆಂದೋಲನ ಟ್ರೋಫಿ–1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಕಿಂಗ್ ಆಫ್ ಕೇಸರಿ 2. ರನ್ನಿಂಗ್ ಬೋಲ್ಟ್ 3. ಪೋಲಾರ್ ಕ್ವೀನ್

| | |
|---|---|
| ದಿನದ ಅತ್ಯುತ್ತಮ | : ರೈಸಿಂಗ್ ಸನ್ |
| ಡಬ್ಬಲ್ | : ಟ್ರೇಸರ್ ಬುಲೆಟ್, ಕಿಂಗ್ ಆಫ್ ಕೇಸರಿ |
| ಜಾಕ್‌ಪಾಟ್ | : 4, 5, 6, 7 ಮತ್ತು 8 |
| ಮಿನಿ ಜಾಕ್‌ಪಾಟ್ | : 5, 6, 7 ಮತ್ತು 8 |
| I ಟ್ರಿಬಲ್ | : 1, 2 ಮತ್ತು 3 |
| II ಟ್ರಿಬಲ್ | : 3, 4 ಮತ್ತು 5 |
| III ಟ್ರಿಬಲ್ | : 6, 7 ಮತ್ತು 8 |
| ಎಕ್ಸ್‌ಆಕ್ಟ್ | : 1 ರಿಂದ 8 |

ಟಿಪ್‌ಸ್ಟರ್ ಪಿಜಿಸಿ

44 ಮೈಸೂರು ಮಿತ್ರ

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



## PUBLIC NOTICE

Notice is hereby given that SMT. BHAGYA, wife of Late Borappa and her children (1) Smt. Usha. B (2) Smt. Lakshmi @ Asha, are desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570-002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

**SCHEDULE PROPERTY**

Converted Land for Residential Purpose bearing following Survey Numbers, Extents and Boundaries, situated at Aiyajayanahundi Village, Kasaba Hobli, Mysore Taluk.

| Survey No. | Extent | | Boundaries | | | |
|---|---|---|---|---|---|---|
| | A | G | East | West | North | South |
| 15 | 1 | 32 | Sy. No.13 | Ring Road | Sy. No.17 Kere | Dattagalli Boundary |
| 16 | 0 | 32 | | | | |
| Total | 2 | 24 | | | | |

Date: 08.02.2023 Place: Mysore Sd/- Dhirendra Kumar R. Mehta, Advocate, KEY-ANS LAW SOLUTIONS



ಕರ್ನಾಟಕ ಸರ್ಕಾರ

**ಕಾರ್ಯದರ್ಶಿಗಳ ಕಾರ್ಯಾಲಯ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ**

ಮಹದೇಶ್ವರ ಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ದೂರವಾಣಿ ಸಂಖ್ಯೆ: 08225-272128 ಫ್ಯಾಕ್ಸ್ ಸಂಖ್ಯೆ : 08225-272123 Email:sec.mmtemple@gmail.com

ಸಂಖ್ಯೆ: ಶ್ರೀ ಮ.ಮ.ಕ್ಷೇತ್ರ ಅ.ಪ್ರಾ/ಗುತ್ತಿಗೆ/8/ಟಿಆರ್/ / 2023-24 ದಿನಾಂಕ: 06-02-2024

**ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ**

**ಕರ್ನಾಟಕ ಸಾರ್ವಜನಿಕ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ**

| ಕ್ರ.ಸಂ. | ಹಕ್ಕುಬಾಧ್ಯತೆಗಳ ವಿವರ | ಗುತ್ತಿಗೆ ಅವಧಿ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಪ್ರಾಥಮಿಕ ಆರೋಗ್ಯ ಕೇಂದ್ರ ಮುಂಭಾಗ ಹೊಸದಾಗಿ ನಿರ್ಮಿಸಿರುವ ಪಾರ್ಕಿಂಗ್ ಯಾರ್ಡ್‌ನಲ್ಲಿ ವಾಹನ ನಿಲುಗಡೆ ಶುಲ್ಕ ವಸೂಲಾತಿ ಹಕ್ಕುಬಾಧ್ಯತೆಯನ್ನು ಇ-ಟೆಂಡರ್‌ನಲ್ಲಿ ಬಿಡುವ ಬಗ್ಗೆ | 1 ವರ್ಷ | 15.00 | 50,000-00 |
| 2 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಸಂಕಮ್ಮ ನಿಲಯ ಆವರಣದಲ್ಲಿ ಉಪಹಾರ ವರ್ತಿನಿ, ತೇಷಣ್ಣ ಒಡೆಯರ್ ಗದ್ದಿಗೆ ಮುಂಭಾಗದಲ್ಲಿರುವ ಉಪಹಾರ ವರ್ತಿನಿಯನ್ನು ಇ -ಟೆಂಡರ್‌ನಲ್ಲಿ ಬಿಡುವ ಬಗ್ಗೆ. | 1 ವರ್ಷ | 4.50 | 50,000-00 |
| 3 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಪಿ.ಆರ್.ಹೆಚ್ ರಸ್ತೆಯಲ್ಲಿರುವ ಟೀ ಸ್ಟಾಲ್, ಸಂಕಮ್ಮ ನಿಲಯ ರಸ್ತೆಯಲ್ಲಿರುವ ಟೀ ಸ್ಟಾಲ್, ಸಾಲೂರು ಮಠಕ್ಕೆ ಹೋಗುವ ರಸ್ತೆಯ ಟೀ ಸ್ಟಾಲ್ ಮತ್ತು ಶ್ರೀಶೈಲ ಭವನ ವಸತಿ ಗೃಹದ ಮುಂಭಾಗದ ಟೀಸ್ಟಾಲ್‌ನ್ನು ಇ -ಟೆಂಡರ್‌ನಲ್ಲಿ ಬಿಡುವ ಬಗ್ಗೆ | 1 ವರ್ಷ | 7.00 | 50,000-00 |
| 4 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಬಸ್ ನಿಲ್ದಾಣದ ಜೋಡಿ ಹೋಟೆಲ್ ನಂ.1ನ್ನು ಇ ಟೆಂಡರ್‌ನಲ್ಲಿ ಬಿಡುವ ಬಗ್ಗೆ | 1 ವರ್ಷ | 22.00 | 50,000-00 |
| 5 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ದಾಸೋಹ ಭವನದ ಎದುರುಗಡೆ ಹೊಸದಾಗಿ ನಿರ್ಮಿಸಿರುವ ಪಾದರಕ್ಷೆಯನ್ನು ಬಿಡುವ ಕೌಂಟರ್‌ನ್ನು ಇ-ಟೆಂಡರ್‌ನಲ್ಲಿ ಬಿಡುವ ಬಗ್ಗೆ | 1 ವರ್ಷ | – | 10,000-00 |

| ಕ್ರ.ಸಂ. | ಮಳಿಗೆಗಳ ವಿವರ | ಇಎಂಡಿ ಮೊತ್ತ | ವರ್ಗ ಮತ್ತು ಮಳಿಗೆ ಸಂಖ್ಯೆ |
|---|---|---|---|
| 6 | ಬಸ್ ನಿಲ್ದಾಣದ ವಾಣಿಜ್ಯ ಸಂಕೀರ್ಣ ಮಳಿಗೆಗಳ ಪೈಕಿ 5 ಮಳಿಗೆಗಳು, 11 ತಿಂಗಳು ಮಾತ್ರ | 10,000.00 | 1) ಸಾಮಾನ್ಯವರ್ಗ:- (04 ಮಳಿಗೆಗಳು)- 09,12,28,29<br>2) ಪರಿಶಿಷ್ಟ ಜಾತಿಗೆ – (1 ಮಳಿಗೆ) : 21 |
| 7 | ಬಸ್ ನಿಲ್ದಾಣದ ಹತ್ತಿರದ 90 ಎ.ಸಿ. ಶೀಟ್ ಮಳಿಗೆಗಳ ಪೈಕಿ 17 ಮಳಿಗೆಗಳು, 11 ತಿಂಗಳು ಮಾತ್ರ | 10,000.00 | 1) ಸಾಮಾನ್ಯವರ್ಗ:- (13 ಮಳಿಗೆಗಳು)-1,9,38,54,58,59,68,69 70,78,83,87,88<br>2) ಪರಿಶಿಷ್ಟ ಜಾತಿಗೆ -(3 ಮಳಿಗೆ): 42,66,82<br>3) ಪರಿಶಿಷ್ಟ ಪಂಗಡ -(1 ಮಳಿಗೆ): 40 |
| 8 | ಮೂಡಲ ಮಲೆ ವಾಣಿಜ್ಯ ಸಂಕೀರ್ಣ 5 ಮಳಿಗೆಗಳು 11 ತಿಂಗಳು ಮಾತ್ರ | 30,000.00 | 1) ಸಾಮಾನ್ಯವರ್ಗ:- (04 ಮಳಿಗೆ) 4, 10, 35, 48<br>2) ಪರಿಶಿಷ್ಟ ಜಾತಿಗೆ – (1 ಮಳಿಗೆ): 42 |
| 9 | ಅಂತರಗಂಗೆ ಸಾಲು ಮಳಿಗೆಗಳ ಪೈಕಿ 8 ಮಳಿಗೆಗಳು 11 ತಿಂಗಳು ಮಾತ್ರ | 30,000.00 | 1) ಸಾಮಾನ್ಯವರ್ಗ:- (07 ಮಳಿಗೆ) 2,06,10,14,16,26,27<br>2) ಪರಿಶಿಷ್ಟ ಜಾತಿಗೆ – (1 ಮಳಿಗೆ): 13 |
| 10 | ತಂಬಡಿಗೇರಿಗೆ ಹೋಗುವ ರಸ್ತೆಯ ವಾಣಿಜ್ಯ ಸಂಕೀರ್ಣ-02, 11 ತಿಂಗಳು ಮಾತ್ರ | 30,000.00 | 1) ಸಾಮಾನ್ಯವರ್ಗ:- (02 ಮಳಿಗೆ) ಮಳಿಗೆ ಸಂಖ್ಯೆ : 1 & 3 |
| 11 | ತಾಳಬೆಟ್ಟ ವಾಣಿಜ್ಯ ಸಂಕೀರ್ಣ - 2 ಮಳಿಗೆಗಳು 11 ತಿಂಗಳು ಮಾತ್ರ | 10,000.00 | 1) ಸಾಮಾನ್ಯವರ್ಗ:- (02 ಮಳಿಗೆಗಳು)-12 & 13 |

ವಿವರಗಳನ್ನು https://kppp.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ಸ್ಪಷ್ಟೀಕರಣಬೇಕಾದಲ್ಲಿ ಕಾರ್ಯದರ್ಶಿಯವರ ಮೊಬೈಲ್ ನಂ. 8277682882 ಸಂಪರ್ಕಿಸ ತಕ್ಕದ್ದು.

**ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ**

| ಕ್ರ.ಸಂ. | ವಿವರ | ದಿನಾಂಕ | ಷರಾ |
|---|---|---|---|
| 1 | ಇ-ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆಗಳು ಚಾಲ್ತಿಗೆ ಬರುವ ದಿನಾಂಕ | 06-02-2024 | ರ ನಂತರ |
| 2 | ಇ-ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ವೇಳೆ | 21-02-2024 | ಸಂಜೆ 5.00 ಗಂಟೆವರೆಗೆ |
| 3 | ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ | 22-02-2024 | ಇ-ಟೆಂಡರ್ ಸಂಜೆ 5.00 ಗಂಟೆಯ ನಂತರ ತೆರೆಯಲಾಗುವುದು |

ಸಹಿ/– ಕಾರ್ಯದರ್ಶಿ
ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ
ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟ

ಸಂ:ವಾಸಾಸಂಇ:ಚಾ.ನಗರ:380:2023-24